# ಹೊಸ ಮನುಷ್ಯ ಸಮಾಜವಾದಿ ಮಾಸಿಕ

ಸೆಪ್ಟಂಬರ್, ೨೦೧೩ ಸಂಪುಟ: ೩ ಸಂಚಿಕೆ ೨

ಸಂಪಾದಕ : ಡಿ.ಎಸ್.ನಾಗಭೂಷಣ

**ಚಂದಾ :** ವಾರ್ಷಿಕ: ರೂ. ೧೫೦/-(ವ್ಯಕ್ತಿಗಳಿಗೆ) ರೂ.೨೫೦/-(ಸಂಸ್ಥೆ/ಗ್ರಂಥಾಲಯಗಳಿಗೆ) ಬಿಡಿ ಪ್ರತಿ: ರೂ.೧೫/-



**ವಿಳಾಸ:** ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

**ದೂ:** ೦೮೧೮೨-೨೪೮೫೭೪ **ಸಂಚಾರಿ:** ೯೪೪೯೭೨ ೪೭೨೮೪ **ಈ ಮೇಲ್:** dsnagabhushana@gmail.com


## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ನಿಮ್ಮ ಈ ಪತ್ರಿಕೆಯ ವಿಶೇಷಾಂಕಕ್ಕೆ ನೀವು ನೀಡಿರುವ ಸ್ವಾಗತ ನಮ್ಮ ಆತ್ಮ ವಿಶ್ವಾಸವನ್ನು ಹೆಚ್ಚಿಸಿದೆ. ಎಲ್ಲೆಡೆಯಿಂದಲೂ ಮೆಚ್ಚುಗೆಯ ಮಹಾಪೂರವೇ ಹರಿದು ಬಂದಿದೆ. ಕೆಲವರು ಈ ಮೆಚ್ಚುಗೆಯ ದ್ಯೋತಕವಾಗಿ ಪ್ರೋತ್ಸಾಹಕ ಧನವನ್ನೂ ಕಳಿಸಿದ್ದಾರೆ. ಇವರಿಗೆಲ್ಲ ನಮ್ಮ ಕೃತಜ್ಞತಾಪೂರ್ವಕ ವಂದನೆಗಳು. ಆದರೆ ಇದರ ಜೊತೆಗೇ ಒಂದು ದುಃಖದ ಸಂಗತಿಯೆಂದರೆ, ಈಗ ಸಂಚಾರಿ ದೂರವಾಣಿಯೆಂಬುದೊಂದು ಬಂದು ಎಲ್ಲವೂ ವೈಯುಕ್ತಿಕ ನೆಲೆಯ ಮಾತುಗಳಲ್ಲೇ ಕಳೆದುಹೋಗುತ್ತಿರುವುದು. ಅಭಿಪ್ರಾಯಗಳನ್ನು ಪತ್ರ ಮುಖೇನ ದಾಖಲಿಸುವುದು ಕಾಲ ವ್ಯಯ, ಶಕ್ತಿ ವ್ಯಯ ಎಂಬ ಜಾಗತೀಕರಣದ ಶಾಪಗಳಿಗೆ ಸಿಕ್ಕು ಸಾಮಾಜಿಕ ಸಂವಾದ ಎಂಬ ಪರಿಕಲ್ಪನೆಯೇ ಬಿಕ್ಕಟ್ಟಿಗೆ ಸಿಕ್ಕಿಕೊಂಡಿರುವುದು. ಆಧುನಿಕ ತಂತ್ರಜ್ಞಾನದ ಸೌಲಭ್ಯಗಳು ಒಂದೆಡೆ, ಒಂದರ್ಥದಲ್ಲಿ ಮಾನವನ ಬದುಕಿಗೆ ಕೆಲವು ಅನುಕೂಲತೆಗಳನ್ನು ಒದಗಿಸಿದೆಯಾದರೂ, ಇನ್ನೊಂದೆಡೆ ಅವನ ಸಾಮಾಜಿಕ ಸಂಬಂಧಗಳನ್ನು ಒಂದು ರೀತಿಯಲ್ಲಿ ಔಪಚಾರಿಕವಾಗಿಸಿದೆ ಅಥವಾ ಜಡಗೊಳಿಸಿದೆ ಎಂದೇ ಹೇಳಬೇಕು. ಪರಸ್ಪರ ಭೇಟಿಗಳ ಮುಖಾಮುಖಿ ಸಂವಾದದ ಜೀವಂತಿಕೆ ಹೋದ ನಂತರ ಸಾಮೂಹಿಕ ಸಂವಾದದ ಸಾಮಾಜಿಕ ಸ್ಪಂದನಶೀಲತೆಯೂ ಕಳೆದು ಹೋಗತೊಡಗಿದೆ. ಅದೂ ಕಾಲ ವ್ಯಯ-ಶಕ್ತಿ ವ್ಯಯಗಳ ಹೆಸರಿನಲ್ಲಿ! ಇದರ ದೂರಗಾಮಿ ಸಾಮಾಜಿಕ ಪರಿಣಾಮಗಳನ್ನು ಕಲ್ಪಿಸಿಕೊಳ್ಳುವ ಸೂಕ್ಷ್ಮತೆಯನ್ನು ನಾವು ಕಳೆದುಕೊಳ್ಳಲಾರಂಭಿಸಿರುವುದೇ ಇದಕ್ಕೆ ಕಾರಣವಾಗಿದೆ.

ಈ ಪ್ರವೃತ್ತಿ ಎಲ್ಲಿಗೆ ಹೋಗಿದೆಯೆಂದರೆ, ಪತ್ರಿಕೆಯ ಚಂದಾ ತುಂಬುವುದಕ್ಕಾಗಿ ಅಂಚೆ ಕಛೇರಿಗೆ ಅಥವಾ ಬ್ಯಾಂಕಿಗೆ ಹೋಗಲು ಹಲವರಿಗೆ ಪುರುಸೊತ್ತಿಲ್ಲ ಅಥವಾ ಇದೆಲ್ಲ ಆಯಾಸದ ಕೆಲಸ. ಸಿಕ್ಕಾಗ ಕೊಡುವ ಭರವಸೆ! ಇವರು ಕೊಡುವ ಬಗ್ಗೆ ನನಗೆ ಏನೂ ಅನುಮಾನವಿಲ್ಲ. ಆದರೆ ಇವರ ಬಿಡುವಿಲ್ಲದ ಬದುಕಿನ ಈ ಆದ್ಯತೆಗಳ ರೀತಿ ಮತ್ತು ಮನೋಭಾವ ಹಲವು ಬಾರಿ ನಾನು ಪತ್ರಿಕೆಯನ್ನು ಮಾಡುತ್ತಿರುವುದು ಏತಕ್ಕಾಗಿ ಮತ್ತು ಯಾರಿಗಾಗಿ ಎಂದು ಕೇಳಿಕೊಳ್ಳತೊಡಗುವಂತೆ ಮಾಡಿದೆ. ಜನ, ಅದೂ ಯಾರನ್ನು ನಂಬಿ ಈ ಪತ್ರಿಕೆಯನ್ನು ಆರಂಭಿಸಲಾಗಿದೆಯೋ ಆ ಜನವೂ ಇಷ್ಟು ಅಸೂಕ್ಷ್ಮರಾಗಿ, ಸಂವೇದನಾಹೀನರಾಗಿ, ಬಿಡುವೇ ಇಲ್ಲದ ಸಂಪಾದನೆ ಮತ್ತು ಸುಖಗಳ ಸ್ಪರ್ಧಾತ್ಮಕತೆಯಲ್ಲೇ ಮುಳುಗಿ ಹೋಗಿರುವುದಾದರೆ, ಈ ಸಮಾಜವಾದದ ಧ್ಯಾನವಾದರೂ ಏಕೆ ಬೇಕು? ಆಗ ಅದು ಬಕ ಧ್ಯಾನ ಮಾತ್ರವೆನಿಸಿಕೊಂಡೀತು. ಇಂದು ಸಮಾಜವಾದದ ಧ್ಯಾನವೆಂದರೆ, ಒಂದು ಸಾಂಸ್ಕೃತಿಕ ನೆಲೆಯ ಧ್ಯಾನವೇ ಆಗಿರಬೇಕಾಗಿದೆ. ಅದು ಸಾಮಾಜಿಕ ವಿಷಮತೆಗಳಿಗೆ ಕಾರಣವಾಗುತ್ತಿರುವ ಕೆಲವರ ಅತಿ ಶ್ರೀಮಂತಿಕೆಯ ಧಾವಂತಿಕೆಯಿಂದ ದೂರವಾಗಿರುವ ಧ್ಯಾನ; ಅಶ್ಲೀಲವೆನಿಸಿಕೊಳ್ಳತೊಡಗಿರುವ ದುಡಿಮೆ ಎಂಬ ಶಬ್ದಕ್ಕೆ ಹೊಸ ಘನತೆ-ಗೌರವಗಳನ್ನು ಮರಳಿ ತಂದುಕೊಡುವ ಧ್ಯಾನ. ಸಮಾಜವಾದದ ಹೃದಯ ಸ್ಪಂದನವಾದ 'ಸಮತೆ' ಎಂಬುದು ಸಾಧಿತವಾಗುವ ದಾರಿಗಳು ಇವೇ ಅಲ್ಲವೇ? ಲೋಹಿಯಾ ಪ್ರಕಾರ 'ಸಮತೆ' ಎಂದರೆ ಆತ್ಯಂತಿಕ ಪರಿಣಾಮದಲ್ಲಿ ಆಂತರಿಕ ಪ್ರಶಾಂತಿ ಮತ್ತು ಬಾಹ್ಯ ಬಂಧುತ್ವದ ಸಾಧನೆಯೇ ಅಲ್ಲವೇ?

ಇದನ್ನೆಲ್ಲ ಹೇಳುವುದರ ಅಪಾಯವೂ ನನಗೆ ಗೊತ್ತು. ಇದನ್ನು ಓದಿದ ಕೆಲವು ಓದುಗರು ನನ್ನೊಡನೆ ದೂರವಾಣಿ ಸಂಭಾಷಣೆಯನ್ನೂ ನಿಲ್ಲಿಸಿಯಾರು! ಆದರೆ ಹೇಳಬೇಕಾದ್ದನ್ನು ಹೇಳಬೇಕಾದಾಗ ಹೇಳದೇ ಹೋಗಿದ್ದೇ, ಮಾಡಬೇಕಾದ್ದನ್ನು ಮಾಡಬೇಕಾದಾಗ ಮಾಡದೇ ಹೋಗಿದ್ದೇ ಇಂದಿನ ಎಲ್ಲ ಸಂಕಟಗಳಿಗೆ-ಅವು ಇವೆ ಎಂದು ಎನಿಸಿರುವವರಿಗಾದರೂ-ಕಾರಣವಾಗಿರುವುದು ಎಂದು ನಾನು ನಂಬಿದ್ದೇನೆ.

### ನಿರಾಶೆಗೊಳಿಸುತ್ತಿರುವ ಸಿದ್ಧರಾಮಯ್ಯ

ಇತ್ತ ನಮ್ಮ ಮುಖ್ಯಮಂತ್ರಿ ಸಿದ್ಧರಾಮಯ್ಯನವರನ್ನು ನೋಡಿ. ಅವರು ಸಮಾಜವಾದಿಯೋ ಅಲ್ಲವೋ; ಆಗಿದ್ದರೆ, ಅವರು ಹಾಗೆ ಉಳಿಯುವವರೋ ಇಲ್ಲವೋ ಅದು ಅವರಿಗೆ ಬಿಟ್ಟ ವಿಷಯ. ಆದರೆ ಅವರು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಾಗ ರಾಜ್ಯದ ಸಾಮಾನ್ಯ ಜನತೆಯ ಬಹುಭಾಗ, ಇದು ಅತ್ಯುತ್ತಮ ಆಯ್ಕೆ ಎಂದು ಸ್ವಾಗತಿಸಿತ್ತು. ಏಕೆಂದರೆ ಅವರು ಇತರ ನಾಯಕರಿಗೆ ಹೋಲಿಸಿದಂತೆ ವೈಯುಕ್ತಿಕ ಹಾಗೂ ರಾಜಕೀಯ ನೆಲೆಗಳೆರಡರಲ್ಲೂ ಸ್ವಚ್ಛ ಬಿಂಬವನ್ನು ಕಾಪಾಡಿಕೊಂಡಿದ್ದರು. ಅನುಭವಿ, ಸಮರ್ಥ ಆಡಳಿತಗಾರ ಕೂಡ ಎಂದೆನಿಸಿಕೊಂಡಿದ್ದರು. ಅದಕ್ಕೆ ತಕ್ಕಂತೆ ಸರ್ಕಾರ ರಚಿಸಿದಾಗ ಕೆಲವು ತತ್ವಗಳನ್ನು ಎತ್ತಿಹಿಡಿದ ಧೈರ್ಯ ತೋರಿದ್ದರು. ಆದರೆ ಈಗ, ಮೂರು ತಿಂಗಳ ಅಧಿಕಾರದ 'ಮಧುಚಂದ್ರ'ದ ನಂತರದಲ್ಲಿ ಅವರ ಬಿಂಬ ಮಸುಕಾಗತೊಡಗಿರುವುದು ನಿಜವಾಗಿಯೂ ವಿಷಾದದ ಸಂಗತಿಯೇ ಆಗಿದೆ.

ಯಾರದೇ ಸೋಲು-ಗೆಲುವು ಯಾವುದೇ ರಾಜಕೀಯ ಪರಿಣಾಮಗಳನ್ನೂ ಉಂಟು ಮಾಡದ ಈ ಗುಜರಿ ಲೋಕಸಭಾ ಉಪ ಚುನಾವಣೆಗಳನ್ನು ಅವರು ನಿರ್ವಹಿಸಿದ ರೀತಿಯನ್ನೇ ನೋಡಿ. ಅಲ್ಲಿ ಎರಡೂ ಕ್ಷೇತ್ರಗಳಲ್ಲಿ ಗೆದ್ದಿರಬಹುದು. ಆ ಬಗ್ಗೆ ಅವರೇನೂ ಬೀಗುವಂತಿಲ್ಲ. ಏಕೆಂದರೆ ಈ ಚುನಾವಣೆಗಳನ್ನು ಜನರ ನಿರೀಕ್ಷೆಯಂತೆ ಒಂದು ಸ್ವಚ್ಛ ರಾಜಕೀಯದ ಬುನಾದಿ ಹಾಕುವ ದಿಟ್ಟ ಕೆಲಸಕ್ಕಾಗಿ ಬಳಸಿಕೊಳ್ಳಬಹುದೆಂಬ ಕಲ್ಪನೆಯೇ ಇಲ್ಲದಂತೆ ಸಿದ್ಧರಾಮಯ್ಯ ವರ್ತಿಸಿ ಅವರ ಸಮರ್ಥಕರಿಗೆ ನಿರಾಶೆಯನ್ನೇ ಉಂಟುಮಾಡಿದ್ದಾರೆ. ಎದುರಾಳಿ ಪಕ್ಷದವರು ನಿಲ್ಲಿಸಿದ-ಆ ಇಬ್ಬರೂ ವಿಧಾನಸಭಾ ಚುನಾವಣೆಗಳಲ್ಲಿ ತಿರಸ್ಕರಿಸಲ್ಪಟ್ಟವರೂ, ದೇವೇಗೌಡರ ನಿರ್ಲಜ್ಜ ಕುಟುಂಬ ರಾಜಕಾರಣದ ಪ್ರತ್ಯಕ್ಷ ಮತ್ತು ಪರೋಕ್ಷ ಪ್ರತಿನಿಧಿಗಳೂ ಆದ-ಅಭ್ಯರ್ಥಿಗಳಿಗೆ ಸರಿಸಮನಾಗಿ ಪ್ರಜಾತಂತ್ರದ ಪರಿಕಲ್ಪನೆಗೆ ಪರಮ ಅನ್ಯಾಯ ಮಾಡುವಂತಹ ಅಭ್ಯರ್ಥಿಗಳನ್ನೇ ತಮ್ಮ ಪಕ್ಷ ಆರಿಸಲು ಸಿದ್ಧರಾಮಯ್ಯ

ಅವಕಾಶ ನೀಡಿದ್ದಾರೆ. ಈ ಡಿ.ಕೆ. ಸುರೇಶ್ ಮತ್ತು ರಮ್ಯಾ ಎಂಬುವವರು ಯಾರು, ಇದರ ಪರಿಣಾಮಗಳಾದರೂ ಏನು ಎಂಬ ಪರಿವೆಯೂ ಇಲ್ಲದೆ ಅವರನ್ನು ಜನರ ಮೇಲೆ ಹೇರಿ ಮೆರೆಸುವ ಕೆಲಸ ನಿಜವಾಗಿಯೂ ಪ್ರಜಾತಂತ್ರ ವಿರೋಧಿ ಕೆಲಸವೇ ಆಗಿದೆ.

ಈ ಉಪ ಚುನಾವಣೆಗಳಲ್ಲಿ ಹಠ ಹಿಡಿದಾದರೂ, ಜೀವ ಕಳೆದುಕೊಳ್ಳುತ್ತಿರುವ ಸಂಸದೀಯ ಪ್ರಜಾಪ್ರಭುತ್ವಕ್ಕೆ ಒಂದಿಷ್ಟು ಉಸಿರು ತುಂಬುವ ಸಾಂಕೇತಿಕ ಪ್ರಯತ್ನವಾಗಿಯಾದರೂ ಒಳ್ಳೆಯ ಅಭ್ಯರ್ಥಿಗಳನ್ನು ನಿಲ್ಲಿಸಿ ಸೋಲು ಕಂಡಿದ್ದರೂ, ಅಂತಹ ರಾಜಕೀಯ ಅನಾಹುತವೇನೂ ಆಗುತ್ತಿರಲಿಲ್ಲ. ಆದರೆ ಜನರಿಗೆ ಒಳ್ಳೆಯ ಆಯ್ಕೆಯೇ ಇಲ್ಲದಂತೆ ಮಾಡುವ ದುಷ್ಟ ಕೆಲಸದಲ್ಲಿ ಸಿದ್ಧರಾಮಯ್ಯನವರೂ ಭಾಗಿಯಾಗಿರುವುದು ನಿಜವಾಗಿ ದುಃಖದ ಸಂಗತಿಯೇ ಆಗಿದೆ. ಈ ಚುನಾವಣೆಗಳ ಜೊತೆಗೇ ವಿಧಾನ ಪರಿಷತ್ತಿನ ಎರಡು ಸ್ಥಾನಗಳಿಗಾಗಿ ನಡೆದ ಚುನಾವಣೆಗಳಲ್ಲಿ ಬಟ್ಟಾ ಬಹಿರಂಗವಾಗಿ ಮತ್ತು ವ್ಯವಸ್ಥಿತವಾಗಿ ಎರಡೂ ಕಡೆಯಿಂದ ಹರಿದ ಹಣದ ಪ್ರವಾಹ ಇದನ್ನು ಮತ್ತಷ್ಟು ಪುಷ್ಟೀಕರಿಸುವಂತಿದೆ. ಏಕೆಂಬ ಸ್ಪಷ್ಟತೆಯೇ ಇಲ್ಲದೇ ಮುಖ್ಯ ಮಂತ್ರಿಯಾಗುವುದನ್ನು ತಮ್ಮ ಜೀವನದ ಏಕೈಕ ಗುರಿಯನ್ನಾಗಿಸಿಕೊಂಡು ಅದನ್ನು ಈಗ ಪಡೆದಿರುವ ಸಿದ್ಧರಾಮಯ್ಯನವರಿಗೆ ಅದನ್ನು ಉಳಿಸಿಕೊಂಡು ಹೋಗುವುದಷ್ಟೇ ಈಗಿನ ಅವರ ಜೀವನದ ಏಕೈಕ ಉದ್ದೇಶವಾಗಿರುವಂತಿದೆ. ಹಾಗಾಗಿಯೇ ಅವರಿಗೆ ಜನತೆಯ ನಿರೀಕ್ಷೆಗಿಂತ ಪಕ್ಷದ ಹೈಕಮಾಂಡ್‌ನ ಅಪೇಕ್ಷೆಯನ್ನು ಈಡೇರಿಸುವುದೇ ಮುಖ್ಯವಾಗಿಬಿಟ್ಟಿದೆ. ಮುಖ್ಯಮಂತ್ರಿಯಾದೊಡನೆ ಅವರು ಪೂಜೆ–ಹರಕೆ–ರಾಹುಕಾಲ–ಗುಳಿಕಕಾಲಗಳನ್ನು ನಂಬತೊಡಗಿರುವ ಮರ್ಮವಾದರೂ ಇದೇ ಇರುವಂತೆ ಕಾಣುತ್ತದೆ.

ಒಟ್ಟಿನಲ್ಲಿ, ಯಾವ ನಾಯಕನೇ ಬರಲಿ, ಆತ ಈ ವ್ಯವಸ್ಥೆಯನ್ನು ಬದಲಾಯಿಸುವ ಸಣ್ಣ ಪ್ರಯತ್ನವನ್ನೂ ಮಾಡಲಾಗದ ರಾಜಕೀಯ ಸ್ಥಿತಿಯಲ್ಲಿ ಇಂದು ನಾವಿದ್ದೇವೆ ಎಂಬುದು ಇದರಿಂದ ಗೊತ್ತಾಗುತ್ತಿದೆ. ಈ ರಾಜಕೀಯ ವ್ಯವಸ್ಥೆಯ ಎಲ್ಲ ಪಾಲುದಾರರೂ ಇದನ್ನೊಂದು ಉದ್ಯಮವನ್ನಾಗಿ ಮಾಡಿಕೊಂಡು ತಂತಮ್ಮ ಪಾಲಿನ ಲಾಭವನ್ನು ಹಿರಿದುಕೊಳ್ಳಲು ಮಾತ್ರ ತಮ್ಮೆಲ್ಲ ಭಿನ್ನಾಭಿಪ್ರಾಯಗಳನ್ನು ಮರೆತು ಒಂದಾಗುವಂತಹ ವಿದ್ಯಮಾನವನ್ನು ನಾವಿಂದು ನೋಡುತ್ತಿದ್ದೇವೆ.

## ಸಂಸತ್ತಿನ ಜನದ್ರೋಹ

ಈ ವಿದ್ಯಮಾನವನ್ನು ಸ್ವಲ್ಪ ಮಟ್ಟಿಗಾದರೂ ನಿಯಂತ್ರಿಸಲು ಸಾರ್ವಜನಿಕ ಹಿತಾಸಕ್ತಿಯ ಅರ್ಜಿಗಳ ವಿಚಾರಣೆ ಮೂಲಕ ನಮ್ಮ ಸರ್ವೋನ್ನತ ನ್ಯಾಯಾಲಯ ಮಾಡಿದ ಪ್ರಯತ್ನಗಳನ್ನು ನಿಷ್ಫಲಗೊಳಿಸಲು ನಮ್ಮ ಸಂಸತ್ತು ನಡೆಸಿರುವ ಪ್ರಯತ್ನದ ನಿರ್ಲಜ್ಜತನ ಯಾರನ್ನಾದರೂ ಬೆಚ್ಚಿಬೀಳುಸುವಂತಹುದೇ ಆಗಿದೆ. ಸಾರ್ವಜನಿಕ ರಂಗದ ಎಲ್ಲಕ್ಕೂ, ಎಲ್ಲರಿಗೂ ಅನ್ವಯವಾಗುವ ಮಾಹಿತಿ ಹಕ್ಕು ಕಾಯಿದೆ ರಾಜಕೀಯ ಪಕ್ಷಗಳಿಗೆ ಅನ್ವಯವಾಗದಂತೆ ಸಕಲ ರಾಜಕೀಯ ಪಕ್ಷಗಳ ಬೆಂಬಲದೊಂದಿಗೆ ಸರ್ಕಾರ ಕಾನೂನು ತಿದ್ದುಪಡಿ ತರಲು ಹೊರಟಿದೆ! ಹಾಗೇ, ಕ್ರಿಮಿನಲ್ ಮೊಕದ್ದಮೆಯೊಂದರಲ್ಲಿ ವಿಚಾರಣಾ ನ್ಯಾಯಾಲಯವೊಂದರಿಂದ ಸೆರೆಮನೆ ಶಿಕ್ಷೆಗೆ ಒಳಗಾದ ವ್ಯಕ್ತಿ ಆ ಶಿಕ್ಷೆಯ ಅವಧಿಯಲ್ಲಿ ತನ್ನ ಮೂಲ ಪ್ರಜಾಸತ್ತಾತ್ಮಕ (ಅಂದರೆ ಮತ ಹಾಕುವ ಮತ್ತು ಜನಪ್ರತಿನಿಧಿಯಾಗುವ) ಹಕ್ಕನ್ನು ಕಳೆದುಕೊಳ್ಳುತ್ತಾನೆಂಬ ಸರ್ವರಿಗೂ ಅನ್ವಯವಾಗುವ ಕಾನೂನಿನ ವ್ಯಾಪ್ತಿಯಿಂದ ನಮ್ಮ ಜನಪ್ರತಿನಿಧಿಗಳನ್ನೂ ಹೊರಗಿಡುವಂತಹ ಕಾನೂನು ತಿದ್ದುಪಡಿಯ ಪ್ರಯತ್ನ ನಡೆಸಿದೆ. ಮೊಕದ್ದಮೆಯ ಸಂಬಂಧವಾಗಿ ರಾಷ್ಟ್ರದ ಉಚ್ಛ ನ್ಯಾಯಾಲಯದ ತೀರ್ಪು ಬರುವವರೆಗೂ–ಅಂದರೆ, ಈಗ ಹಲವು ಪ್ರಕರಣಗಳಲ್ಲಿ ನಾವು ನೋಡುತ್ತಿರುವಂತೆ ಸಂಬಂಧಪಟ್ಟ ಜನ ಪ್ರತಿನಿಧಿಗಳ ಅಧಿಕಾರಾವಧಿ ಒಂದಲ್ಲ ಹಲವು ಬಾರಿ ಸಂಪೂರ್ಣ ಮುಗಿಯುವವರೆಗೂ–ಅವರ ಅನರ್ಹತೆ ಜಾರಿಯಾಗಬಾರದಂತೆ. ಇದು ನೇರವಾಗಿ ಜನಶಕ್ತಿಯ ಮುಖದ ಮೇಲೆ ಉಗುಳುವ ಕೆಲಸವೇ ಆಗಿದೆ. ಈ ಹಕ್ಕು ಅವರಿಗಿದೆಯಂತೆ! ಏಕೆಂದರೆ ಸಂಸತ್ತು ಜನತಾ ಶಕ್ತಿಯ ಪರಮೋಚ್ಛ ವೇದಿಕೆಯಂತೆ. ಆದರೆ ಪರಮೋಚ್ಛ ಭ್ರಷ್ಟತೆಯ ಮೂಲಕ ಚುನಾವಣಾ ವ್ಯವಸ್ಥೆಯನ್ನೇ ಕುಲಗೆಡಿಸಿ ತನ್ನ ಒಡಲಲ್ಲಿ ಮೂರನೇ ಒಂದಷ್ಟು ಭಾಗದಷ್ಟು ಪರಮ ಭ್ರಷ್ಟರನ್ನೇ ತುಂಬಿಕೊಂಡಿರುವ ಈ ಸಂಸತ್ತು ನೈತಿಕವಾಗಿಯಾದರೂ ಆ ಹಕ್ಕನ್ನು ಎಂದೋ ಕಳೆದುಕೊಂಡಿದೆ. ಇದನ್ನು ಜನತೆಗೆ ಮನದಟ್ಟು ಮಾಡಲು ಯತ್ನಿಸಿದ ಅಣ್ಣಾ ಹಜಾರೆ ಚಳುವಳಿಯನ್ನು ತನ್ನ ಸಕಲ ಭೇದೋಪಾಯಗಳ ಮೂಲಕ ದಮನ ಮಾಡಿರುವ ಸರ್ಕಾರವನ್ನು ಜನ ಈಗ ನೇರವಾಗಿ ಬೀದಿಗಿಳಿದು ಮುಖಾಮುಖಿಯಾಗುವ ಕಾಲ ಬಂದಿದೆ ಎನಿಸುತ್ತಿದೆ. ಇಲ್ಲದಿದ್ದರೆ ಇಲ್ಲಿ ಪ್ರಜಾಸತ್ತೆಗೆ ಉಳಿಗಾಲವಿದ್ದಂತಿಲ್ಲ.

## ಮೋದಿಯನ್ನು ಅನಿವಾರ್ಯಗೊಳಿಸುತ್ತಿರುವ ಕಾಂಗ್ರೆಸ್

ಈ ಬಿಕ್ಕಟ್ಟಿನ ಇನ್ನೊಂದು ಪಕ್ಕವನ್ನೂ ನಾವಿಂದು ಗಂಭೀರವಾಗಿ ಪರಿಗಣಿಸುವ ಕಾಲ ಬಂದಿದೆ ಎನಿಸುತ್ತಿದೆ. ಪ್ರಸಕ್ತ ಕೇಂದ್ರ ಸರ್ಕಾರ ತನ್ನ ಅಪಕ್ವ ಆರ್ಥಿಕ ಮತ್ತು ಆಡಳಿತ ನೀತಿಗಳಿಂದಾಗಿ ಇಂದು ಬೆಳವಣಿಗೆ ದರ, ರೂಪಾಯಿ ಮೌಲ್ಯ, ಹಣದುಬ್ಬರ, ನಿರುದ್ಯೋಗ ಸಮಸ್ಯೆ ಈ ಎಲ್ಲ ಸೂಚ್ಯಂಕಗಳ ನೆಲೆಯಲ್ಲೂ ದೇಶವನ್ನು ದಟ್ಟ ದರಿದ್ರ ಸ್ಥಿತಿಗೆ ತಂದು, ಸಾಮಾನ್ಯ ಜನತೆಯ ಬದುಕನ್ನು ಅತಿ ದಾರುಣಗೊಳಿಸಿ ಅವರ ದೃಷ್ಟಿಯಲ್ಲಿ ಈ ದೇಶಕ್ಕೆ ಮೋದಿಯನ್ನು ಅನಿವಾರ್ಯ ಮಾಡುತ್ತಿದೆಯೇನೋ ಎಂಬ ಆತಂಕ ಎಲ್ಲ ಪ್ರಜಾತಂತ್ರವಾದಿಗಳನ್ನೂ ಕಾಡತೊಡಗಿದೆ. ಈ ಸರ್ಕಾರದ ಸಾವಿರಾರು ಕೋಟಿ ರೂಪಾಯಿಗಳ ಭ್ರಷ್ಟಾಚಾರದ ಹಗರಣಗಳು ಮತ್ತು ಅವುಗಳ ವಿಚಾರಣೆಗೆ ತಡೆಯೊಡ್ಡುತ್ತಿರುವ–ಇತ್ತೀಚಿನ ಉದಾ: ಕಲ್ಲಿದ್ದಲು ಹಂಚಿಕೆ ಹಗರಣದ ಕಡತಗಳ ಕಣ್ಮರೆ–ರೀತಿ ನೀತಿಗಳು ಜನರನ್ನು ಹತಾಶೆಗೆ ದೂಡುತ್ತಿವೆ. ಕೋಮುವಾದದ ಗುಮ್ಮ ಮತ್ತು ಆಹಾರ ಭದ್ರತಾ ಕಾಯ್ದೆ ಎಂಬ ಆಮಿಷದ ಮರೆಯಲ್ಲಿ ಭ್ರಷ್ಟಾಚಾರದ ಹಣದ ಮೂಟೆಗಳನ್ನು ಅಡಗಿಸಿಡುವ ದುಷ್ಟ ಕೆಲಸ ನಡೆಯುತ್ತಿರುವ ಅನುಮಾನ ಜನತೆಯ ಮನಸ್ಸಿನಲ್ಲಿ ಹುಟ್ಟಲಾರಂಭಿಸಿದೆ. ಮೋದಿಯ ಕೈಗೆ ಈ ದೇಶ ಹೋಗುವುದಾದರೆ ಅದರ ಪಾಪವನ್ನು ಕಾಂಗ್ರೆಸ್ಸೇ ಹೊರಬೇಕಾಗುತ್ತದೆ. ಇದು ಈ ಪಕ್ಷ ೧೯೭೫ರಲ್ಲಿ ರಾಷ್ಟ್ರದ ಮೇಲೆ ತುರ್ತು ಪರಿಸ್ಥಿತಿಯನ್ನು ಹೇರಿ ಮಾಡಿದ ಪಾಪಕ್ಕಿಂತ ದೊಡ್ಡ ಪಾಪವಾಗುತ್ತದೆ.

ಇತ್ತೀಚಿನ ವಾಡ್ರಾ ಹಗರಣವನ್ನೇ ನೋಡಿ. ಅಧಿಕಾರದಲ್ಲಿರುವ ಕುಟುಂಬಗಳ ಸದಸ್ಯರು ಆ ಅಧಿಕಾರಾವಧಿಯ ಕಾಲದಲ್ಲಾದರೂ ದೊಡ್ಡ ವ್ಯಾಪಾರ–ವ್ಯವಹಾರಗಳಿಂದ ದೂರವುಳಿದಿರಬೇಕು ಎಂಬ ಸಾರ್ವಜನಿಕ ಜೀವನದ ಪ್ರಾಥಮಿಕ ನೀತಿ ಸಂಹಿತೆಯನ್ನು ಅಧಿಕಾರದ ಉನ್ನತ ವಲಯಗಳಲ್ಲೂ ಪಾಲಿಸಲಾಗದಿದ್ದರೆ ಗತಿಯೇನು? ಹಾಗಾಗಿಯೇ ನಮ್ಮ ಡಿ,ಕೆ. ಶಿವಕುಮಾರ್‌ರಂತಹವರು ರಾಜಕಾರಣಿಗಳಿಗೇನು ಹೊಟ್ಟೆ ಇಲ್ಲವೇ? ಹೊಟ್ಟೆಪಾಡಿಗಾಗಿ ಅವರು ಏನೂ ಮಾಡಬಾರದೆ? ಎಂದು ಕೇಳುವಂತಾಗಿರುವುದು. ಆದರೆ ಇವರ ಹೊಟ್ಟೆಗಳು ಮನುಷ್ಯ ಮಾತ್ರದವರ ಹೊಟ್ಟೆಗಳಾಗಿರಲಾರವು ಎಂಬುದೇ ಜನತೆಯ ಆಶ್ಚರ್ಯ ಮತ್ತು ಆತಂಕವಾಗಿದೆ!

## ಶಂಕರ ಬಿದರಿಯವರ ಸಮಾಜವಾದ!

ಈ ಮಧ್ಯೆ ಕೂರಲು ಕಾಂಗ್ರೆಸ್ಸಿನಲ್ಲಿ ಸರಿಯಾದ ಜಾಗ ಸಿಗದೆ ಹತಾಶರಾಗಿದ್ದ ನಮ್ಮ ನಿವೃತ್ತ ಪೋಲೀಸ್ ಅಧಿಕಾರಿ ಶಂಕರ ಬಿದರಿಯವರು ತಮ್ಮ ಉಳಿದಿರುವ ಆಯಸ್ಸಿನಲ್ಲಿ ಸಾರ್ವಜನಿಕ ಸೇವೆ ಮಾಡಲೇ ಬೇಕೆಂಬ ತುರ್ತಿನಲ್ಲಿ ಮುಲಾಯಂ ಸಿಂಗ್ ಯಾದವರ ಸಮಾಜವಾದಿ ಪಕ್ಷ ಸೇರಿ, ಅದರ ಅಧ್ಯಕ್ಷರೂ ಆಗಿ ಎಲ್ಲರ ಕನಿಕರಕ್ಕೆ ಪಾತ್ರರಾಗಿದ್ದಾರೆ! ಸಮಾಜವಾದ ಎಂಬ ಶಬ್ದಕ್ಕೇ ಅಪಮಾನ ಮಾಡುವಂತಿರುವ ಈ ಊಳಿಗಮಾನ್ಯಶಾಹಿ ರಾಜಕಾರಣದ ಪಕ್ಷದಲ್ಲಿ ತಮ್ಮದು ನಿಷ್ಕಳಂಕ ಸರ್ಕಾರಿ ಸೇವೆಯೆಂದು ಹೇಳಿಕೊಳ್ಳುವ ಈ ನಿವೃತ್ತ ಪೋಲೀಸ್ ಅಧಿಕಾರಿ ಯೋಗೀಶ್ವರನೆಂಬ ಅನುಮಾನಾಸ್ಪದ ವ್ಯಕ್ತಿಯ ಪಕ್ಕದಲ್ಲಿ ಎಷ್ಟು ನೆಮ್ಮದಿಯಿಂದ ಕೂತು ಎಂತಹ ಸಾರ್ವಜನಿಕ ಸೇವೆ ಮಾಡುವರೋ ಕಾದು ನೋಡಬೇಕಿದೆ!

**–ಸಂಪಾದಕ**

# ನಿಮ್ಮ ಪತ್ರ

## ತಡವಾಗಿ ಬಂದ ಒಂದು ಪತ್ರ

ಪ್ರಿಯ ಸಂಪಾದಕರೇ,

ನಾನು 'ಹೊಸ ಮನುಷ್ಯ'ದ ಮೊದಲ ಆರೇಳು ಸಂಚಿಕೆಗಳನ್ನು ಬಿಟ್ಟು ಉಳಿದ ಸಂಚಿಕೆಗಳನ್ನು ಓದಿದ್ದೇನೆ. ನನಗೆ ಈ ಪತ್ರಿಕೆಯ ಮುಖ್ಯ ಆಕರ್ಷಣೆಯೆಂದರೆ ಅದರ ಸಂಪಾದಕರಾದ ಡಿ.ಎಸ್. ನಾಗಭೂಷಣ ಅವರ ಲೇಖನಗಳು. ನಾನು ಕಳೆದ ಹಲವು ವರ್ಷಗಳಲ್ಲಿ ನಮ್ಮ ಪ್ರಗತಿಪರ ವಿಚಾರವಾದಿಗಳ, ಸಮಾಜವಾದಿಗಳ ಮತ್ತು ಇತರ 'ಜನಪರ' ಹೋರಾಟಗಾರರ, ಲೇಖಕರ ಬರಹಗಳನ್ನು ಓದಿದ್ದೇನೆ. ಅವುಗಳಲ್ಲಿ ನಮ್ಮ ಸಮಾಜದ ಸ್ಥಿತಿ ಗತಿಗಳ ಬಗ್ಗೆ ಹೆಚ್ಚೂ ಕಡಿಮೆ ಒಂದೇ ರೀತಿಯ ವಿಚಾರ ಸರಣಿ ಮತ್ತು ವಿಶ್ಲೇಷಣೆಗಳಿರುವುದನ್ನು ಕಂಡಿದ್ದೇನೆ. ನಾಗಭೂಷಣ ಅವರು ಸಮಾಜವಾದಿ ಸಮಾಜದ ನಿರ್ಮಾಣದ ಪರವಾಗಿಯೇ ಇದ್ದರೂ, ಅವರ ವಿಚಾರ ಮಂಡನೆಗಳಲ್ಲಿ ಸಮಕಾಲೀನ ವಾಸ್ತವಗಳ ಕಡೆ ಹೆಚ್ಚು ಗಮನ ಇದೆ. ಈ ವಾಸ್ತವಗಳನ್ನು ಗಮನಿಸಿ ಅವರು ತಮ್ಮ ವಿಚಾರಗಳನ್ನು ಮತ್ತೆ ಮತ್ತೆ ವಿಮರ್ಶಿಸಿಕೊಳ್ಳುವ ಅಗತ್ಯವನ್ನು ಕಂಡುಕೊಂಡಿರುವುದು ಕಂಡುಬರುತ್ತದೆ. ಇತರ ವಿಚಾರವಾದಿಗಳ ಬರಹಗಳಲ್ಲಿ ಇಂತಹ ಸ್ವವಿಮರ್ಶೆ ಕಂಡುಬರುವುದಿಲ್ಲ.

ಇದೇ ಮೇ ತಿಂಗಳ ಸಂಚಿಕೆಯಲ್ಲಿ ನಾಗಭೂಷಣ ಅವರು ಬರೆದ 'ಬುದ್ಧನ ನೆನಪಿನಲ್ಲಿ ಕೆಲವು ಸತ್ಯಗಳನ್ನು ಧ್ಯಾನಿಸುತ್ತಾ' ಎಂಬ ಲೇಖನ ವಿಫುಲವಾದ ಸಾಕ್ಷ್ಯಾಧಾರಗಳ ಮೂಲಕ ನಮ್ಮ ಪ್ರಗತಿಪರರು ಬುದ್ಧನ ಚಿಂತನೆಗಳ ಬಗ್ಗೆ ಮತ್ತು ಈ ದೇಶದಲ್ಲಿ ಬೌದ್ಧ ಮತದ ಅವಸಾನಕ್ಕೆ ಕಾರಣಗಳನ್ನು ಗುರುತಿಸುವಲ್ಲಿ ಮಾಡಿರುವ ಪ್ರತಿಪಾದನೆಗಳಲ್ಲಿರುವ ತಪ್ಪುಗಳನ್ನು ಗುರುತಿಸಿದ್ದಾರೆ. ಕಳೆದ ಹಲವಾರು ವರ್ಷಗಳಲ್ಲಿ ನಾಗಭೂಷಣರು ಇದೇ ರೀತಿಯ ತಮ್ಮ ಚಿಂತನೆಗಳನ್ನು ಈ ವಿಷಯದ ಬಗ್ಗೆ ಮಂಡಿಸಿದ್ದರೂ ನಮ್ಮ ಪ್ರಗತಿಪರರು ಅವುಗಳಿಗೆ ಸ್ಪಂದಿಸಿದಂತೆ ಕಾಣುತ್ತಿಲ್ಲ.

ಬಾಲಗಂಗಾಧರ ಅವರ ವಿಚಾರಗಳನ್ನು ನಾಗಭೂಷಣ ಅವರೂ ಇತರ ಪ್ರಗತಿಪರರಂತೆ ಗೇಲಿ ಮಾಡಿ ನಿರಾಕರಿಸಿದ ರೀತಿ ನನಗೆ ಒಪ್ಪಿಗೆಯಾಗಲಿಲ್ಲ. ಆದರೆ ಅವರು ಜಾತಿ ಪದ್ಧತಿ ಕುರಿತ ನಮ್ಮ ಈವರೆಗಿನ ತಿಳುವಳಿಕೆಯಲ್ಲಿ ಕೊರತೆಗಳಿವೆ ಎಂದೂ ಹೇಳಿರುವುದರಿಂದ ಈ ವಿಷಯದಲ್ಲಿ ಅವರ ನಿಲುವು ಬದಲಾಗಲೂಬಹುದು.

ಈ ಹಿಂದಿನ ಒಂದು ಸಂಚಿಕೆಯಲ್ಲಿ ಪದವಿಪೂರ್ವ ಕಾಲೇಜೊಂದರ ಅಧ್ಯಾಪಕಿಯೊಬ್ಬರು ತಮ್ಮ ತರಗತಿಗಳ ಗ್ರಾಮೀಣ ವಿದ್ಯಾರ್ಥಿಗಳ ಕಷ್ಟ ಕಾರ್ಪಣ್ಯಗಳ ಬಗ್ಗೆ ಬರೆದದ್ದು ನನ್ನ ಮನಸ್ಸನ್ನು ಕಾಡಿತು. 'ಹೊಸ ಮನುಷ್ಯ'ದಲ್ಲಿ ನಮ್ಮ ಸಮಾಜದಲ್ಲಿನ ಇಂತಹ ವಾಸ್ತವಗಳ ಬಗ್ಗೆ ಇನ್ನೂ ಹೆಚ್ಚಿನ ಲೇಖನಗಳು ಬರಬೇಕು. ನಮ್ಮ ಸರ್ಕಾರಿ ಆಡಳಿತ ವ್ಯವಸ್ಥೆ ಜನಸ್ಪಂದಿಯಾಗಿಲ್ಲದಿರುವುದಕ್ಕೆ ಇರುವ ಕಾರಣಗಳನ್ನು ಗುರುತಿಸುವುದಕ್ಕೆ ಆದ್ಯತೆ ನೀಡಬೇಕು. ನಮ್ಮ ಪದವಿ ಶಿಕ್ಷಣದಲ್ಲಿ ಕನ್ನಡ ಮಾಧ್ಯಮ ಜನಪ್ರಿಯವಾಗುತ್ತಿದೆ. ಇದರ ಬಗ್ಗೆ ವಿದ್ಯಾರ್ಥಿಗಳಿಂದ ಅನುಭವ ಕಥನಗಳನ್ನು ಬರೆಸಿ ಪ್ರಕಟಿಸಿದರೆ ಉಪಯುಕ್ತವಾಗುತ್ತದೆ.

**–ಗಿರೀಶ ವಾಘ್**, ಬೆಂಗಳೂರು

## ಎಲ್ಲ ಭಾರತೀಯ ಭಾಷೆಗಳ ಅಳಿವು ಉಳಿವಿನ ಪ್ರಶ್ನೆ

ವಿಶೇಷಾಂಕ ತುಂಬಾ ಚೆನ್ನಾಗಿ ಬಂದಿದೆ. ಅದರಲ್ಲಿ ಶಾಲಾ ಶಿಕ್ಷಣ ಮಾಧ್ಯಮ ಕುರಿತ ನಿಮ್ಮ ಟಿಪ್ಪಣಿ ಓದಿದೆ. ಈಗ ವಿಷಯ ಸಂವಿಧಾನ ಪೀಠಕ್ಕೆ ಹೋಗಿರುವುದರಿಂದ ನ್ಯಾಯಾಲಯಕ್ಕೆ ವಿಷಯದ ಗಾಂಭೀರ್ಯತೆ ಅರಿವಾಗಿದೆ ಎಂದೇ ಹೇಳಬೇಕು. ಹಾಗೇ ಈ ಕಾರಣದಿಂದಾಗಿಯೇ ಇದು ಕೇವಲ ಕನ್ನಡದ ಪ್ರಶ್ನೆಯಾಗಿರದೆ ಎಲ್ಲ ಭಾರತೀಯ ಭಾಷೆಗಳ ಪ್ರಶ್ನೆಯೂ ಆಗಿ ಮಾರ್ಪಾಡಾಗಿದೆ. ಹಾಗಾಗಿ ಇತರ ಭಾಷಿಕರ ಸಹಕಾರದೊಂದಿಗೆ ನಾವು ಈ ಪ್ರಕರಣವನ್ನು ನಿರ್ವಹಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಅಕಾಡೆಮಿ ಸದಸ್ಯರಾದ ಡಾ.ಎಂ.ಎಂ. ಕಲಬುರ್ಗಿಯವರು ಅಕಾಡೆಮಿಯ ಬರಲಿರುವ ಸಾಮಾನ್ಯ ಸಭೆಯಲ್ಲಿ ಈ ವಿಷಯವನ್ನೆತ್ತಿ, ಅಕಾಡೆಮಿಯನ್ನೂ ಭಾರತೀಯ ಭಾಷೆಗಳ ಪರ ಒಂದು ಪಕ್ಷ ಮಾಡುವ ಪ್ರಯತ್ನವೂ ನಡೆದಿದೆ.

ಇದರ ಜೊತೆಗೆ ನಮ್ಮವರೂ ಸೇರಿದಂತೆ ವಿವಿಧ ಭಾಷೆಗಳ ಜ್ಞಾನಪೀಠ ಪುರಸ್ಕೃತರೂ ನ್ಯಾಯಾಲಯದ ಮುಂದೆ ಬಂದು ಭಾರತೀಯ ಭಾಷೆಗಳ ಪರವಾಗಿ ಬರುವುದಾದರೆ ಒಳ್ಳೆಯದಾಗುವುದು. ನಾನೀಗಾಗಲೇ ಯು.ಆರ್. ಅನಂತಮೂರ್ತಿಯವರಿಗೆ ಈ ಬಗ್ಗೆ ಪತ್ರ ಬರೆದಿರುವೆ. ಮುಖ್ಯವಾಗಿ ಈ ಪ್ರಕರಣದಲ್ಲಿ ಕೇವಲ ಸರ್ಕಾರಿ ವಕೀಲರನ್ನವಲಂಬಿಸದೇ ಭಾಷೆ ಮತ್ತು ಶಿಕ್ಷಣದ ಬಗ್ಗೆ ಆಳವಾದ ತಿಳುವಳಿಕೆಯುಳ್ಳವರನ್ನೂ ಒಳಗೊಂಡ ತಂಡವೊಂದು ಈ ಪ್ರಕರಣವನ್ನು ನಿರ್ವಹಿಸಬೇಕು.

ಇಷ್ಟು ವರ್ಷಗಳಾದರೂ ನಮ್ಮ ಸರ್ಕಾರಕ್ಕೆ ನಿರ್ದಿಷ್ಟವಾದ ಭಾಷಾ ನೀತಿ ಎಂಬುದಿಲ್ಲ. ಈ ಪ್ರಕರಣದ ಮೂಲಕವಾದರೂ ಒಂದು ಭಾಷಾ ನೀತಿ ರೂಪಿತವಾಗಿ, ಏಕರೂಪದ ಶಿಕ್ಷಣದ ಪ್ರಶ್ನೆ ಮುಂಚೂಣಿಗೆ ಬರುವಂತಾಗಲಿ. ಆ ಮೂಲಕ ಮಾತ್ರ ಇಂಗ್ಲಿಷ್‌ನ ಪ್ರಹಾರ ತಡೆಯಲು ಸಾಧ್ಯ. ಇಲ್ಲದೇ ಹೋದರೆ ಕನ್ನಡ ಮಾತ್ರವಲ್ಲ, ಎಲ್ಲ ಭಾರತೀಯ ಭಾಷೆಗಳೂ ನೇಪಥ್ಯಕ್ಕೆ ಸರಿಯುವುದು ಖಂಡಿತ

**–ವೆಂಕಟೇಶ ಮಾಚಕನೂರ**, ಧಾರವಾಡ

## ಕೃಷ್ಣನನ್ನೂ ನಾಚಿಸಿದ ಶಾಮಣ್ಣ!

ವಿಶೇಷಾಂಕದ ಸಂಪಾದಕೀಯದಲ್ಲಿ 'ಅನ್ನ ಭಾಗ್ಯ'ದಂತಹ ಕಾರ್ಯಕ್ರಮಗಳು ಮಧ್ಯಂತರ ಕಾರ್ಯಕ್ರಮಗಳಾಗಿ ಸಮಾಜವಾದಿ ಆಡಳಿತ ನಿಜಾರ್ಥದಲ್ಲಿ ದುಡಿಯುವ ಕೈಗಳಿಗೆ ಕೆಲಸ ಕೊಟ್ಟು ಸಮಾಜವಾದಿ ಧರ್ಮ ಪಾಲಿಸಬೇಕೆಂದು ಸರಿಯಾಗಿ ಹೇಳಿದ್ದೀರಿ ಹಾಗೇ ಬಡತನ ರೇಖೆಯಲ್ಲಿರುವ ಕುಟುಂಬಗಳನ್ನು ಮಹಿಳಾ ಸಂಘಗಳ ಮಾದರಿಯಲ್ಲಿ ಕುಟುಂಬ ಸಂಘದಂತೆ ಮಾಡಿ ಸಣ್ಣ ಮಟ್ಟದ ಗುಡಿ ಕೈಗಾರಿಕೆಗಳನ್ನು ಪ್ರೋತ್ಸಾಹಿಸುವಂತಹ ಕಾರ್ಯಕ್ರಮಗಳನ್ನು ಚರ್ಚೆಗಳ ಮೂಲಕ ರೂಪಿಸಬೇಕಿದೆ. ಹಾಗೆಯೇ ಶಾಮಣ್ಣನವರು ಮಿಣಕಮ್ಮನನ್ನು ಯಾವ ಮಹಿಳಾ ಹೋರಾಟಗಾರರಿಗೂ ಕಮ್ಮಿ ಇಲ್ಲದಂತೆ ಚಿತ್ರಿಸಿ ಬಿಟ್ಟಿದ್ದಾರೆ. ಮಿಣಕಮ್ಮನ ಕಾಳಜಿ, ಪ್ರೀತಿ, ನಿಜಕ್ಕೂ ಅದ್ಭುತ. ಶಾಮಣ್ಣನವರು ವಿಶೇಷಾಂಕದ ಬಿಡುಗಡೆ ದಿನ ತಮ್ಮ ಇಳಿ ವಯಸ್ಸಿನಲ್ಲೂ ಕೊಳಲು ಹಿಡಿದು ಕೃಷ್ಣನೂ ನಾಚಿಕೊಳ್ಳುವಷ್ಟು ಕೊಳಲ ಭಂಗಿ ತೋರಿಸಿ ನುಡಿಸಿದ್ದರು. ಸಂಪಾದಕರು ಆ ಭಾವಚಿತ್ರವಿದ್ದರೆ ಓದುಗರಿಗಾಗಿ ತೋರಿಸಲು ಮನವಿ

**–ಅಪೂರ್ವ ಡಿ'ಸಿಲ್ವ**, ಚಾಮರಾಜನಗರ

ವಿಶೇಷ ಸಂಚಿಕೆ ಸಮಾಜವಾದದ ಬಗ್ಗೆ ಆಸಕ್ತಿಯುಳ್ಳವರಿಗೆ ಒಂದು ಸಂಗ್ರಹಯೋಗ್ಯ ಸಂಪುಟವಾಗಿ ಮೂಡಿ ಬಂದಿದೆ. ಚಿಂತನೆಗೆ ಹಚ್ಚುವ ಆತ್ಮ ವಿಮರ್ಶೆಗೆ ತೊಡಗಿಸುವ ಲೇಖನಗಳಿಂದಾಗಿ ಸಂಚಿಕೆ ಗಮನ ಸೆಳೆಯುವಂತಿದೆ. ತೇಜಸ್ವಿಯವರನ್ನು ಕುರಿತ ರಾಜೇಶ್ವರಿ ತೇಜಸ್ವಿಯವರೊಡನೆಯ ಸಂದರ್ಶನ ಅರ್ಥಪೂರ್ಣವಾಗಿದೆ. ಅದರೊಡನೆಯ ಫೋಟೋಗಳೂ ಕೂಡ.

**–ಕೆ. ಬಾಬು ಕಾಮಟಿ**, ಉಪ್ಪಳಗೆರೆ

ನಿಮ್ಮ ಮತ್ತು ಸವಿತಾ ಅವರ ಯೂರೋಪ್ ಪ್ರವಾಸ ಮತ್ತು ಉತ್ತರಾಖಂಡದ ನೆನಪುಗಳನ್ನು ಕುರಿತ ಲೇಖನಗಳು ಗಮನ ಸೆಳೆದವು. ಹಿಮಾಲಯದ ದುರಂತ ಕುರಿತ ನಿಮ್ಮ ಮಾತುಗಳು ಮನ ಕಲಕುವಂತಿದ್ದವು.


–ಡಾ. ಎಂ.ಜಿ. ಈಶ್ವರಪ್ಪ, ದಾವಣಗೆರೆ

# ತತ್ವ ಚಿಂತನೆಗಿಂತ ಜೀವನ ಶೈಲಿಯ ಪ್ರಶ್ನೆ ಇಂದು ಹೆಚ್ಚು ಪ್ರಸ್ತುತ: ಪ್ರಸನ್ನ



ಇಂದು ತತ್ವ ಪ್ರತಿಪಾದನೆ ಮತ್ತು ಸಂಘರ್ಷಗಳಿಗಿಂತ ಜೀವನಶೈಲಿಯ ಬದಲಾವಣೆ ಕಡೆ ಗಮನ ಹರಿಸಬೇಕಾಗಿದೆ ಎಂದು ಹಿರಿಯ ರಂಗಕರ್ಮಿ ಹಾಗೂ ಹೆಗ್ಗೋಡಿನ ಚರಕದ ರೂವಾರಿ ಪ್ರಸನ್ನ ಹೇಳಿದರು. ಅವರು ಇದೇ ಆಗಸ್ಟ್ ೧೧ರಂದು ಶಿವಮೊಗ್ಗದ ಕಮಲಾನೆಹ್ರೂ ಕಾಲೇಜಿನ ಕುವೆಂಪು ಸಭಾಂಗಣದಲ್ಲಿ ಆಯೋಜಿಸಿದ್ದ 'ಹೊಸ ಮನುಷ್ಯ' ಸಮಾಜವಾದಿ ಮಾಸಿಕ ಎರಡು ವರ್ಷಗಳನ್ನು ಪೂರೈಸಿದ ಸಂದರ್ಭದಲ್ಲಿ ಹೊರತರಲಾಗಿರುವ ವಾರ್ಷಿಕ ವಿಶೇಷಾಂಕವನ್ನು ಬಿಡುಗಡೆ ಮಾಡಿ ಮಾತನಾಡುತ್ತಿದ್ದರು. ಈ ವಿಶೇಷಾಂಕ ಹಳೆಯ ಸಮಾಜವಾದಿಗಳ ಜೀವನ ಶೈಲಿ ಮತ್ತು ಅದರ ಹಿಂದಿನ ಮೌಲ್ಯಗಳನ್ನು ನಿರೂಪಿಸುವ ಬರಹಗಳಿಗೆ ಹೆಚ್ಚು ಒತ್ತು ಕೊಟ್ಟಿರುವುದು ಶ್ಲಾಘನೀಯ ಎಂದೂ ಅವರು ನುಡಿದರು. ಇಂದು ನಾವು ಪ್ರಗತಿಪರರರೆನಿಸಿಕೊಂಡವರು ತತ್ವಗಳ ಸಣ್ಣ ಪುಟ್ಟ ವ್ಯತ್ಯಾಸಗಳಿಗೆ ಹೆಚ್ಚು ಮಹತ್ವ ನೀಡದೆ ಒಟ್ಟಿಗೆ ಕೆಲಸ ಮಾಡಬೇಕಿದೆಯೆಂದೂ ಪ್ರಸನ್ನ ಅಭಿಪ್ರಾಯಪಟ್ಟರು.

ಈ ಮೊದಲು ಪ್ರಾಸ್ತಾವಿಕ ಮಾತುಗಳನ್ನಾಡಿದ ಪತ್ರಿಕೆಯ ಸಂಪಾದಕರಾದ ಡಿ.ಎಸ್. ನಾಗಭೂಷಣ ಅವರು, ನಮ್ಮ ಸಾಂಸ್ಕೃತಿಕ ಬೇರುಗಳನ್ನೇ ತಿಂದು ಹಾಕುತ್ತಿರುವ ಜಾಗತೀಕರಣಕ್ಕೆ ಎದುರಾಗಿ ಸಮಾಜವಾದಿ ತತ್ವ ಹಾಗೂ ಮೌಲ್ಯಗಳನ್ನು ಪುನರನ್ವೇಷಿಸುವುದೇ ಪತ್ರಿಕೆಯ ಉದ್ದೇಶವಾಗಿದೆ ಎಂದರು.



ವಿಶೇಷಾಂಕದ ಬಗ್ಗೆ ಮಾತನಾಡಿದ ಲೇಖಕಿ ಹಾಗೂ ಅಧ್ಯಾಪಕಿ ಡಾ. ಸಬಿತಾ ಬನ್ನಾಡಿಯವರು ನಮ್ಮ ಜನಪ್ರಿಯ ಪತ್ರಿಕೆಗಳ ಬಹುತೇಕ ವಿಶೇಷಾಂಕಗಳು ನೇರವಾಗಿ ಕಸದ ಬುಟ್ಟಿಗೆ ಸೇರುವಂತಿದ್ದರೆ, 'ಹೊಸ ಮನುಷ್ಯ'ದ ವಿಶೇಷಾಂಕ ತನ್ನ ಪ್ರಖರ ವೈಚಾರಿಕತೆ ಮತ್ತು ಅಂದದ ವಿನ್ಯಾಸಗಳೆರಡರಿಂದಲೂ ಗಮನ ಸೆಳೆಯುತ್ತದೆ ಎಂದರು. ಈ ಸಂಚಿಕೆಯಲ್ಲಿನ ಬಹುತೇಕ ಲೇಖನಗಳಲ್ಲಿ ಕಾಣುವ ಸಮಾಜವಾದಿ ಚಳುವಳಿ ಕುರಿತ ಆತ್ಮ ವಿಮರ್ಶೆ ಗಮನ ಸೆಳೆಯುತ್ತದೆ ಎಂದೂ ಅವರು ನುಡಿದರು.

ಧಾರವಾಡದ ಬಿ.ವಿ. ಸುರೇಂದ್ರ, ಹಾಸನದ ಬಿ. ಶಿವಕುಮಾರ್ ಹಾಗೂ ಚಾಮರಾಜ ನಗರದ ಅಪೂರ್ವ ಡಿ'ಸಿಲ್ವ ಪತ್ರಿಕೆ ಓದುಗರಾಗಿ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶಿವಮೊಗ್ಗದ ರಾಷ್ಟ್ರೀಯ ಶಿಕ್ಷಣ ಸಮಿತಿಯ ಕಾರ್ಯದರ್ಶಿ ಎಸ್.ವಿ. ತಿಮ್ಮಯ್ಯನವರು ಮಾತನಾಡಿ, ಶಿವಮೊಗ್ಗ ಹಿಂದೆ ಹೇಗೆ ಸಮಾಜವಾದಿ ರಾಜಕಾರಣದ ಭದ್ರಕೋಟೆಯಾಗಿತ್ತು ಎಂಬುದನ್ನು ನೆನಪಿಸಿಕೊಳ್ಳುತ್ತಾ, ಯಾವುದೇ ರಾಜಕೀಯ ಹೋರಾಟಗಾರನ ನಿಜತ್ವ ಸಾಬೀತಾಗುವುದು ಆತನಿಗೆ ಅಧಿಕಾರ ಕೊಟ್ಟು ನೋಡಿದಾಗ ಎಂದು ಮಾರ್ಮಿಕವಾಗಿ ನುಡಿದರು.

ಇದೇ ಸಂದರ್ಭದಲ್ಲಿ ಹಿರಿಯ ಸಮಾಜವಾದಿ ಕಡಿದಾಳು ಶಾಮಣ್ಣ ಕೊಳಲು ನುಡಿಸಿ ಸಭಿಕರನ್ನು ರಂಜಿಸಿದರು.

(ವರದಿ: **ಎಚ್.ಎಂ. ಸೌಮ್ಯ**)

# ಲೋಹಿಯಾ ಸಮತಾ ವಿದ್ಯಾಲಯದಲ್ಲಿ ದೊಂಬಿದಾಸರ ನಾಯಕತ್ವ ತರಬೇತಿ ಶಿಬಿರ



ಇದೇ ಆಗಸ್ಟ್ ೧೦ ಹಾಗೂ ೧೧ರಂದು ತುಮಕೂರು ಜಿಲ್ಲೆ ಶಿರಾ ಬಳಿಯ ರಾಮಮನೋಹರ ಲೋಹಿಯಾ ಸಮತಾ ವಿದ್ಯಾಲಯ ಮತ್ತು ಜಿಲ್ಲಾ ಅಲೆಮಾರಿ ದೊಂಬಿದಾಸರ ಸಂಘಗಳು ದೊಂಬಿದಾಸ ಅಲೆಮಾರಿ ಜನಾಂಗದ ನಾಯಕತ್ವ ತರಬೇತಿ ಶಿಬಿರವನ್ನು ಆಯೋಜಿಸಲಾಗಿತ್ತು.

ಈ ಸಂದರ್ಭದಲ್ಲಿ ಮಾತನಾಡಿದ ಚಿಂತಕ ಕೆ. ದೊರೈರಾಜು "ಈಗ ಏಕ ಸಂಸ್ಕೃತಿಯ ಪ್ರಭಾವ ಹೆಚ್ಚಾಗಿದೆ. ನಮ್ಮ ಜಾತಿಗಳನ್ನು ಮುಚ್ಚಿಡುವುದು ಮುಂತಾದ ಕೀಳರಿಮೆಗಳಿಂದ ನರಳುತ್ತಿವೆ. ನಾವೀಗ ಜನರಮನರಂಜನೆಗಾಗಿ ಅಥವಾ ನಮ್ಮ ಹೊಟ್ಟೆಪಾಡಿಗಾಗಿ ಬಳಸುತ್ತಿರುವ ಹಾಡುಗಳನ್ನು ನಮ್ಮದೇ ಜನಾಂಗದ ಜಾಗೃತಿಗಾಗಿ ಬಳಸಬೇಕಿದೆ" ಎಂದರು.

ಅಲೆಮಾರಿಗಳ ಹಿನ್ನೆಲೆಯಲ್ಲಿ ಭಾರತದ ಜಾತಿ ಪದ್ಧತಿಗಳ ಬಗ್ಗೆ ಮಾತನಾಡಿದ ಜಿ.ಎಂ.ಶ್ರೀನಿವಾಸಯ್ಯನವರು "ವಿದ್ಯಾವಂತರಾದ ದೊಂಬಿದಾಸರೇ ತಮ್ಮ ಜಾತಿಯನ್ನು ಹೇಳಲು ಹಿಂಜರಿಯುವ ಪ್ರವೃತ್ತಿ ತೊಲಗಬೇಕು" ಎಂದರು. ಇದಕ್ಕೆ ಪ್ರತಿಕ್ರಯಿಸಿದ ಕಾಕೋಳು ರಾಮಯ್ಯ "ದಾಸ ಎಂದರೆ ದೇವರ ಸೇವೆ ಮಾಡುವವರು, ಕೆಟ್ಟದಾಸರೂ ಅಲ್ಲ, ಚುಟ್ಟದಾಸರೂ ಅಲ್ಲ, ನಾವು ಹುಟ್ಟಾ ದಾಸರು, ಹಾಗಾಗಿ ನಮ್ಮ ವ್ಯಕ್ತಿತ್ವ ರೂಪಿಸಿಕೊಳ್ಳಬೇಕು" ಎಂದರು.

ಸಾಹಿತಿ ಕುಪ್ಪೆ ನಾಗರಾಜ್ ಮಾತನಾಡಿ "ರಾಜ್ಯದಲ್ಲಿರುವ ೫೦ಕ್ಕೂ ಅಧಿಕ ಅಲೆಮಾರಿ ಸಮುದಾಯಗಳ ವೈಶಿಷ್ಟ್ಯಗಳ ಅಧ್ಯಯನಕ್ಕಾಗಿ ಪ್ರತ್ಯೇಕ ಆಯೋಗ ರಚನೆಯಾಗಬೇಕೆಂದು ಆಗ್ರಹಿಸಿದರು. ಮನರಂಜನೆಗಾಗಿ ಅಥವಾ ನಮ್ಮ ಹೊಟ್ಟೆಪಾಡಿಗಾಗಿ ಬಳಸುತ್ತಿರುವ ಹಾಡುಗಳನ್ನು ನಮ್ಮದೇ ಜನಾಂಗದ ಜಾಗೃತಿಗಾಗಿ ಬಳಸಬೇಕಿದೆ" ಎಂದರು.

ಆರೋಗ್ಯಾಧಿಕಾರಿ ಡಾ. ಹೆಚ್.ವಿ. ರಂಗಸ್ವಾಮಿಯವರು ಈ ಜನಾಂಗದ ಆರೋಗ್ಯ ಸಮಸ್ಯೆಗಳ ಬಗ್ಗೆ ಮಾಹಿತಿ ಪಡೆದು ಪರಿಹಾರಗಳನ್ನು ಸೂಚಿಸಿದರು. ಸಮಾರೋಪದ ಅಧ್ಯಕ್ಷತೆಯನ್ನು ವಹಿಸಿದ್ದ ತುಮಕೂರಿನ ಚರಕ ಆಸ್ಪತ್ರೆಯ ಮುಖ್ಯಸ್ಥರಾದ ಡಾ.ಬಸವರಾಜು "ಯಾವುದೇ ಅವಕಾಶಗಳನ್ನು ಪಡೆಯಲು ರಾಜಕೀಯ ಅಧಿಕಾರ ಬಹಳ ಮುಖ್ಯ, ಅದಕ್ಕಾಗಿ ಸಂಘಟಿತರಾಗಬೇಕು, ನಮ್ಮಲ್ಲಿನ ಸಣ್ಣಪುಟ್ಟ ಹಮ್ಮುಗಳನ್ನು ಬಿಟ್ಟು ಒಗ್ಗಟ್ಟಿನಿಂದ ಹೋರಾಡಿದರೆ ಸರ್ಕಾರ ನಿಮ್ಮ ಕಡೆ ನೋಡುತ್ತದೆ, ಆ ನಿಟ್ಟಿನಲ್ಲಿ ಯೋಚಿಸಿ ಕ್ರಿಯಾಶೀಲರಾಗಿ" ಎಂದರು.

ಸಂಘಟನೆಯಲ್ಲಿ ಹೆಣ್ಣುಮಕ್ಕಳನ್ನು ತೊಡಗಿಸಿಕೊಳ್ಳುವುದು, ಶಿಕ್ಷಣ ಪಡೆಯುವುದು, ಇತರೆ ಸಂಘಟನೆಗಳನ್ನು ಒಳಗೊಳ್ಳುವುದು, ಎಲ್ಲ ಗುಂಪುಗಳಿಗೆ ಸಮಾನ ಮೀಸಲಾತಿ, ಸಂಘಟನೆ, ಸಂಸ್ಕೃತಿ ಕಲಾಮೇಳ ಆಯೋಜನೆ ಮುಂತಾದ ವಿಚಾರಗಳ ಬಗ್ಗೆ ಚರ್ಚೆಯನ್ನು ನಡೆಸಲಾಯಿತು.

(ವರದಿ ಮತ್ತು ಚಿತ್ರ: **ಮಲ್ಲಿಕಾರ್ಜುನ ಹೊಸಪಾಳ್ಯ**)

# ನಮ್ಮ ಸಮಾಜವಾದಿಗಳು: ತ್ಯಾಗಜೀವಿ ಗೇರುಗಲ್ಲು ಕರಿಬಸಪ್ಪ ಗೌಡರು

–ಡಾ. ಜೆ.ಕೆ. ರಮೇಶ



**ಕ**ಳೆದ ಶತಮಾನದ ಎಪ್ಪತ್ತು ಎಂಭತ್ತರ ದಶಕಗಳಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ವಿಜೃಂಭಿಸಿದ ಸಮಾಜವಾದ ತನ್ನ ಅಂಕುರ ಅಸ್ತಿತ್ವ ಯಶಸ್ಸುಗಳಿಗಾಗಿ ಹಲವು ಶ್ರೀಮಂತ ಕುಟುಂಬಗಳನ್ನು ಬಲಿತೆಗೆದುಕೊಂಡಿದೆ. ಹಲವು ತ್ಯಾಗಜೀವಿಗಳ ದುರ್ದೆಸೆಗೆ ಕಾರಣವಾಗಿದೆ. ಹಾಗೆ ತಮ್ಮ ಬದುಕು ಮತ್ತು ಸಂಪತ್ತುಗಳನ್ನು ಕಡೆಗಣಿಸಿ ಶಾಂತವೇರಿ ಗೋಪಾಲಗೌಡರೊಂದಿಗೆ ಸೇರಿ ಸಮಾಜವಾದ ಮತ್ತು ಪಕ್ಷವನ್ನು ತೀರ್ಥಹಳ್ಳಿ ಪ್ರದೇಶದಲ್ಲಿ ಬಿತ್ತಿ ಬೆಳೆಸಿದ ತೆರೆಮರೆಯ ವ್ಯಕ್ತಿಗಳಲ್ಲಿ ಗೇರುಗಲ್ಲು ಕರಿಬಸಪ್ಪನವರು ಮುಖ್ಯರಾದವರು. ಅವರ ಮನೆತನದವರ ಇಂದಿನ ದಾರುಣ ಸ್ಥಿತಿಗೆ ಕೌಟುಂಬಿಕ ಕಲಹ ವ್ಯಕ್ತಿಗತ ದೌರ್ಬಲ್ಯಗಳು ಕಾರಣವಾಗಿದ್ದು, ಸಮಾಜವಾದಿ ಚಳುವಳಿಯೇ ಅದಕ್ಕೆ ಹೊಣೆ ಎನ್ನಲಾಗದಿದ್ದರೂ ಪಕ್ಷದ ಉನ್ನತಿಯೊಂದಿಗೇ ಅವರ ಸಂಸಾರ ಅವನತಿಯತ್ತ ಸಾಗಿತ್ತು ಎಂಬುದು ಸತ್ಯಸಂಗತಿ.

ತೀರ್ಥಹಳ್ಳಿ ತಾಲ್ಲೂಕಿನ ಬಸವಾನಿಗೆ ಸಮೀಪದಲ್ಲಿರುವ ಗೇರುಗಲ್ಲು ಎಂಬಲ್ಲಿಗೆ ಈಗ ಹೋಗಿ ನೋಡುವವರಿಗೆ ಒಂದು ಉದ್ದನೆ ಹೆಂಚಿನ ಮಾಡಿರುವ ಜಾಗವನ್ನು ಇದು ಕರಿಬಸಪ್ಪನವರ ಮನೆ ಎಂದು ತೋರಿಸುತ್ತಾರೆ. ಮಾಡಿನ ಒಂದು ಭಾಗದಲ್ಲಿ ಕರಿಬಸಪ್ಪನವರ ತಮ್ಮನ ಮಗ, ಸೊಸೆ ಸಂಸಾರ ಹೂಡಿಕೊಂಡಿದ್ದಾರೆ. ತಮ್ಮ ಭಾಗಕ್ಕೆ ಉಳಿದಿರುವ ಅತ್ಯಲ್ಪ ಜಮೀನಿನಲ್ಲಿ ಜೀವನ ನಿರ್ವಹಣೆ ಸಾಗದೆ ಇತರರ ಕೆಲಸಕ್ಕೆ ಕೂಲಿಗೆ ಹೋಗುತ್ತಾರೆ. ಮನೆ ಮಡದಿ ಹತ್ತಿರದ ಶಾಲೆಯ ಬಿಸಿಯೂಟ ತಯಾರಿಕೆಯ ಸಹಾಯಕಳಾಗಿ ದುಡಿಯುತ್ತಾರೆ. ಮಾಡಿನ ಇನ್ನೊಂದು ಭಾಗ ಶಾಲೆಯಾಗಿತ್ತಂತೆ. ಸರಕಾರಿ ಶಾಲೆಗೆ ಕಟ್ಟಡವಾಗುವವರೆಗೆ ಕರಿಬಸಪ್ಪ ತಮ್ಮ ಮನೆಯನ್ನೇ ಶಾಲೆಗಾಗಿ ಕೊಟ್ಟಿದ್ದರಂತೆ. ಮನೆಯ ಸುತ್ತ ಎರಡೆಕರೆಯಷ್ಟು ಜಾಗದಲ್ಲಿ ಕಲ್ಲು ಮಣ್ಣಿನ ಪೌಳಿ ಇದ್ದು ಹಿಂಭಾಗದಲ್ಲಿ ಅರ್ಧಗೋಡೆಗಳು, ನೆಲಗಟ್ಟು ಬಾವಿ ಮುಂತಾದ ಅವಶೇಷಗಳಿವೆ. ಒಂದು ಕಾಲಕ್ಕೆ ಇದೊಂದು ಅರಮನೆಯಂಥ ಮನೆ. ಮನೆಯೇನು ಮಠ, ಶ್ರೀಮಂತಿಕೆ ವೈಭವದಿಂದ ಮೆರೆದ ಮಹಲು.

ನೂರಾರು ಎಕರೆ ಜಮೀನು ಈ ಮನೆಯ ವಹಿವಾಟಿಗೆ ಸೇರಿತ್ತು. ಗೇರುಗಲ್ಲು, ಹುಲಿಗಾರು, ವಾಟಗೋಡು, ಬಸವಾನಿ, ಹಳುವಾನಿ, ಹಿಲಿಕೆರೆ, ಕಡಿದಾಳು ಹೀಗೆ ಆ ಸುತ್ತಲ ಊರುಗಳ ಸಾಗುವಳಿ ಜಮೀನೆಲ್ಲ ಕರಿಬಸಪ್ಪನವರ ಕುಟುಂಬದ ಹಿಡುವಳಿಯೇ ಆಗಿತ್ತು. ತೀರ್ಥಹಳ್ಳಿ ಶಿವಮೊಗ್ಗಗಳಲ್ಲಿ ನಿವೇಶನ ಮನೆ ಮುಂತಾಗಿ ಆಸ್ತಿ ಇತ್ತು. ಹಿಲಿಕೆರೆಯಲ್ಲಿ ಇವರದೇ ಧರ್ಮಛತ್ರವಿದ್ದು ನಿತ್ಯ ನೂರಾರು ಜನರಿಗೆ ಆಶ್ರಯನೀಡಿ ಅನ್ನ ಸಂತರ್ಪಣೆ ನಡೆಸುತ್ತಿತ್ತು. ಮೇಳಿಗೆ ವೀರಭದ್ರ ದೇವಸ್ಥಾನ ಈ ಮನೆಯ ಸುಪರ್ದಿನಲ್ಲಿತ್ತು. ಈಗಲೂ ಇದೆ. ಗೇರುಗಲ್ಲು ಮನೆಯಲ್ಲಿ ವಾರ್ಷಿಕ ನಡೆಯುತ್ತಿದ್ದ ಗಣಪತಿ ಹಬ್ಬದ ವಿಜೃಂಭಣೆಯನ್ನು ಹಿರಿಯರು ನೆನಪಿಸಿಕೊಳ್ಳುತ್ತಾರೆ.

ಇಂಥ ಮನೆಯ ಅವಸಾನದ ಕಥೆ ಒಂದು ಮಹಾ ಕಾದಂಬರಿಗೆ ವಸ್ತುವಾಗಬಲ್ಲಂಥದು. ಕರಿಬಸಪ್ಪನವರ ಕುಟುಂಬದವರು ಮೂಲತಃ ಚನ್ನಗಿರಿ ತಾಲ್ಲೂಕಿನ ಗೊಪ್ಪೇನಹಳ್ಳಿ (ಹೊದಿಗೆರೆ)ಯವರು. ಗೇರುಗಲ್ಲಿನ ಸಿದ್ಧಲಿಂಗಸ್ವಾಮಿ ಗದ್ದುಗೆಯ ಪೂಜಾರಿಗಳನ್ನಾಗಿ ಇವರನ್ನು ಇಲ್ಲಿಗೆ ಕರೆತಂದರು ಎನ್ನುತ್ತಾರೆ. ಬಯಲು ಸೀಮೆಯ ಕಡೆಯಿಂದ ಎತ್ತಿನ ಗಾಡಿಗಳಲ್ಲಿ ದಿನಸಿಗಳನ್ನು ತಂದು ಮಲೆನಾಡಿನ ಈ ಭಾಗದಲ್ಲಿ ಮಾರಾಟ ಮಾಡಲು ಬರುತ್ತಿದ್ದ ಹೇರಾಟದ ಶೆಟ್ಟರು ಇಲ್ಲೇ ನೆಲಸಿದರೆನ್ನುತ್ತಾರೆ. ಪ್ರತಿ ವರ್ಷ ಬರುತ್ತಿದ್ದವರು ಇಲ್ಲಿನವರ ವಿಶ್ವಾಸಗಳಿಸಿ ಮದುವೆ ಮುಂಜಿ ಇತ್ಯಾದಿಗಳಿಗೆ ಸಾಲಕೊಟ್ಟು ಬಡ್ಡಿ ವಸೂಲಿ ಮಾಡುವುದು. ಹಣದ ಬದಲಿಗೆ ಜಮೀನು ಬರೆಸಿಕೊಳ್ಳುವುದು ಮುಂತಾದ ವ್ಯವಹಾರ ನಡೆಸಿ ಹಣವಂತರಾಗಿ ಇಲ್ಲಿ ಮನೆ ಮಠಕಟ್ಟಿ ಸ್ಥಾಪಿತರಾದರು ಎನ್ನುತ್ತಾರೆ. ಒಟ್ಟಿನಲ್ಲಿ ವಲಸೆ ಬಂದ ವೀರಶೈವ ಮನೆತನ ಇಲ್ಲಿ ಒಡೆಯರಾಗಿ ಆಳ್ವಿಕೆ ನಡೆಸಿತು. ಕರಿಬಸಪ್ಪನವರ ಅಜ್ಜ ಕರಿಬಸಪ್ಪ. ತಂದೆ ದೊಡ್ಡಬಸಪ್ಪ, ಅಣ್ಣ ರುದ್ರಯ್ಯ ಸಾಕಷ್ಟು ದರ್ಪ ಕ್ರೌರ್ಯಗಳಿಂದ ಮೆರೆದವರು. ಹೆಚ್ಚು ಅಳತೆಯ ಗೇಣಿ ಭತ್ತ, ಕಡಕೊಟ್ಟ ಹುಲಿ ಬತ್ತ ವಸೂಲಿ ಮಾಡಿ ಸಾಲು ಪಣತಗಳಲ್ಲಿ ತುಂಬುತ್ತಿದ್ದವರು. ಆದರೆ ಕಾಲಕ್ರಮೇಣ ಸಹೋದರರೊಳಗಿನ ವೈಷಮ್ಯದ ಕಾರಣಕ್ಕೆ ದುರಂತಗಳ ಸರಮಾಲೆಯೇ ಸಂಸಾರವನ್ನು ಸುತ್ತಿಕೊಂಡಿತು. ಅದೊಂದು ದಾರುಣ ಕತೆ.

ಸ್ವತಃ ಕರಿಬಸಪ್ಪನವರು ತುಸು ಬೇಜವಾಬ್ದಾರಿಯ ಮನುಷ್ಯ ಎನ್ನುತ್ತಾರೆ ಅಥವಾ ಅವರ ಅತಿ ಉದಾರ ನಡೆಯನ್ನೇ ಜನ ಹಾಗೆ ಗುರುತಿಸಿದರೊ ಹೇಳಲಾಗದು. ಅಣ್ಣತಮ್ಮಂದಿರು ಆಸ್ತಿ ಹಂಚಿಕೊಂಡ ಮೇಲೂ ಹೇರಳವಾಗಿ ತಮ್ಮ ಭಾಗಕ್ಕೆ ಬಂದಿದ್ದ ಜಮೀನು ಮನೆಯ ಬಗ್ಗೆ ಕರಿಬಸಪ್ಪನವರು ತಲೆ ಕೆಡೆಸಿಕೊಂಡವರಲ್ಲ. ಗೇಣೀದಾರರ ಮೇಲೆ ಯಾವ ಹಿಡಿತವನ್ನೂ ಇಡಲಿಲ್ಲ. ಕಟ್ಟುನಿಟ್ಟಾಗಿ ಗೇಣಿ ವಸೂಲಿ ಮಾಡಲಿಲ್ಲ. ಜಗಳವಾಡಿ ಯಾರನ್ನೂ ಕೋರ್ಟು ಕಚೇರಿಗೆಳೆಯಲಿಲ್ಲ. ಇವರ ಪ್ರೀತಿ ಮಾನವೀಯತೆಗಳು ಪ್ರಯೋಜನಕ್ಕೆ ಬರಲಿಲ್ಲ. ಭೂಸುಧಾರಣೆಯ ಕಾನೂನಿನಂತೆ ಇದ್ದ ಜಮೀನನ್ನೆಲ್ಲ ಒಕ್ಕಲುಗಳಿಗೇ ಬಿಟ್ಟುಕೊಟ್ಟು ಬರಿಗೈಯಾದರು. ಅನುಕಂಪ ತೋರಿ ಭೂನ್ಯಾಯಮಂಡಳಿಯವರೇ ಉಳಿಸಿಕೊಟ್ಟ ನಾಲ್ಕೆಕರೆ ಜಮೀನನ್ನು ತಿರುಗಿ ಗೇಣಿದಾರರಿಗೇ ಕೊಟ್ಟುಬಿಟ್ಟರು. ಶಿಥಿಲವಾಗಿದ್ದ ದೊಡ್ಡ ಮನೆಯ ಮರಮುಟ್ಟುಗಳನ್ನು ಕೇಳಿದವರಿಗೆ ಕೊಟ್ಟರು ಅಥವಾ ಬೇಕಾದವರು ಹೊತ್ತೊಯ್ದರು. ಕರಿಬಸಪ್ಪ ಕೈಲಿದ್ದುದನ್ನು ಅಸಹಾಯಕರಿಗೆ ಕೊಡುತ್ತಾ ತಾವು ಶ್ರಮದ ದುಡಿಮೆಗೆ ತೊಡಗದೆ ಬಸವಾನಿ, ತೀರ್ಥಹಳ್ಳಿಯ ಅಂಗಡಿ ಮುಂಗಟ್ಟುಗಳಲ್ಲಿ ಕುಳಿತು ಕಾಲ ಕಳೆದರು. ಇಸ್ಪೀಟಾಟದ ಹವ್ಯಾಸವೂ ಅಷ್ಟಿಷ್ಟು ಅಂಟಿಕೊಂಡಿತ್ತು. ಒಟ್ಟಾರೆ ಮನೆಯ ಸ್ಥಿತಿವಂತಿಕೆ ಕರಗಿಹೋಗಿ ದುರವಸ್ಥೆಗೆ ತಲುಪಿತು. ನಿರ್ಲಕ್ಷ್ಯದಿಂದಾಗಿ ದೇಹಸ್ಥಿತಿಯೂ ಕೆಟ್ಟಿತು. ಕೊನೆಗಾಲದಲ್ಲಿ ಶಿವಮೊಗ್ಗೆಯ ಬಂಧುಗಳ ಮನೆಯಲ್ಲಿದ್ದು ತೀವ್ರ ಅನಾರೋಗ್ಯಕ್ಕೊಳಗಾಗಿ ೧೯೮೭ರಲ್ಲಿ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಸೇರಿಸಲ್ಪಟ್ಟು ಅಲ್ಲಿಯೇ ತೀರಿಕೊಂಡರು.

ಕಟ್ಟುಮಸ್ತಾದ ದೇಹ, ಬೋಳುತಲೆ, ವರಚ ಕಣ್ಣು, ನೋಡಲು ಸ್ಫುರದ್ರೂಪಿಯಲ್ಲ. ಅರ್ಧತೋಳಿನ ಖಾಕಿ ಅಂಗಿ, ಅಡ್ಡಪಂಚೆ ಬಗಲಲ್ಲೊಂದು ಕೆಂಪು ಚೀಲ. ಬಾಯಲ್ಲಿ ಸದಾ ಎಲೆಯಡಿಕೆ, ಮೃದುಮಾತು, ಬಹುತೇಕ ಗೋಪಾಲಗೌಡರ ಗುರು ಸದಾಶಿವರಾಯರಂತೆಯೇ ಕರಿಬಸಪ್ಪಗೌಡರ ಸ್ವರೂಪ, ನಡೆನುಡಿ. ಬಗಲ ಚೀಲದಲ್ಲಿ ಪುಸ್ತಕಗಳೂ ಇರುತ್ತಿದ್ದವು. ಕರಿಬಸಪ್ಪನವರಿಗೆ ಓದುವ ಹವ್ಯಾಸವಿತ್ತು. ಗೌಡರು ಹುಟ್ಟಿದ್ದು ಬಹುಶಃ ೧೯೨೭ ರಲ್ಲಿ. ಹತ್ತು ಹನ್ನೆರಡು ವರ್ಷದ ಹುಡುಗನಿದ್ದಾಗಲೇ ಭಾರತ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದರು. ಹಾಗಾಗಿ ವಿದ್ಯಾಭ್ಯಾಸ ಶಾಲಾ ಹಂತಕ್ಕೇ ನಿಂತುಹೋಯಿತು. ೧೯೩೯ರಿಂದ ೧೯೪೭ರವರೆಗೂ ಚಳವಳಿಯ ಭೂಗತ ಚಟುವಟಿಕೆಗಳಲ್ಲಿ ಮಗ್ನರಾಗಿದ್ದರು. ೧೯೪೨ರ

'ಕ್ವಿಟ್‌ಇಂಡಿಯಾ' ಮತ್ತು ೧೯೪೭ರ 'ಮೈಸೂರು ಚಲೋ' ಚಳವಳಿಗಳಲ್ಲಿ ತೀವ್ರವಾಗಿ ತೊಡಗಿಕೊಂಡು ಸೆರೆಸಿಕ್ಕು ಶಿವಮೊಗ್ಗ, ಸಾಗರ, ಬೆಂಗಳೂರು ಜೈಲುಗಳಲ್ಲಿ ಶಿಕ್ಷೆ ಅನುಭವಿಸಿದರು. ಸ್ವಾತಂತ್ರ್ಯಾನಂತರ ರಾಷ್ಟ್ರಾಧ್ಯಕ್ಷರಿಂದ ಹೋರಾಟಗಾರರ ತಾಮ್ರಪತ್ರ ಗೌರವ ಪಡೆದಿದ್ದರು.

ಕರಿಬಸಪ್ಪನವರು ಸಮಾಜವಾದಿಯಾಗಿ ಬಹುದೊಡ್ಡ ನಾಯಕರಾಗಿ ಪ್ರಸಿದ್ಧರಾದವರಲ್ಲ. ತತ್ವ ಸಿದ್ಧಾಂತಗಳಿಗೆ ತಮ್ಮನ್ನು ತೆತ್ತುಕೊಂಡು ಮರೆಯಲ್ಲೇ ಇದ್ದು ಚಳವಳಿಯನ್ನು ಬೆಳೆಸಿದವರು. ನಾಯಕರಾದ ಜೆ.ಹೆಚ್. ಪಟೇಲ್, ವೈ.ಆರ್. ಪರಮೇಶ್ವರಪ್ಪ ಶಂಕರನಾರಾಯಣ ಭಟ್ಟ ಮುಂತಾದವರೊಂದಿಗೆ ನಿಕಟ ಸಂಪರ್ಕ ಸ್ನೇಹ ಹೊಂದಿದ್ದು ಮಹತ್ವದ ಘಟ್ಟಗಳಲ್ಲಿ ಅವರೊಂದಿಗೆ ಚರ್ಚೆಗಿಳಿದು ತೀರ್ಮಾನಗಳಿಗೆ ಬರಲು ಸಹಕರಿಸುತ್ತಿದ್ದರು. ಸಮಾಜವಾದಿ ಚಳುವಳಿಯ ನಕ್ಷತ್ರ ನೇತಾರ ಗೋಪಾಲಗೌಡರಿಗಂತೂ ಇವರೊಬ್ಬ ಆಶ್ರಯದಾತರೆ ಆಗಿದ್ದರು. ಗೌಡರಿಗೆ ವರ್ಷಕ್ಕೆ ಒಂದು ಜೊತೆ ಬಟ್ಟೆ, ಒಂದು ದಿನಚರಿ ಪುಸ್ತಕವನ್ನು ಕೊಡಿಸುತ್ತಿದ್ದುದಲ್ಲದೆ ಅವರ ಖರ್ಚುಗಳನ್ನು ಇವರೇ ನಿರ್ವಹಿಸುತ್ತಿದ್ದರು. ೧೯೬೦ನೇ ಸಾಲಿನ ಡೈರಿಯ ಪ್ರಾರಂಭದಲ್ಲಿ ಗೌಡರು ಶಿವಮೊಗ್ಗದಲ್ಲಿ ಕರಿಬಸಪ್ಪಗೌಡರು ಆ ಡೈರಿಯನ್ನು ತಮಗೆ ಕೊಡಿಸಿದ್ದನ್ನು ದಿನಾಂಕ ಸಮೇತ ಉಲ್ಲೇಖಿಸಿದ್ದಾರೆ. ಗೌಡರೊಂದಿಗೆ ಸ್ವಾತಂತ್ರ್ಯ ಹೋರಾಟ, ಕಾಗೋಡು ಸತ್ಯಾಗ್ರಹ, ರೈತ ಚಳವಳಿಗಳಲ್ಲಿ ಸಹಭಾಗಿಯಾಗಿದ್ದರು. ಮುಂಚೂಣಿಯಲ್ಲಿ ನಿಂತು ಭಾಷಣ ಮಾಡಿ ಜನರನ್ನು ಸೆಳೆಯುತ್ತಿದ್ದವರಲ್ಲ. ಕಾಣದ ಕೈಯಾಗಿ ಕರಪತ್ರ ಮುದ್ರಿಸಿ ಹಂಚುತ್ತಿದ್ದರು.

ಸಾಮಾನ್ಯರಲ್ಲಿ ಸಾಮಾನ್ಯರಾಗಿದ್ದ, ಸರಳಜೀವಿ ಕರಿಬಸಪ್ಪನವರಿಗೆ ನಾಯಕರಾಗಿ ಮೆರೆಯಬೇಕು, ಅಧಿಕಾರ ಅನುಭವಿಸಬೇಕೆಂಬ ಆಕಾಂಕ್ಷೆಗಳೇ ಇರಲಿಲ್ಲ. ಒಮ್ಮೆ ಗೋಪಾಲಗೌಡರ ಒತ್ತಾಯಕ್ಕೆ ಮಣಿದು ತೀರ್ಥಹಳ್ಳಿ ತಾಲ್ಲೂಕು ಬೋರ್ಡ್ ಚುನಾವಣೆಗೆ ಮುತ್ತೂರು ಹೋಬಳಿ ಕ್ಷೇತ್ರದಿಂದ ಸ್ಪರ್ಧಿಸಿದ್ದರು. ಗೆಲ್ಲಲಿಲ್ಲ. ಗೆಲ್ಲಬೇಕೆಂಬ ಹಂಬಲವಿದ್ದರಷ್ಟೆ ಗೆಲ್ಲುವುದು. ತಾವಾಗಿ ಹೋಗಿ ಯಾರಲ್ಲೂ ಅವರು ಮತ ಯಾಚಿಸಲಿಲ್ಲ. ಇಷ್ಟಕ್ಕೂ ಅವರು ಸ್ಪರ್ಧಿಸಿದ್ದೇ ಕಾಂಗ್ರೆಸ್ ಪ್ರಭಾವ ವಲಯದಲ್ಲಿ. ಕಡಿದಾಳ್ ಮಂಜಪ್ಪ, ಬಸವಾನಿ ರಾಮಶರ್ಮರಂಥ ಕಾಂಗ್ರೆಸ್ ನಾಯಕರ ಮಗ್ಗುಲಲ್ಲೇ ಸೋಷಲಿಷ್ಟ್ ಆಲದ ಮರದ ಬಿಳಲು ಬಿಡಿಸಿದ, ಬಹುಸಂಖ್ಯಾತರಾಗಿದ್ದ ಒಕ್ಕಲಿಗರು, ಬ್ರಾಹ್ಮಣರ ನಡುವೆ ಲಿಂಗಾಯಿತರಾಗಿದ್ದುಕೊಂಡು ಜನಪ್ರಿಯತೆ ಗಳಿಸಿದ ಹೆಚ್ಚುಗಾರಿಕೆ ಕರಿಬಸಪ್ಪನವರದು. ಆದರೂ ಜನಸೇವಕನಾಗಿರಲು ಬಯಸಿದರೇ ಹೊರತು ಗ್ರಾಮ ಪಂಚಾಯ್ತಿಯಲ್ಲಿ ಒಬ್ಬ ಸದಸ್ಯನಾಗುವುದಕ್ಕೂ ಅವರು ಸಿದ್ಧರಿರಲಿಲ್ಲ.

ನಾಯಕನಾಗಿಯಲ್ಲದಿದ್ದರೂ ಜನಾನುರಾಗಿಯಾಗಿ ಮಲೆನಾಡಿಗರ ಮನದಲ್ಲಿ ಅವರು ನೆಲೆಸಿದ್ದಾರೆ. ಅವರ ಕುರುಹಾಗಿ ಉಳಿದಿರುವ ಗೇರುಗಲ್ಲು ಮನೆ–ಮಠಗಳ ಅವಶೇಷಗಳು ಕರಿಬಸಪ್ಪನವರ ನೆನಪನ್ನು ಕೆದಕಿ, ಅವರು ಅಳಿದು ಇಪ್ಪತ್ತೈದು ವರ್ಷಗಳ ನಂತರವೂ ಜನಮನವನ್ನು ಆರ್ದ್ರಗೊಳಿಸುತ್ತಿವೆ. *

## ಅಗಲಿದ ಸಹ ಯಾತ್ರಿಗಳಿಗೆ ನಮ್ಮ ಕಂಬನಿ...



ಕೆ. ವೆಂಕಟಸ್ವಾಮಿ ಶರ್ಮಿಳಾ ರೇಗೆ ನರೇಂದ್ರ ಧಾಬೋಳ್ಕರ್

**ನ**ಮ್ಮ ಪತ್ರಿಕೆಯ ಓದುಗ ಸಮೂಹದಲ್ಲಿ ತೀವ್ರ ನಷ್ಟದ ಭಾವನೆಯನ್ನುಂಟು ಮಾಡಿರುವ ಮುವ್ವರು ಚಿಂತಕ–ಹೋರಾಟಗಾರರು ಇತ್ತೀಚೆಗೆ ನಮ್ಮನ್ನಗಲಿ ಹೋಗಿದ್ದಾರೆ.

ಮೊದಲನೆಯದಾಗಿ ಹಿರಿಯ ಕಾರ್ಮಿಕ ನಾಯಕರೂ ಮತ್ತು ನಮ್ಮ ಪತ್ರಿಕೆಯ ಅಭಿಮಾನಿ ಓದುಗರೂ ಆಗಿದ್ದ ಕೆ. ವೆಂಕಟಸ್ವಾಮಿಯವರು ತಮ್ಮ ೮೩ನೇ ವಯಸ್ಸಿನಲ್ಲಿ ಅಸು ನೀಗಿದ್ದಾರೆ. ಗಾಜಿನ ಕಾರ್ಖಾನೆಯೊಂದರಲ್ಲಿ ಕಾರ್ಮಿಕರಾಗಿದ್ದ ವೆಂಕಟಸ್ವಾಮಿಯವರು ರಾಜ್ಯದಲ್ಲಿ ಸಮಾಜವಾದಿ ಚಳುವಳಿಯ ಅಡಿಪಾಯ ಹಾಕಿದ ಸೋಗಾಲ ನಾಗಭೂಷಣ, ಆನಂತರ ಎಸ್. ವೆಂಕಟರಾಮ್ ಅವರ ಒಡನಾಟದಲ್ಲಿ ಸಮಾಜವಾದಿ ಕಾರ್ಮಿಕ ಸಂಘಟನೆಯಲ್ಲಿ ತೊಡಗಿಕೊಂಡವರು. ಬೆಂಗಳೂರಿನಲ್ಲಿ ರೈಲ್ವೇ ಮಜ್ದೂರ್ ಸಂಘವನ್ನು ಸ್ಥಾಪಿಸಿದವರು. ತುರ್ತು ಪರಿಸ್ಥಿತಿ ಸಮಯದಲ್ಲಿ ಜಾರ್ಜ್‌ಫರ್ನಾಂಡೀಸರನ್ನು ಪ್ರಭುತ್ವ ಮುಗಿಸುವ ಸನ್ನಾಹದಲ್ಲಿದ್ದಾಗ ಅವರು ಸ್ವಲ್ಪ ಕಾಲ ದೇಶ ಬಿಟ್ಟು ಪರಾರಿಯಾಗಲು ಸಹಕರಿಸಿದವರು. ನಂತರ ಲಾರಿ ಮಾಲೀಕರಾಗಿ, ಲಾರಿ ಮಾಲೀಕರ ಸಂಘದ ಅಧ್ಯಕ್ಷರಾಗಿ ಆ ಕ್ಷೇತ್ರದಲ್ಲಿ ಸಹಕಾರಿ ಸಂಘವೊಂದನ್ನು ಸ್ಥಾಪಿಸುವ ಮಟ್ಟಿಗೆ ಬೆಳೆದವರು. ರಾಜ್ಯದಲ್ಲಿ ಯಾವುದೇ ಸಮಾಜವಾದಿ ಚಟುವಟಿಕೆ ನಡೆದರೂ–ನಮ್ಮ ಪತ್ರಿಕೆ, ನಮ್ಮ ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನವೂ ಸೇರಿದಂತೆ– ಉದಾರವಾಗಿ ಸಹಾಯ ಮಾಡುತ್ತಿದ್ದವರು.

ಲೋಹಿಯಾ ಮತ್ತು ಗೋಪಾಲಗೌಡರ ಕಟ್ಟಾ ಅನುಯಾಯಿಯಾಗಿದ್ದ ವೆಂಕಟಸ್ವಾಮಿ, ಲೋಹಿಯಾ ಜನ್ಮಶತಾಬ್ಧಿ ಸಂದರ್ಭದಲ್ಲಿ ತಮ್ಮ ಗೆಳೆಯರೊಡಗೂಡಿ ಲೋಹಿಯಾ ಭಾವಚಿತ್ರ ಮತ್ತು ಜ್ಯೋತಿಯೊಂದಿಗೆ ರಾಜ್ಯಾದ್ಯಂತ ಪ್ರವಾಸ ಮಾಡಿದವರು.

ಪ್ರತಿಭಾವಂತ ದಲಿತ ಚಿಂತಕಿ ಶರ್ಮಿಳಾ ರೇಗೆ ತಮ್ಮ ನಲವತ್ತೊಂಬತ್ತನೇ ವಯಸ್ಸಿನಲ್ಲಿಯೇ ಕ್ಯಾನ್ಸರ್‌ಗೆ ತುತ್ತಾಗಿ ಅಂಬೇಡ್ಕರ್ ಅಧ್ಯಯನ ಕ್ಷೇತ್ರಕ್ಕೆ ಒಂದು ದೊಡ್ಡ ನಷ್ಟವೇ ಉಂಟಾಗಿದೆ ಎಂದು ಹೇಳಬೇಕು. ಪುಣೆ ವಿಶ್ವವಿದ್ಯಾಲಯದ ಕ್ರಾಂತಿಜ್ಯೋತಿ ಸಾವಿತ್ರಿಬಾಯಿ ಫುಲೆ ಅಧ್ಯಯನ ಕೇಂದ್ರದ ನಿರ್ದೇಶಕರಾಗಿದ್ದ ಶ್ರೀಮತಿ ರೇಗೆ ಸಮಾಜ ವಿಜ್ಞಾನಿಯಾಗಿ, ಸ್ತ್ರೀವಾದಿಯಾಗಿ ದಲಿತ ಮಹಿಳೆಯರ ಸಮಸ್ಯೆಗಳ ಬಗ್ಗೆ ಲಿಂಗ ರಾಜಕಾರಣದ ಪರಿಪ್ರೇಕ್ಷ್ಯದಲ್ಲಿ ನಡೆಸಿದ್ದ ಅಧ್ಯಯನಗಳು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವಿದ್ವಾಂಸರ ಗಮನ ಸೆಳೆದಿದ್ದವು.

ಇನ್ನು ಇತ್ತೀಚೆಗೆ ಪುಣೆಯಲ್ಲಿಯೇ ಹಂತಕನ ಗುಂಡಿಗೆ ಬಲಿಯಾದ ನರೇಂದ್ರ ದಾಭೋಳ್ಕರ್ ಮಹಾರಾಷ್ಟ್ರದಲ್ಲಿ ಧಾರ್ಮಿಕತೆಯ ಹೆಸರಿನಲ್ಲಿ ನಡೆದಿರುವ ಮೂಢ ನಂಬಿಕೆ, ಆಚರಣೆ ಮತ್ತು ಶೋಷಣೆಗಳ ವಿರುದ್ಧ ಒಂಟಿಯಾಗಿ ಸಮರ ಸಾರಿದ್ದವರು. ಅವರು ಎರಡು ದಶಕಗಳ ಹಿಂದೆಯೇ ರಾಜ್ಯ ಸರ್ಕಾರಕ್ಕೆ ಅಂಧಶ್ರದ್ಧೆ ಆಚರಣೆ ವಿರೋಧಿ ಕಾಯಿದೆಯ ಕರಡೊಂದನ್ನು ಸಲ್ಲಿಸಿದ್ದರಾದರೂ, ಅದನ್ನು ಕಾನೂನು ಮಾಡಲಾಗದಿದ್ದ ಸರ್ಕಾರ ಈಗ ಅವರ ಹತ್ಯೆ ನಂತರ ಎಚ್ಚೆತ್ತು ಸುಗ್ರೀವಾಜ್ಞೆಯ ಮೂಲಕ ಅದನ್ನು ಜಾರಿಗೆ ತರಲು ಮುಂದಾಗಿದೆ. ಆ ಮಟ್ಟಿಗೆ ಅವರ ಹೋರಾಟ, ಬಲಿದಾನ ಸಾರ್ಥಕವಾಗಿದೆ ಎಂದೇ ಹೇಳಬಹುದು.

ಗಾಂಧಿಯನ್ನು ಕೊಂದು ಕಿಂಚಿತ್ತೂ ಪಶ್ಚಾತ್ತಾಪ ವ್ಯಕ್ತಪಡಿಸಲು ಇಂದೂ ನಿರಾಕರಿಸುತ್ತಿರುವ ಪಾಶಂಡಿ ಮತೀಯ ಗುಂಪೊಂದು ಮಹಾರಾಷ್ಟ್ರದ ಮಣ್ಣಿನಲ್ಲಿ ಬೆಳೆಯುತ್ತಿದ್ದು, ಅದು ಹಿಂದೂ ಧರ್ಮದ ಪುರೋಹಿತಶಾಹಿ ಹಿತಾಸಕ್ತಿಗಳನ್ನು ಪೋಷಿಸಿಕೊಂಡು ಬರಲು ಏನು ಮಾಡಲೂ ಹೇಸದಾಗಿದೆ. ಈ ಗುಂಪಿನ ಪೈಶಾಚಿಕ ಕೃತ್ಯಗಳನ್ನು ಉಗ್ರವಾಗಿ ಖಂಡಿಸುವುದಲ್ಲದೆ ಇದರ ವಿರುದ್ಧ ಯುವಜನರಲ್ಲಿ ತೀವ್ರ ಎಚ್ಚರವನ್ನು ಮೂಡಿಸುವುದು ನಾಗರೀಕ ಸಮಾಜದ ಕರ್ತವ್ಯವಾಗಿದೆ.

ಈ ಮುವ್ವರು ಚಿಂತಕ–ಹೋರಾಟಗಾರರ ಸಾವಿಗೆ 'ಹೊಸ ಮನುಷ್ಯ' ತನ್ನ ಓದುಗರೊಂದಿಗೆ ಕಂಬನಿ ಮಿಡಿಯುತ್ತದೆ.–**ಸಂ.**

**(ಕೆ. ವೆಂಕಟಸ್ವಾಮಿಯವರ ಬಗ್ಗೆ ಹೆಚ್ಚಿನ ಮಾಹಿತಿ ಮತ್ತು ಚಿತ್ರ ಒದಗಿಸಿದವರು ಖಾದ್ರಿ ಎಸ್. ಅಚ್ಯುತನ್ ಹಾಗೂ ಎಚ್. ಆರ್. ಶ್ರೀಶ ಅವರು.)**

# ಪ್ರೊ. ಬಿ. ಕೃಷ್ಣಪ್ಪ ನೆನೆಪಿನ ಮಾಲೆ–೧೦

–ಇಂದಿರಾ ಬಿ. ಕೃಷ್ಣಪ್ಪ

## ಮಕ್ಕಳಾಟವೂ, ಗಾಂಧಿ-ಅಂಬೇಡ್ಕರ್ ಬಡಿದಾಟವೂ...

ಹರಿಹರದಲ್ಲಿ ತುಂಬಿದ ಮನೆಯ ವಾತಾವರಣದಲ್ಲಿದ್ದ ನಮ್ಮ ಅತ್ತೆಗೆ ಇಲ್ಲಿನ ಮೂರು ಮತ್ತೊಂದು ಜನರ ಮನೆ ಭಣಭಣ ಎನ್ನುತ್ತಿದ್ದು, ಊರಲ್ಲಿರುವ ಅವರ ಉಳಿದ ಮಕ್ಕಳ ಬಗ್ಗೆ ಚಿಂತಿಸಲಾರಂಭಿಸಿದ್ದರು. ಕೃಷ್ಣಪ್ಪ ಅವರನ್ನು ಊರಿಗೆ ಕಳುಹಿಸಿಕೊಟ್ಟರು. ಆ ವೇಳೆಗೆ ನಾನು ಮತ್ತು ಕೃಷ್ಣಪ್ಪ ಮಗು ಸಾಕುವುದನ್ನು ಅರೆಬರೆ ತಿಳಿದುಕೊಂಡಿದ್ದೆವು. ಯಾರೂ ಹಿರಿಯರಿಲ್ಲದ ಮನೆಯಲ್ಲಿ ಮಗುವನ್ನು ಹೇಗೆ ಬೆಳೆಸುವುದು ಎಂಬ ಭಯ ನನ್ನಲ್ಲಿತ್ತು. ಆಗ ಅನುಪಮ ನಿರಂಜನಾ ಅವರ 'ತಾಯಿಮಗು', ಇತ್ಯಾದಿ ಪುಸ್ತಕಗಳನ್ನು ನನ್ನಾಸರೆಯಾಗಿ ಇಟ್ಟುಕೊಂಡಿದ್ದೆ. ಮಗುವಿಗೆ ಸ್ನಾನ ಮಾಡಿಸುವುದನ್ನು ನಾನು ಹಾಗೂ ಹೀಗೂ ಕಲಿತಿದ್ದರೂ, ಸ್ನಾನ ಮಾಡಿಸುವಾಗ "ಎಲ್ಲಿ ಮಗು ನೀರು ಕುಡಿದು ಬಿಡುತ್ತೋ" ಅಂತ ದಿಗಿಲಿರುತ್ತಿತ್ತು. ಆದಾಗ್ಯೂ ನಾವಿಬ್ಬರೂ ಸೇರಿ ಬಹು ಸಂಭ್ರಮದಿಂದ ಮಗುವಿಗೆ ನೀರು ಹಾಕುತ್ತಿದ್ದೆವು.

ಕೃಷ್ಣಪ್ಪ ಮಗುವಿಗೆ ಎಣ್ಣೆ ಹಚ್ಚಿ, ನೀವಿ, ತಿದ್ದಿತೀಡಿ ಸ್ನಾನಕ್ಕೆ ಅಣಿಗೊಳಿಸುತ್ತಿದ್ದರು. ಒಂದು ತಿಂಗಳೊಳಗೆ ನಾನು ಮಗುವನ್ನು ಸ್ನಾನ ಮಾಡಿಸೋದರಲ್ಲಿ ತಜ್ಞೆಯೇ ಆಗಿಬಿಟ್ಟೆ. ಕೃಷ್ಣಪ್ಪ ತನ್ನೆರೆಡು ಮಕ್ಕಳಿಗೆ 7–8 ವರ್ಷಗಳವರೆಗೆ ಎಣ್ಣೆ ಹಚ್ಚುವುದು ಬಿಡಲೇ ಇಲ್ಲ. ಭಾನುವಾರ ಬಂತೆಂದರೆ ಸಾಕು ಮಕ್ಕಳಿಗೆ ಎಣ್ಣೆ ಹಚ್ಚಿ ತಾನೂ ಎಣ್ಣೆ ಹಚ್ಚಿಕೊಂಡು ಆಗಾಗ ಎಣ್ಣೆ ಸ್ನಾನ ಮಾಡುತ್ತಿದ್ದರು. ಶತಪಥ ಹಿತ್ತಲಲ್ಲಿ ಓಡಾಡುತ್ತಿರುವಾಗ, ಮುಂಬಾಗಿಲಿನಲ್ಲಿ ಬೆಲ್ ಆಯಿತು. ತಲೆಯಿಂದ ಇಳಿದು ಕಣ್ಣುತುಂಬಿದ ಎಣ್ಣೆಯನ್ನು ಒರೆಸಿಕೊಳ್ಳುತ್ತಾ ಹೋಗಿ ಬಾಗಿಲು ತೆರೆದಿದ್ದಾರೆ. ಹೊರಗೆ ನಿಂತಿದ್ದವರನ್ನು "ಯಾರು ಬೇಕು?" ಎಂದು ಕೇಳಿದ್ದಾರೆ. ಅವರು 'ಅಪ್ಪಾ ನಾನು, ಸೀಮಾ" ಎಂದು ಜೋರಾಗಿ ನಗುತ್ತಾ ಬಂದಿದ್ದಾಳೆ. ಅವರಿಗೆ ಎಣ್ಣೆ ಬಳಿದುಕೊಳ್ಳುವ ಸಂಭ್ರಮ ಎಷ್ಟಿತ್ತೆಂದರೆ ಎದುರಿಗಿರುವ ಮಗಳನ್ನೂ ಗುರುತಿಸಲಾರದಷ್ಟು ಎಣ್ಣೆ ಬಳಿದುಕೊಳ್ಳುವಾಟ. ಇದನ್ನು ಅಪ್ಪನಿಗೆ ಆಗಾಗ್ಗೆ ಹೇಳಿ ಮಕ್ಕಳು ನಗುವುದೂ ಬಹಳಕಾಲ ನಡೆಯುತ್ತಿತ್ತು.

ಮಕ್ಕಳನ್ನು ಬಹಳ ಹಚ್ಚಿಕೊಂಡಿದ್ದ ಕೃಷ್ಣಪ್ಪ, ಮಕ್ಕಳನ್ನು ಹೆಗಲ ಮೇಲೆ ಹಾಕಿಕೊಂಡು, ತನ್ನ ಎದೆ ಮೇಲೆ ಮಲಗಿಸಿಕೊಂಡು, ತಟ್ಟಿ ನಿದ್ದೆ ಮಾಡಿಸಿ ಬಿಡುತ್ತಿದ್ದರು. ಇಷ್ಟೆಲ್ಲಾ ಇದ್ದಾಗ್ಯೂ, ಮಗು ಶಾಲಿನಿ ಒಂದಷ್ಟು ದಿನ ಸಂಜೆ ಆದಾಕ್ಷಣ, ಅಳಲು ಶುರುವಿಟ್ಟುಕೊಂಡು ಬಿಡುತ್ತಿತ್ತು. ಹಾಡು ಹಾಡಿದ್ದಾಯಿತು; ಹಾಲು ಕುಡಿಸಿದ್ದಾಯಿತು; ಎತ್ತಿಕೊಂಡು ಗಾಳಿಯಲ್ಲಿ ಓಡಾಡಿದ್ದಾಯಿತು; ಅರಚಿದ್ದಾಯಿತು ಮಗು ಅಳು ನಿಲ್ಲಿಸಲೊಲ್ಲದು. ಸಿಟ್ಟುಗೊಂಡ ಕೃಷ್ಣಪ್ಪ "ಹೊರಗೆ ಎಸೆದು ಬಿಡ್ತೀನಿ ಇದನ್ನ" ಎಂದು ಹೊರಗಡೆ ಒಯ್ಯಲು ನಾನು ಓಡೋಡಿ ಬಂದು ಸಮಾಧಾನ ಮಾಡಿ ಕರೆತಂದಿದ್ದೆ. ಪುನಃ ಅವರೇ ಹೆಗಲ ಮೇಲೆ ಹಾಕಿಕೊಂಡು ಸುತ್ತುತ್ತಾ; ನಿದ್ದೆ ಮಾಡಿಸಿದ್ದರು.

ನಾವೆಷ್ಟೊಂದು ಕಾಳಜಿ ವಹಿಸಿ ಮಗುವನ್ನು ಸಾಕುತಿದ್ದರೂ, ಒಮ್ಮೆ ಮಗುವಿಗೆ ಡಿಹೈಡ್ರೇಶನ್ ಆಗಿಬಿಟ್ಟಿತು. ಕುಡಿದ ನೀರು ದಕ್ಕದೆ, ವಾಂತಿ ಶುರುವಾಗಿ ಬಿಟ್ಟಿತು. ಕಡೆಗೆ ಆಸ್ಪತ್ರೆಗೆ ಅಡ್ಮಿಟ್ ಮಾಡಿದ್ದಾಯಿತು. ಭದ್ರಾವತಿಯ ನ್ಯೂಟೌನ್‌ನಲ್ಲಿರುವ ವಿಐಎಸ್‌ಎಲ್(ವಿಶ್ವೇಶ್ವರಯ್ಯ ಐರನ್ ಅಂಡ್ ಸ್ಟೀಲ್ ಲಿಮಿಟೆಡ್) ಆಸ್ಪತ್ರೆಯಲ್ಲಿ ಮೂರುದಿನಗಳ ಕಾಲ ಚಿಕಿತ್ಸೆ ನಡೆಯಿತು. ಭಯ ಮತ್ತು ಆತಂಕದ ದಿನಗಳವು. ಆಸ್ಪತ್ರೆಯಿಂದ ಡಿಸ್‌ಚಾರ್ಜ್ ಆಗಿ ಬಂದ ನಂತರವೂ ಬಹಳ ಎಚ್ಚರಿಕೆಯಿಂದ ಮಗುವನ್ನು ನೋಡಿಕೊಳ್ಳಬೇಕಾಗುತ್ತಿತ್ತು. ಆಗೆಲ್ಲಾ ಕೃಷ್ಣಪ್ಪ, "ಮಕ್ಕಳನ್ನು ಸಾಕೋ ಪುಸ್ತಕ ಓದಿ ಓದಿ ಮಗುನಾ ಆಸ್ಪತ್ರೆ ಸೇರಿಸೋ ಹಾಗೆ ಮಾಡಿದ್ಲು" ಅಂತಲೂ ಹೇಳ್ತಾ, "ಪುಸ್ತಕದ ಬದನೆಕಾಯಿ ಅಡುಗೆಗೆ



೧೯೬೧–೬೩ರಲ್ಲಿ ಮೈಸೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಎಂ.ಎ. ವಿದ್ಯಾರ್ಥಿಯಾಗಿ ಬಿ. ಕೃಷ್ಣಪ್ಪ (ಮೇಲಿನ ಸಾಲಿನಲ್ಲಿ ಎರಡನೆಯವರು) ತಮ್ಮ ಅಧ್ಯಾಪಕರುಗಳಾಗಿದ್ದ ಡಾ. ಜಿ.ಎಸ್.ಶಿವರುದ್ರಪ್ಪ, ಎಸ್.ವಿ. ಪರಮೇಶ್ವರ ಭಟ್ಟ, ಉ.ಕಾ.ಸುಬ್ಬರಾಯಾಚಾರ್, ದೇಜಗೌ, ಪ್ರೊ. ಡಿ.ಎಲ್..ಎನ್, ಡಾ. ಚಿದಾನಂದಮೂರ್ತಿ ಮುಂತಾದವರು ಹಾಗೂ ಸಹಪಾಠಿಗಳೊಂದಿಗೆ

ಬರಲ್ಲ" ಅಂತ ನನ್ನನ್ನು ಛೇಡಿಸುತ್ತಿದ್ದರು. ನಗುನಗುತ್ತಾ, ಆಡ್ತಾ ಇರೋ ಮಕ್ಕಳನ್ನು ಎತ್ತಿ ಕುಣಿಸಿ ಆಟ ಆಡೋಕೆ ಬಹಳ ಖುಷಿಯಾಗಿರುತ್ತೆ. ಆದ್ರೆ ಮಗುವಿನ ಆರೈಕೆ ತ್ರಾಸದಾಯಕವಾದ ಮತ್ತು ಬಹು ತಾಳ್ಮೆಯ, ಸುಧೀರ್ಘವಾದ ಕೆಲಸ. ಆದ್ದರಿಂದಲೇ ಸಂತಾನೋತ್ಪತ್ತಿ ಹಾಗೂ ಸಂಗೋಪನೆ ಮಹಿಳೆಯ ಧಾರಣಶಕ್ತಿ ಹಾಗೂ ಕರ್ತೃತ್ವಶಕ್ತಿಯನ್ನು ನಿರೂಪಿಸಿದರೂ ಮಹಿಳೆಯರ ಜೀವನದ ಬಹುಮುಖ್ಯ ಕಾಲಘಟ್ಟವನ್ನೇ ಕಬಳಿಸಿ ಬಿಡುತ್ತವೆ. ಹೀಗಿದ್ದೂ ಮಾನವ ಸಂಕುಲದ ಉತ್ಪಾದನೆ ಮತ್ತು ಸಂಗೋಪನೆಯನ್ನು ನಮ್ಮ ಅರ್ಥವ್ಯವಸ್ಥೆಯಲ್ಲಿ ಸಂಪಾದನಾ ದುಡಿಮೆಯೆಂದೂ, ಅಭಿವೃದ್ಧಿಯ ಮಾಪನವೆಂದೂ ಪರಿಗಣಿಸಲ್ಪಟ್ಟಿರುವುದಿಲ್ಲ.

ಈ ಮಧ್ಯೆ ಕೃಷ್ಣಪ್ಪನವರ ಕಡೇ ತಂಗಿ ರೇಣುಕಾಳನ್ನು ಹರಿಹರದಿಂದ ಕರೆತಂದು, ಭದ್ರಾವತಿಯಲ್ಲಿಯೇ ಶಾಲೆಗೆ ಸೇರಿಸಲಾಯಿತು. ನಮ್ಮ ಕುಟುಂಬ ಸದಸ್ಯರ ಸಂಖ್ಯೆ ದಿನದಿನಕ್ಕೆ ಬೆಳೆಯುತ್ತಿತ್ತು. ಅದರೊಂದಿಗೆ ಮಗುವಿನ ಲಾಲನೆ ಪಾಲನೆ, ಅದರ ನಗು–ಬೆಳವಣಿಗೆ ಮನೆಯವರೆಲ್ಲರಿಗೂ ಸಂತೋಷದ ಕ್ಷಣಗಳನ್ನು ಮೊಗೆಮೊಗೆದು ಕೊಡುತ್ತಿತ್ತು. ಇದೇ ಸಂದರ್ಭದಲ್ಲಿ ನಮ್ಮೆಲ್ಲಾ ಗೆಳೆಯರ ಬಳಗದವರಲ್ಲಿ ಮಗುವಿಗೆ ಏನು ಹೆಸರಿಡಬೇಕೆಂಬ ಜಿಜ್ಞಾಸೆ ಶುರುವಾಗಿತ್ತು. ಕ್ರಾಂತಿ, ಶಾಂತಿ, ಶ್ರಾವ್ಯ, ಇತ್ಯಾದಿ ಹೆಸರುಗಳನ್ನು ಸೂಚಿಸುತ್ತಿದ್ದರು. ಗೆಳೆಯರ ಬಳಗ, ಆಸ್ಪತ್ರೆಯಲ್ಲಿ ಮಗುವನ್ನು ನನ್ನ ಮಡಿಲಿಗೆ ಎತ್ತಿಟ್ಟ ಶಾರದಮ್ಮ ಸದಾ ಧೈರ್ಯವನ್ನು ತುಂಬುವ ಬಚ್ಚಿಮಾ ಹಾಗೂ ಸ್ನೇಹಿತರೊಂದಿಗೆ ನಾವು ನಾಮಕರಣ ಆಚರಿಸಿದೆವು. ಪರಂಪರೆಯಂತೆ, ಐದು ಹೆಸರುಗಳನ್ನು ಮಗುವಿನ ಕಿವಿಯಲ್ಲೂ ಉಸುರುವಾಗ ನಮ್ಮ ಒಡನಾಡಿಗಳು ಸೂಚಿಸಿದ ಕ್ರಾಂತಿ, ಶಾಂತಿ, ಶ್ರಾವ್ಯ, ಶಮಂತಕ, ಶಾಲಿನಿ ಎಂಬ ಹೆಸರುಗಳನ್ನು ಹೇಳುತ್ತಾ, ಹಸಿರೆಲೆ ಮತ್ತು ಹೂವಿನಲಂಕಾರದ ತೊಟ್ಟಿಲಲ್ಲಿ ಹಾಕಿ ತೂಗಿ, ಸಿಹಿ ಹಂಚಿದೆವು. ಶಾಸ್ತ್ರೋಕ್ತ ನಾಮಕರಣ ಸಮಾರಂಭದಿಂದ ಹೊರತಾದ ಸರಳ ಸುಂದರ ನಾಮಕರಣವನ್ನು ಆಚರಿಸಿದೆವು.

ಒಂದು ದಿನ ಕೃಷ್ಣಪ್ಪ ಕಾಲೇಜು ಮುಗಿಸಿ ಬಂದು ಪುನಃ ಸಿದ್ದವಾಗಿ, ಸಮಾಜವಾದಿ ಯುವಜನ ಸಭಾದ ಕಚೇರಿಗೆ ಹೋಗಿ ಬರುವುದಾಗಿ ಹೇಳಿ ಹೋಗಿದ್ದರು. ಅವರು ಹಿಂತಿರುಗಿ ಬಂದಾಗ ಸುಮಾರು ಹತ್ತುಗಂಟೆ ಆಗಿದ್ದಿರಬಹುದು. ಬಹಳ ತಳಮಳದಿಂದ ಓಡಾಡುತ್ತಿದ್ದರು. ನಿಂತಲ್ಲೂ ನಿಲ್ಲಲಾರರು, ಬೇಗುದಿ ಏನೆಂದು ಹೇಳಲಾರರು. ಅವರ ಕೋಣೆಯಲ್ಲಿ ಬಹಳ ಹೊತ್ತು ಓದುತ್ತಲೇ ಇದ್ದರು. ಮಗುವನ್ನು ಸಂಭಾಳಿಸುತ್ತಲೇ ನಾನು ಗಮನಿಸುತ್ತಲೇ ಇದ್ದೆ. ರಾತ್ರಿ



**ಶಿವಮೊಗ್ಗದ ಹೈಯರ್ ಸೆಕೆಂಡರಿ ಸ್ಕೂಲ್‌ನಲ್ಲಿ ಅಧ್ಯಾಪಕರಾಗಿದ್ದಾಗ ಚರ್ಚಾಸ್ಪರ್ಧೆಯೊಂದರ ಬಹುಮಾನ ವಿಜೇತ ವಿದ್ಯಾರ್ಥಿಗಳು ಮತ್ತು ಸಹೋದ್ಯೋಗಿಗಳೊಂದಿಗೆ ಬಿ. ಕೃಷ್ಣಪ್ಪ(ಮಧ್ಯಸಾಲಿನಲ್ಲಿ ಎರಡನೆಯವರು).**

ಬಹಳ ಹೊತ್ತಿನ ನಂತರ ಬಂದು ಮಲಗಿದರು. ಮರುದಿನ ಮನೆಗೆ ಬಂದ ಅವರ ಒಡನಾಡಿ ಬಿ. ರಾಜಣ್ಣನ ಬಳಿ ನಿನ್ನೆ ಆಫೀಸಿನಲ್ಲಿ ಏನು ನಡೀತು ಅಂತ ಕೇಳಿದೆ. ಆಗ ಅವರು ಹೇಳಿದ್ರು "ಕೃಷ್ಣಪ್ಪನವರು ಒಂದು ಸಣ್ಣ ಬುಕ್‌ಲೆಟ್ 'ಅಂಬೇಡ್ಕರ್ ಯಾರು?' ಅಂತ ತಂದಿದ್ರಲ್ಲಾ ಅದರ ಬಗ್ಗೆ ದೀರ್ಘ ಚರ್ಚೆ ನಡೀತು. ಗಾಂಧಿ ಹಾಗೂ ಅಂಬೇಡ್ಕರ್ ನಡುವಿನ ಭಿನ್ನಾಭಿಪ್ರಾಯಗಳ ಬಗೆಗಿನ ಕೃಷ್ಣಪ್ಪನವರ ಕಟು ಮಾತುಗಳನ್ನು ಒಪ್ಪದ ನಿಸಾರ್ ಅಹ್ಮದ್‌ರು ಗಾಂಧಿ ವಿಚಾರಗಳನ್ನು ಪ್ರತಿಪಾದಿಸಿದರೆ, ಕೃಷ್ಣಪ್ಪ ಅಂಬೇಡ್ಕರ್ ಪರ ವಾದಿಸಿದರು. ಬಿಸಿ ಬಿಸಿ ವಾಗ್ವಾದ ನಡೀತು. ಕೃಷ್ಣಪ್ಪ ಕೋಪದಿಂದ ಬಂದು ಬಿಟ್ರು" ಎಂದರು. ಇದಾದ ನಂತರ ನಾನು ಅವರ ಕೋಣೆಗೆ ಹೋಗಿ ನೋಡಿದಾಗ, ಅಂಬೇಡ್ಕರ್ ಪುಸ್ತಕಗಳು ಜಾತಿ ನಿರ್ಮೂಲನೆ ಕುರಿತ ಪುಸ್ತಕಗಳೂ ಟೇಬಲ್ ಮೇಲಿದ್ದವು. ಇದಾದ ಒಂದು ವಾರದ ಅಂತರದಲ್ಲಿ ವಿಐಎಸ್‌ಎಲ್ ಕಂಪನಿಯ ಕಾರ್ಮಿಕ ಸಂಘಟನೆಯವರು ಮನೆಗೆ ಬಂದಿದ್ದರು. ಆ ಕಂಪನಿಯಲ್ಲಿ ನಡೆಯುತ್ತಿರುವ ಹಗರಣಗಳು, ಬಡ್ತಿಯಲ್ಲಿನ ತಾರತಮ್ಯ, ವೇತನ ನಿಗದಿಯಲ್ಲಿ ವಿಳಂಬ, ಸೌಲಭ್ಯಗಳ ವಂಚನೆ, ಇತ್ಯಾದಿ ಕುರಿತು ಚರ್ಚಿಸುತ್ತಿದ್ದರು.

ವಿಶ್ವೇಶ್ವರಯ್ಯ ಕಾಲೇಜಿನ ಆಗಿನ ಪ್ರಿನ್ಸಿಪಾಲರಾದ ಕೆ.ಎಂ. ನಾಯ್ಡುರವರಿಗೆ ಅಲಾಟ್ ಆಗಿದ್ದ ವಸತಿಗೃಹವನ್ನು ಕೃಷ್ಣಪ್ಪನವರಿಗೆ ಬಿಟ್ಟುಕೊಟ್ಟಿದ್ದರು. ನಾನು ಮದುವೆಯಾಗುವ ಪೂರ್ವದಿಂದಲೂ ಕೃಷ್ಣಪ್ಪ ಅದರಲ್ಲಿ ವಾಸಿಸುತ್ತಿದ್ದರು. ಕೆ.ಎಂ. ನಾಯ್ಡುರವರು ಬಿ.ಆರ್.ಪ್ರಾಜೆಕ್ಟ್‌ನಲ್ಲಿ ಹೊಸದಾಗಿ ಸ್ಥಾಪಿತವಾಗಿದ್ದ ವಿಶ್ವವಿದ್ಯಾನಿಲಯದಲ್ಲಿ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿ ತೆರಳಲು ಸಿದ್ಧತೆ ಮಾಡತೊಡಗಿದ್ದರು. ಇದರಿಂದ ಅವರ ಹೆಸರಲ್ಲಿ ಮಂಜೂರಾದ ವಸತಿಗೃಹವನ್ನು ನಾವು ತೆರವುಗೊಳಿಸಬೇಕಾದ ಪರಿಸ್ಥಿತಿ ಬಂದಿತು. ಆಗ ಭದ್ರಾವತಿಯ ಓಲ್ಡ್ ಟೌನ್‌ನ ಸಂತೆ ಮೈದಾನದ ಹತ್ತಿರದಲ್ಲಿದ್ದ ಒಂದು ಮನೆ ಬಾಡಿಗೆಗೆ ಪಡೆದು ಅಲ್ಲಿಗೆ ಮನೆ ಬದಲಾಯಿಸಿದೆವು. ಅಲ್ಲಿ ಮನೆ ಒಳಗಡೆ ನೀರಿನ ಸೌಕರ್ಯವಿರಲಿಲ್ಲ. ಮೂರು ಮನೆ ಸೇರಿ ಇದ್ದ ಒಂದು ನಲ್ಲಿಯಿಂದ ನೀರು ತರಬೇಕಿತ್ತು. ರೇಣುಕಾ, ಶಿವು ಮತ್ತು ಕೃಷ್ಣಪ್ಪ ಸೇರಿ ನೀರಿನ ಕೆಲಸ ನನಗೆ ಹೊರಿಸದೆ, ನಿರ್ವಹಿಸುತ್ತಿದ್ದರು. ನಮ್ಮ ಮನೆ ಎದುರುಗಡೆ ಒಂದು ಮುಸ್ಲಿಂ ಕುಟುಂಬ ವಾಸವಾಗಿತ್ತು. ತಂದೆ-ತಾಯಿ ಇಬ್ಬರು ಹೆಣ್ಣು ಮಕ್ಕಳು ಮತ್ತು ಮೂರು ಜನ ಗಂಡು ಮಕ್ಕಳು, ಸಹೋದರ ಮತ್ತೆ ಅವನ ಹೆಂಡತಿ, ಎರಡು ಪುಟ್ಟ ಗಂಡು ಮಕ್ಕಳು ಇದ್ದ ದೊಡ್ಡ ಕುಟುಂಬ. ಸೌದೆ ವ್ಯಾಪಾರ ಮಾಡುವ, ಸ್ವಂತ ಮನೆಯುಳ್ಳ ಮಧ್ಯಮ ವರ್ಗದ ಕುಟುಂಬ ಅದಾಗಿತ್ತು. ಅವರಿಗೂ ನಮಗೂ ಉತ್ತಮ ಸೌಹಾರ್ದ ಸಂಬಂಧ ಬೆಳೆದು ಅವರ ಮನೆಯಲ್ಲಿನ ಅಡುಗೆಗಳು ನಮಗೂ ನಮ್ಮ ಮನೆಯಲ್ಲಿನ ವಿಶೇಷಗಳು ಅವರಿಗೂ ಕೊಡು-ಕೊಳ್ಳುವ ವಿಶ್ವಾಸ ನಮ್ಮೆರಡು ಕುಟುಂಬದ ನಡುವೆ ಬೆಳೆದಿತ್ತು. ನಾನು ಅವರಿಂದ ಅಕ್ಕಿ ರೊಟ್ಟಿ, ಕಿಚಡಿ ಹಾಗೂ ಆಲೂಗೆಡ್ಡೆ ಕೀರು ಮಾಡುವುದನ್ನು ಕಲಿತು ಮನೆಯಲ್ಲಿ ಪ್ರಯೋಗ ಮಾಡಲಾರಂಭಿಸಿದ್ದೆ. ಅವರ ಹಬ್ಬಗಳಲ್ಲಿ ಮಾಡುವ ಬೆಲ್ಲದ ಚೊಂಗ್ಯಾ ಮತ್ತು ಸಕ್ಕರೆ ಚೊಂಗ್ಯಾ ನನಗೆ ಬಲು ಇಷ್ಟ. ನನಗೆ ಇಷ್ಟ ಅಂತ ನಾಲ್ಕು ಜಾಸ್ತಿನೇ ಕೊಡ್ತಾ ಇದ್ದರು. ಪುಟ್ಟ ಮಗು ಶಾಲಿನಿ ಈ ಎರಡು ಕುಟುಂಬಗಳ ಕಣ್ಮಣಿಯಾಗಿದ್ದಳು.

**(ಮುಂದುವರೆಯುವುದು)**

# 'ಭಾರತ್ ನಿರ್ಮಾಣ್' ಎಂಬ ಪ್ರಚಾರಾಂದೋಲನದ ಸತ್ಯ ಮಿಥ್ಯಗಳು...


ಇನ್ನು ಕೆಲವೇ ವಾರಗಳಲ್ಲಿ ಕಾಂಗ್ರೆಸ್ ಪಕ್ಷದ ಪ್ರಚಾರಾಂದೋಲನವೊಂದು ಉಡಾವಣೆಗೊಳ್ಳಲಿದೆ. ಯು.ಪಿ.ಎ-೧ ಮತ್ತು ಯು.ಪಿ.ಎ.-೨ರ ಆಡಳಿತಾವಧಿಯಲ್ಲಿ ಆಡಳಿತಕ್ಕೆ ಬಡಿದ ಪಾರ್ಶ್ವವಾಯುವನ್ನು ಮರೆಮಾಚುವ ಪ್ರಯತ್ನವಾಗಿರುವ ಈ ಕಾರ್ಯಕ್ರಮಕ್ಕೆ ಸುಮಾರು ೫೦೦ ಕೋಟಿ ರೂಪಾಯಿಗಳಷ್ಟು ತೆರಿಗೆ ಹಣ ಖರ್ಚಾಗಲಿದೆ. ಸುಳ್ಳುಗಳನ್ನು ಹೊಸೆಯುವುದರಲ್ಲಿ ನಿಪುಣರಾದ ಪಕ್ಷದ ನಾಯಕರು ಮತ್ತು ಜನರನ್ನು ಮರುಳು ಮಾಡುವುದರಲ್ಲಿ ನಿಸ್ಸೀಮರಾದ ಪ್ರಚಾರ ವಿದ್ಯೆಯ ಪರಿಣತರು ಒಟ್ಟಾಗಿ ಒಂದು ಬಣ್ಣದ ಚಿತ್ರವನ್ನು ಸೃಷ್ಟಿಸುತ್ತಾರೆ. ತನ್ನಷ್ಟಕ್ಕೆ ಸಂಭವಿಸಿದ ಸಂಗತಿಗಳನ್ನು ತನ್ನ ಸಾಧನೆಯೆಂದು ಕಾಂಗ್ರೆಸ್ ಪ್ರತಿಪಾದಿಸಿದರೆ ಅಚ್ಚರಿಪಡಬೇಕಾಗಿಲ್ಲ.

ಈಗಾಗಲೇ 'ಭಾರತ ನಿರ್ಮಾಣ್' ಎಂಬ ಪ್ರಚಾರ ಮನೆ ಮನೆಯ ಕಿರು ಪರದೆಗಳ ಮೇಲೆ ಪ್ರದರ್ಶನಗೊಳ್ಳುತ್ತಿದೆ. ಇದರಲ್ಲಿ ಭಾರತವನ್ನು ಪರಿವರ್ತನೆ ಮಾಡಿದ ಹಲವಾರು ಐತಿಹಾಸಿಕ ಆಕಸ್ಮಿಕಗಳ ಬಗೆಗಿನ ಗೌರವವನ್ನು ಕಾಂಗ್ರೆಸ್ ನಿರಾತಂಕವಾಗಿ ತಾನೇ ಬಾಚಿಕೊಳ್ಳಲೆತ್ನಿಸಿದೆ. ಸತ್ಯ ಹೇಳಬೇಕೆಂದರೆ ದಶಕಗಳ ಕಾಲ ಕೋಟ್ಯಾಂತರ ಜನರ ದಮನದ ನಂತರ ಒಂದು ಕ್ರಾಂತಿ ಸಂಭವಿಸುತ್ತದೆ. ಉದಾರೀಕರಣ ಮತ್ತು ಸಾಫ್ಟ್‌ವೇರ್ ಕ್ಷೇತ್ರದ ಯಶಸ್ಸು ೧೯೯೧ರ ಸಂಕಷ್ಟದ ಪರಿಣಾಮವಾಗಿ ಮೂಡಿ ಬಂದು ಪಿ.ವಿ. ನರಸಿಂಹರಾಯರಿಂದ ಮುನ್ನೂಕಲ್ಪಟ್ಟಿತು. ಹಸಿರು ಕ್ರಾಂತಿ ಹಾಗೂ ಕ್ಷೀರಕ್ರಾಂತಿಗಳನ್ನು ಸಾಧಿಸಿದ್ದು ಸಿ. ಸುಬ್ರಹ್ಮಣ್ಯಂ



ಮತ್ತು ವರ್ಗೀಸ್ ಕುರಿಯನ್ ಅವರುಗಳು. ಇದು ಕಾಂಗ್ರೆಸ್‌ನಿಂದ ಸಾಧಿಸಲ್ಪಟ್ಟಿರುವುದಲ್ಲ; ಕಾಂಗ್ರೆಸ್ ಇದ್ದರೂ ಸಾಧಿಸಲ್ಪಟ್ಟಿರುವುದು. ಇನ್ನು ಮಧ್ಯಾಹ್ನದ ಊಟ ಮತ್ತು ಮಾಹಿತಿ ಹಕ್ಕು ಕಾಯ್ದೆಗಳು ಸುಪ್ರೀಂ ಕೋರ್ಟ್‌ನ ನಿರ್ದೇಶನದಿಂದ ಸಾಧ್ಯವಾದವುಗಳು.

ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳನ್ನು ಅವುಗಳ ಮಾತುಗಳಲ್ಲೇ ಅರ್ಥೈಸುವುದೇ ಅವುಗಳನ್ನು ಚೆನ್ನಾಗಿ ಅರ್ಥಮಾಡಿಕೊಳ್ಳುವ ವಿಧಾನ. ೨೦೦೪ರಲ್ಲಿ ಅಧಿಕಾರಕ್ಕಾಗಿ ಅದು




ಮಾಡಿದ ಘೋಷಣೆ: 'ಆವೃತ ಅಭಿವೃದ್ಧಿ'. ಆವೃತತೆ ಅಥವಾ ಒಳಗೊಳ್ಳುವಿಕೆ ಎಂದರೆ ಸವಲತ್ತುಗಳನ್ನು ವಿತರಿಸುವುದು ಮತ್ತು ಸಬಲೀಕರಣವನ್ನು ಸಾಧ್ಯವಾಗಿಸುವುದು. ಈ ಸಂಬಂಧವಾಗಿ ಮನಮೋಹನ ಸಿಂಗರ ನೇತೃತ್ವದ ಸರ್ಕಾರದ ಸಾಧನೆಗಳನ್ನು ನೋಡೋಣ. ೨೦೦೪ರ ಜಾಗತಿಕ ಹಸಿವಿನ ಸೂಚ್ಯಂಕದ ಪಟ್ಟಿಯಲ್ಲಿನ ೧೧೯ ದೇಶಗಳ ಪೈಕಿ ಭಾರತ ೯೬ನೆಯ ಸ್ಥಾನದಲ್ಲಿದ್ದರೆ, ೨೦೧೨ರಲ್ಲಿ ೭೯ ದೇಶಗಳ ಪಟ್ಟಿಯಲ್ಲಿ ಭಾರತದ ಸ್ಥಾನ ೬೫ನೆಯದಾಗಿದೆ. ಅರ್ಥಾತ್ ನೈಜರ್, ರ್ವಾಂಡಾ, ಸೂಡಾನ್ ಮತ್ತು ಪಾಕಿಸ್ತಾನಗಳಿಗಿಂತಲೂ ಕೆಳಗಿನದಾಗಿತ್ತು. ೨೦೦೪ರ ಹಸಿವಿನ ಸೂಚ್ಯಂಕದಲ್ಲಿ ೯೪ ಮತ್ತು ೯೭ನೆಯ ಸ್ಥಾನದಲ್ಲಿದ್ದ ಮಲಾವಿ ಮತ್ತು ಬರ್ಕಿನಾ ಫಾಸೋಗಳು ೨೦೧೨ರ ಹೊತ್ತಿಗೆ ೪೫ ಮತ್ತು ೪೬ನೆಯ ಸ್ಥಾನಕ್ಕೇರಿದ್ದವು ಎಂಬುದಿಲ್ಲಿ ಗಮನಾರ್ಹ.

ಅಪೌಷ್ಟಿಕತೆ ಮತ್ತು ಶಿಶುಮರಣದ ಪ್ರಮಾಣದ ವಿಚಾರವಾದರೂ ಏನು? ೨೦೦೪ರಲ್ಲಿ ಪ್ರಕಟವಾದ ೧೯೩ ರಾಷ್ಟ್ರಗಳ ಮಕ್ಕಳ ಸ್ಥಿತಿಯ ಬಗೆಗಿನ ಜಾಗತಿಕ ವರದಿಯಲ್ಲಿ ಭಾರತ ಕೆಳಗಿನಿಂದ ೫೩ನೆಯ ಸ್ಥಾನದಲ್ಲಿದ್ದರೆ, ೨೦೧೩ರ ಹೊತ್ತಿಗೆ ೧೯೫ ದೇಶಗಳ ಪೈಕಿ ಭಾರತ ೪೬ನೆಯ ಸ್ಥಾನದಲ್ಲಿತ್ತು. ವಾಸ್ತವದಲ್ಲಿ ಗ್ವಾಟೆಮಾಲಾ ಮತ್ತು ಯುದ್ಧದಿಂದ ಜರ್ಝರಿತವಾದ ಇರಾಕ್ ದೇಶದ ಮಕ್ಕಳಿಗಿಂತಲೂ ಭಾರತದ ಮಕ್ಕಳ ಆಯುಷ್ಯ ಪ್ರಮಾಣ ಕಡಿಮೆಯಿದೆ. ಭಾರತದಲ್ಲಿ ೫ ವರ್ಷಗಳಿಗಿಂತ ಕಡಿಮೆ ವಯಸ್ಸಿನ ಶೇ. ೪೩.೫ ಮಕ್ಕಳು ಕಡಿಮೆ ತೂಕದವರಾಗಿದ್ದರೆ, ಆಫ್ರಿಕಾದ ಇಥಿಯೋಪಿಯಾ, ನೈಜರ್ ಮತ್ತು ನೇಪಾಳ ಹಾಗೂ ಬಾಂಗ್ಲಾ ದೇಶಗಳಿಗಿಂತಲೂ ನಮ್ಮ ಸ್ಥಾನ ಕೆಳಗಿನದು. ಈ ವಿಷಯದಲ್ಲಿ ಭಾರತಕ್ಕಿಂತ ಕೆಳಗಿರುವ ದೇಶ ಟೈಮೋರ್ ಲೆಸ್ಟ್ ಮಾತ್ರ!

ನಮ್ಮ ಶೈಕ್ಷಣಿಕ ವ್ಯವಸ್ಥೆಯ ಸಾಧನೆಗಳ ಬಗ್ಗೆ ಭಾರೀ ಪ್ರಚಾರ ಮಾಡಲಾಗುತ್ತಿದೆ. ಆದರೆ ಕೀನ್ಯಾ, ಕಿರ್ಗಿಸ್ಥಾನ್ ಮತ್ತು ಲೆಸೋಥೋಗಳ ವಯಸ್ಕ ಅಕ್ಷರಸ್ಥರ ಮಟ್ಟ ಭಾರತಕ್ಕಿಂತ ಉತ್ತಮವಾಗಿದೆ. ಭಾರತದಲ್ಲಿ ಸರಾಸರಿ ಶಾಲಾ ಅವಧಿ ೪.೪ ವರ್ಷಗಳಾದರೆ ಚೀನಾದಲ್ಲಿ ಅದು ೭.೫ ವರ್ಷಗಳು. ಮಾನವ ಅಭಿವೃದ್ಧಿ ಸೂಚಕಗಳಲ್ಲಿ ಇದು ಬಹಳ ಚೆನ್ನಾಗಿ ಬಿಂಬಿಸಲ್ಪಟ್ಟಿದೆ. ೨೦೦೪ರಲ್ಲಿ ಕಾಂಗ್ರೆಸ್ ಮುಂದಾಳತ್ವದ ಯು.ಪಿ.ಎ ಆಮ್‌ಆದ್ಮಿಯ ಮಾತನ್ನಾಡುತ್ತಾ ಅಧಿಕಾರಕ್ಕೆ ಬಂದಾಗ ವಿಶ್ವಸಂಸ್ಥೆಯ ಮಾನವ ಅಭಿವೃದ್ಧಿ ಸೂಚಕದಲ್ಲಿ ೧೭೭ ದೇಶಗಳ ಪಟ್ಟಿಯಲ್ಲಿ ಭಾರತ ೧೨೭ನೇ ಸ್ಥಾನದಲ್ಲಿತ್ತು. ೨೦೧೨ರಲ್ಲಿ ಭಾರತ ಈ ಪಟ್ಟಿಯಲ್ಲಿ ೧೩೬ನೇಯ ಸ್ಥಾನದಲ್ಲಿ, ಅಂದರೆ ಘಾನಾ ಟೈಮೋರ್‌ಲೆಸ್ಟ್, ಗ್ವಾಟೆಮಾಲಾಗಳಿಗಿಂತ ಹಿಂದಿದೆ.

ದಾಖಲೆಯ ಮಟ್ಟಿಗೆ ಹೇಳುವುದಾದರೆ, ಭಾರತದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಾರ್ಷಿಕ ೧೦೦ ಬಿಲಿಯನ್ ಡಾಲರ್‌ಗಳಷ್ಟು ಮೊತ್ತವನ್ನು ಸಾಮಾಜಿಕ ಕ್ಷೇತ್ರದ ಕಾರ್ಯಕ್ರಮಗಳ ಮೇಲೆ ಖರ್ಚು ಮಾಡುತ್ತವೆ. ಕೇಂದ್ರ ಪ್ರಾಯೋಜಿತ ಯೋಜನೆಗಳೇ ೨೦೦ರಷ್ಟು ಇವೆ. ಆದರೂ ಮಾನವ ಅಭಿವೃದ್ಧಿ ಸೂಚಕದಲ್ಲಿ ಭಾರತವು ಹೀನಾಯ ಮಟ್ಟದಲ್ಲಿರುವುದಕ್ಕೆ ಕಾರಣ ಭ್ರಷ್ಟಾಚಾರ. ೨೦೦೪ರಲ್ಲಿ ಭ್ರಷ್ಟಾಚಾರ ಸೂಚಕ ಪಟ್ಟಿಯ ಪ್ರಕಾರ ೧೪೬ ದೇಶಗಳ ಸಾಲಿನಲ್ಲಿ ಭಾರತ ೯೦ನೆಯ ಸ್ಥಾನದಲ್ಲಿ ನಿಲ್ಲುತ್ತದೆ. ೨೦೧೨ರಲ್ಲಿ ಅಪೇಕ್ಷಣೀಯ ಅಂಕಗಳು ೧೦೦ ಆಗಿದ್ದಾಗ ಬರೀ ೩೬ ಅಂಕ ಪಡೆದು ೧೭೬ ರಾಷ್ಟ್ರಗಳ ಪೈಕಿ ೯೪ನೆಯ ಸ್ಥಾನದಲ್ಲಿ ಸೆನೆಗಲ್, ಮಂಗೋಲಿಯಾ, ಜಿಭೌತಿ, ಮಾಲ್ಡೋವಾ ಮುಂತಾದ ದೇಶಗಳ ಜೊತೆ ನಿಲ್ಲುತ್ತದೆ!


ಯು.ಪಿ.ಎ ಆಡಳಿತದ ಐದು ವರ್ಷಗಳಲ್ಲಿ ಆರ್ಥಿಕ ಬೆಳವಣಿಗೆ ಶೇ.೮ನ್ನೂ ಮೀರಿತ್ತೆಂದು ಇವರು ಹೇಳಿಕೊಳ್ಳುತ್ತಾರೆ. ಭಾರತ ಅಭಿವೃದ್ಧಿ ಹೊಂದಿದೆ ನಿಜ. ಹಾಗೆಯೇ ಜಾಗತಿಕ ಆರ್ಥಿಕತೆಯೂ ಸಹ ಅಭಿವೃದ್ಧಿ ಹೊಂದಿದೆ. ಜೊತೆಗೆ ಖಾಸಗಿ ಹೂಡಿಕೆಯಿಂದ, ಕೃಷಿ ಕ್ಷೇತ್ರ ಮತ್ತು ಕಾರ್ಖಾನೆಗಳಲ್ಲಿ ಖಾಸಗಿ ಉತ್ಪಾದಕತೆಯಿಂದ ಖಾಸಗಿ ಅನುಭೋಗದಿಂದ ಅಭಿವೃದ್ಧಿಯು ಉತ್ತೇಜಿಸಲ್ಪಟ್ಟಿದೆ. ೨೦೦೭ ಮತ್ತು ೨೦೧೨ರ ನಡುವಿನ ೧೧ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಪ್ರತಿಯೊಂದು ಮೂಲಸೌಕರ್ಯ ಸೂಚ್ಯಂಕದಲ್ಲೂ ಸರ್ಕಾರವು ಕಳಪೆ ಸಾಧನೆ ಮಾಡಿದೆ. ರಸ್ತೆಯನ್ನೇ ನೋಡಿ. ೪೮ ಸಾವಿರ ಕಿ.ಮೀ ರಸ್ತೆ ನಿರ್ಮಾಣವಾಗಬೇಕಿದ್ದಲ್ಲಿ ಬರೀ ೧೭ ಸಾವಿರ ಕಿ.ಮೀ ರಸ್ತೆ ನಿರ್ಮಾಣವಾಗಿದೆ. ಈ ಅವಧಿಯಲ್ಲಿ ೭೮ ಸಾವಿರ ಮೆ.ವ್ಯಾ ವಿದ್ಯುತ್ ಉತ್ಪಾದಿಸುವ ಗುರಿಯಿದ್ದರೆ, ಕೇವಲ ೫೫ಸಾವಿರ ಮೆ.ವ್ಯಾ ವಿದ್ಯುತ್ ಉತ್ಪಾದನೆಯಾಗಿದೆ. ಇದರ ಜೊತೆಗೆ ಇಂಧನ ಪೂರೈಕೆಯಿಲ್ಲದೆ ೩೦ ಸಾವಿರ ಮೆ.ವ್ಯಾ ಸಾಮರ್ಥ್ಯ ತಟಸ್ಥವಾಗಿದೆ. ಸುಲಲಿತ ವ್ಯವಹಾರ ನಡೆಸುವ ಅವಕಾಶದ ಜಾಗತಿಕ ಶ್ರೇಣಿಯಲ್ಲೂ, ಉದಯೋನ್ಮುಖ ದೇಶಗಳೆಂದು ಗುರುತಿಸಲಾಗಿರುವ ೧೮೬ ದೇಶಗಳ ಪೈಕಿ ಭಾರತ ೧೩೨ನೆಯ ಸ್ಥಾನದಲ್ಲಿದೆ.

ಇಲ್ಲಿ ಎಲ್ಲ ಚಟುವಟಿಕೆಗಳ ಮೂಲದಲ್ಲೂ ರಾಜಕಾರಣವೇ ಇದೆ. ದೇಶವನ್ನು ಕಾಡುತ್ತಿರುವ ಪ್ರತಿಯೊಂದು ಸಮಸ್ಯೆಗೂ ಕಾಂಗ್ರೆಸ್ ಒಂದು ಹೆಲಿಕಾಪ್ಟರ್ ಪರಿಹಾರವನ್ನು ಕಂಡುಕೊಂಡಿದೆ. ಗ್ರಾಮೀಣ ಆರ್ಥಿಕತೆಯು ಸಂಕಷ್ಟದಲ್ಲಿದೆ. ಕಾರ್ಖಾನೆಯ ಉದ್ಯೋಗಗಳು ಈ ಸಂಕಷ್ಟಕ್ಕೆ ಪರಿಹಾರವಾದೀತು. ಇದಕ್ಕೆ ಪ್ರತಿಯಾಗಿ ಯು.ಪಿ.ಎ, ಮಹಾತ್ಮಾ ಗಾಂಧಿ ಉದ್ಯೋಗ ಖಾತರಿ ಎಂಬ 'ಧ್ವಂಸಾತ್ಮಕ' ಯೋಜನೆಯೊಂದನ್ನು ಸೃಷ್ಟಿಸಿದ್ದು, ಇದು ಕೃಷಿಕರ ಆದಾಯಕ್ಕೆ ಸಂಚಕಾರ ತಂದಿದೆ. ಕೃಷಿಯನ್ನು ಆರ್ಥಿಕವಾಗಿ ಸಶಕ್ತಗೊಳಿಸುವುದಕ್ಕಾಗಿ ಆ ಕ್ಷೇತ್ರದಲ್ಲಿ ಹೂಡಿಕೆ ಮಾಡಬೇಕು. ಆದರೆ ಚುನಾವಣೆಯ ಮೇಲೆ ಕಣ್ಣಿಟ್ಟಿರುವ ಯು.ಪಿ.ಎ ಸಾಲ ಮನ್ನಾ ಕಾರ್ಯಕ್ರಮವನ್ನು ಬ್ಯಾಂಕುಗಳ ಮೇಲೆ ಹೇರಿದೆ. ಶಿಕ್ಷಣ ಕ್ಷೇತ್ರದ ಗುಣ ಮತ್ತು ಪ್ರಮಾಣದ ಸಮಸ್ಯೆಯನ್ನು ಶಿಕ್ಷಣದ ಹಕ್ಕಿನ ಮೂಲಕ ಹಲವು ನಿಯಂತ್ರಣಗಳುಳ್ಳ ಖಾಸಗಿ ಕ್ಷೇತ್ರದ ಮೇಲೆ ಹೇರಿಬಿಟ್ಟಿತು. ಉತ್ಪಾದನೆಯ ಪುನರುಜ್ಜೀವನಕ್ಕೆ ಅಗತ್ಯವಿರುವುದು ದಕ್ಷ ವಿಲೇವಾರಿ ಮತ್ತು ತೆರಿಗೆ ವ್ಯವಸ್ಥೆಯ ಸುಧಾರಣೆ. ಆದರೆ ಯು.ಪಿ.ಎ ಮಾಡಿದ್ದೇನು? ವಿಶೇಷ ಆರ್ಥಿಕ ವಲಯ ಎಂಬ ಭೂಗಳ್ಳ ಯೋಜನೆಯನ್ನು ಬೇಕಾಬಿಟ್ಟಿ ಹರಡಿಬಿಟ್ಟಿತು. ಆರ್ಥಿಕತೆಯನ್ನು ಹಾಳುಮಾಡುವ ಹಣದುಬ್ಬರದ ಮೂಲವಿರುವುದು ಆಹಾರದ ಆರ್ಥಿಕತೆಯಲ್ಲಿ. ಉತ್ಪಾದನೆಯನ್ನು ಉತ್ತೇಜಿಸುವುದಕ್ಕೆ ವ್ಯರ್ಥವಾಗುತ್ತಿರುವುದನ್ನು ನಿಯಂತ್ರಿಸಿ, ದಕ್ಷ ವಿತರಣೆಯನ್ನು ಸಾಧ್ಯವಾಗಿಸುವುದಕ್ಕೆ ಒಂದು ಹೊಸ 'ಅಮುಲ್' ನ ಅಗತ್ಯವಿದೆ. ಆದರೆ ಅಗ್ಗದ ಧಾನ್ಯದ ಆಶ್ವಾಸನೆಯ ಮೂಲಕ ಮತದಾರರನ್ನು ಪೂಸಿ ಹೊಡಿಯುವುದಷ್ಟೇ ಕಾಂಗ್ರೆಸ್ ಕೈಗೊಂಡ ಕ್ರಮ.

ಅಧಿಕಾರವನ್ನು ಕಾಪಾಡಿಕೊಳ್ಳಲು ಒಂದು ಗ್ರಾಹಕ ವರ್ಗವನ್ನು ಸೃಷ್ಟಿಸಿಕೊಂಡು ಅದಕ್ಕೆ ಆಶ್ವಾಸನೆಗಳನ್ನು ವಿತರಿಸುವ ಅಭ್ಯಾಸವನ್ನು ಕಾಂಗ್ರೆಸ್ ಸಾಂಸ್ಥಿಕೀಕರಣಗೊಳಿಸಿಬಿಟ್ಟಿದೆ. ಈ ಆಡಳಿತಾವಧಿಯ ಪ್ರಮುಖ ಸಾಧನೆಯೆಂದರೆ ಅದು ಅಧಿಕಾರದಲ್ಲಿ ಉಳಿದಿರುವುದು. ಯು.ಪಿ.ಎ.ನ ಈ ಪರಿ ಸೋಲುಗಳ ಸರಮಾಲೆಯ ಮಧ್ಯೆಯೂ ಅದನ್ನು ಪದಚ್ಯುತಗೊಳಿಸುವುದು ಒತ್ತಟ್ಟಿಗಿರಲಿ, ಅದನ್ನು ಕಟ್ಟಿ ಹಾಕಲೂ ವಿರೋಧ ಪಕ್ಷಕ್ಕೆ ಸಾಧ್ಯವಾಗಿಲ್ಲ ಎನ್ನುವುದು ಮಾತ್ರ ದೊಡ್ಡ ಅಚ್ಚರಿ!

**(ಮೂಲ: ಶಂಕರ ಐಯ್ಯರ್(ಖ್ಯಾತ ಅರ್ಥಶಾಸ್ತ್ರಜ್ಞರು)**
**ಕನ್ನಡಕ್ಕೆ: ಎಂ ರಾಜು**
**ಕೃಪೆ: *ದ ಇಂಡಿಯನ್ ಎಕ್ಸ್‌ಪ್ರೆಸ್*)**

# ಸಮಕಾಲೀನ | ನಮ್ಮ ಪಂಚಾಯ್ತ್ ರಾಜ್ ಎತ್ತ ಸಾಗಿದೆ?





**ಭಾ**ರತದ ವಿವಿಧ ನೆಲೆಗಳ–ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಆಡಳಿತಾತ್ಮಕ ಇತ್ಯಾದಿ–ಸಮಸ್ಯೆಗಳನ್ನು ಸಮಗ್ರವಾಗಿ ಅರಿಯಲು ಯತ್ನಿಸುವವರೆಲ್ಲರೂ ಸಾಮಾನ್ಯವಾಗಿ ಆಡುವ ಒಂದು ಮಾತೆಂದರೆ, ಈ ಸಮಸ್ಯೆಗಳು ಒಂದರೊಳಗೊಂದು ಹಾಸುಹೊಕ್ಕಾಗಿ ಚಿತ್ರ ಎಷ್ಟು ಜಟಿಲವಾಗಿದೆ ಎಂದರೆ, ಪರಿಹಾರದ ಹುಡುಕಾಟವನ್ನು ಎಲ್ಲಿಂದ ಆರಂಭಿಸಬೇಕು ಎಂಬುದರ ಸುಳಿವೂ ಸಿಗದಾಗಿದೆ ಎಂಬುದಾಗಿದೆ. ಆದರೆ ಇದಕ್ಕೆ ಕಾರಣವೇನು ಎಂಬುದರ ಬಗ್ಗೆ ಮಾತ್ರ ಇವರಾರೂ ಹೆಚ್ಚು ತಲೆ ಕೆಡಿಸಿಕೊಂಡಿಲ್ಲ. ಏಕೆಂದರೆ ಇವರಾರೂ ಭಾರತವೆಂಬ ಈಗಿರುವ ರಾಷ್ಟ್ರ ವ್ಯವಸ್ಥೆ ಮತ್ತು ಅದನ್ನು ಪೋಷಿಸುತ್ತಿರುವ ಆಡಳಿತ ವಿನ್ಯಾಸದಾಚೆಗೆ ಹೋಗಿ ಯೋಚಿಸಲಾರದವರಾಗಿದ್ದರೆ. ಮತ್ತು ಹಾಗೆ ಯೋಚಿಸುವುದು ರಾಷ್ಟೀಯ ಪಾಪವಾದೀತೆಂದು ನಂಬಿದವರಾಗಿದ್ದಾರೆ. ಆದರೆ ರಾಷ್ಟ್ರ, ರಾಷ್ಟ್ರೀಯತೆಗಳೆಂಬುವುದು ಮೂಲತಃ ಅಸ್ತಿತ್ವಕ್ಕೆ ಬಂದುದು ಸಂಬಂಧಿತ ಜನ ಸಮುದಾಯಗಳ ಕ್ಷೇಮಾಭಿವೃದ್ಧಿಯ ದೃಷ್ಟಿಯಿಂದಲೇ ಹೊರತು, ಕೆಲವರ ಕೇವಲ ಭಾವನಾತ್ಮಕ ತೃಪ್ತಿಗಾಗಿ ಅಲ್ಲ ಎಂಬುದನ್ನು ಅರಿಯಬಲ್ಲವರು ಇದರಾಚೆ ಬಂದು ಯೋಚಿಸಲಾರಂಭಿಸಿದೊಡನೆ ಗೊತ್ತಾಗುತ್ತದೆ, ಭಾರತವೆಂಬುದು ಇಂದು ಒಂದು ಜಟಿಲ ಸಮಸ್ಯೆಯಾಗಿ ಕಾಣತೊಡಗಿರುವುದಕ್ಕೆ , ಭಾರತವನ್ನು ಒಂದು ರಾಷ್ಟ್ರವಾಗಿ ರೂಪಿಸಿದ ವಿನ್ಯಾಸದಲ್ಲೇ ಮತ್ತು ಅದನ್ನು ಈ ಅರವತ್ತಾರು ವರ್ಷಗಳುದ್ದಕ್ಕೂ ಪೋಷಿಸಿಕೊಂಡು ಬರುತ್ತಿರುವ ಪ್ರಕ್ರಿಯೆಗಳ ರೀತಿ ನೀತಿಗಳಲ್ಲೇ ಮೂಲ ದೋಷವಿರುವುದೇ ಮುಖ್ಯ ಕಾರಣ ಎಂದು.

ಭಾರತವಿನ್ನೂ ಬ್ರಿಟಿಷರ ಕೈಯಲ್ಲಿದ್ದು, ಅದರ ಬಿಡುಗಡೆಯ ಪ್ರಕ್ರಿಯೆ ನಡೆಯುತ್ತಿದ್ದಾಗ ಭಾರತವೆಂಬುದು ಒಂದು ರಾಷ್ಟ್ರವಾಗಿ ಇಂದಿನ ಸ್ವರೂಪದಲ್ಲಿರಲಿಲ್ಲ. ಭಾರತ ಈ ಸ್ವರೂಪ ಪಡೆದದ್ದು ನಮ್ಮ ಸಂವಿಧಾನ ರಚನೆಯ ಮೂಲಕ. ಇದಕ್ಕೂ ಬಹು ಮೊದಲು ಗಾಂಧಿ ರಾಷ್ಟ್ರ ಹೀಗೆ ರೂಪುಗೊಂಡು ಈ ಜಟಿಲತೆಯ ನಿರ್ಣಾಯಕ ಸಮಸ್ಯೆಯನ್ನು ಎದುರಿಸಬೇಕಾಗುವುದನ್ನು ಮುನ್ನೋಡಿ, ಭಾರತವೆಂಬುದು ತನ್ನ ಪರಂಪರೆಯ ಸತ್ವದಿಂದ ಪುನರುಜ್ಜೀನಗೊಂಡ ಗ್ರಾಮಗಳ ಒಕ್ಕೂಟವಾಗಿ ಒಂದು ರಾಷ್ಟ್ರವೆನ್ನಿಸಿಕೊಳ್ಳಬೇಕೆಂದು ಸೂಚಿಸಿದ್ದರು. ಅವರ ನೇತೃತ್ವದ ಸ್ವಾತಂತ್ರ್ಯ ಹೋರಾಟದ ಆಶಯ ಮತ್ತು ಅದರ ಜೊತೆಯಲ್ಲಿ ಜೋಡಣೆಗೊಂಡಿದ್ದ ಕಾರ್ಯಕ್ರಮಗಳ ಮೂಲ ಮಾತೃಕೆಗಳೂ ಆದನ್ನೇ ಧ್ವನಿಸುತ್ತಿದ್ದವು. ಆದರೆ ಪಶ್ಚಿಮದ ಪ್ರಜಾಪ್ರಭುತ್ವದ ಮಾದರಿಗಳಿಂದ ತಂತಮ್ಮದೇ ಕಾರಣಗಳಿಂದಾಗಿ ಮರುಳಾಗಿದ್ದ ನಮ್ಮ ಸಂವಿಧಾನ ಕರ್ತೃಗಳು, ಗಾಂಧೀಜಿಯ ಮುನ್ನೋಟವನ್ನು 'ಹಿಂದುಳಿದಿರುವಿಕೆ'ಯ ಸಂಕೇತವೆಂದು ತಿರಸ್ಕರಿಸಿ, ಏಕಾತ್ಮಕವಾದ ಮತ್ತು ಇಂದು ನಿಧಾನವಾಗಿ ಗೊತ್ತಾಗುತ್ತಿರುವಂತೆ ಒಂದು ಬಲಿಷ್ಠ ಕೇಂದ್ರದಿಂದ ನಿರ್ವಹಿಸಲಾಗದ ರಾಷ್ಟ್ರವೊಂದನ್ನು ರಚಿಸಿದರು. ಇಂದು ನರೇಂದ್ರ ಮೋದಿಯೆಂಬ ನವೋದಿತ 'ಉಕ್ಕಿನ ಮನುಷ್ಯ' ಮಾತ್ರ ಈ ರಾಷ್ಟ್ರವನ್ನು ಅಧಃಪತನದಿಂದ ಉಳಿಸಬಲ್ಲ ಎಂದು ಕೆಲವು ವಲಯಗಳಿಂದ ಗಟ್ಟಿಯಾಗಿ ಕೇಳಿಬರುತ್ತಿರುವ ಕೂಗಿನ ಹಿಂದೆ ಈ ರಾಷ್ಟ್ರ ರಚನೆಯ ತಪ್ಪು ಎದ್ದು ಕಾಣುತ್ತಿದೆ.

ಆದರೆ ಅಕಸ್ಮಾತ್ ಮೋದಿ ಬಂದರೂ ಆತ ಎಂತಹ ನಿರ್ದಾಕ್ಷಿಣ್ಯ, ಕಠಿಣ ಮತ್ತು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡರೂ(ಅವು ಈ ದೇಶದಲ್ಲಿ ತಳೆಯುವ ವಿವಿಧ ಸಾಮಾಜಿಕ–ಆರ್ಥಿಕ ರೂಪಗಳ ಪರಿಣಾಮಗಳ ವಿಷಯ ಇಲ್ಲಿ ಬೇಡ.) ಅದು ಈ ದೇಶದ ಸಮಸ್ಯೆಗಳನ್ನು ತಹಬಂದಿಗೆ ತರಲು ಸಾಧ್ಯವೇ ಎಂಬುದರ ಬಗ್ಗೆ ಅನುಮಾನಗಳಿವೆ. ಕಾರಣ, ಆತ ಕೂಡ ಕೆಲಸ ಮಾಡಬೇಕಾಗಿರುವುದು ಇದೇ ರಾಷ್ಟ್ರ ವ್ಯವಸ್ಥೆಯ ಜಟಿಲ ಸಾಧನ–ಸಲಕರಣೆಗಳ ಮೂಲಕವೇ; ಅವುಗಳ ಜಟಿಲ ವಿನ್ಯಾಸಗಳೊಂದಿಗೇ. ಭಾರತವೆಂಬುದು ಸಾಮಾನ್ಯ ಪ್ರಜೆಯೊಬ್ಬನಿಗೆ ಭಾವನೆಯ ನೆಲೆಯಲ್ಲಿ ಅಮೂರ್ತವಾಗಿ ತನ್ನದೆನ್ನಿಸುವಂತೆ ತನ್ನ ಭೌಗೋಳಿಕ ಗಾತ್ರ ಮತ್ತು ಧರ್ಮ, ಜಾತಿ, ನಂಬಿಕೆ, ಸಂಪ್ರದಾಯ, ಆಹಾರ ಇತ್ಯಾದಿ ವಿಷಯಗಳ ವೈವಿಧ್ಯಗಳಿಂದಾಗಿ ತನ್ನದೆಂಬ ಮೂರ್ತ ಗ್ರಹಿಕೆಗೆ ನಿಲುಕಲಾರದ್ದು. ಈ ಅಮೂರ್ತ ಭಾವನೆ ಮತ್ತು ಮೂರ್ತ ವಾಸ್ತವಗಳ ನಡುವಣ ಕಂದಕ ಮೂಲತಃ ಭೌತಿಕ ಮತ್ತು ಮಾನಸಿಕ ದೂರಗಳಿಗೆ ಸಂಬಂಧಿಸಿದ್ದು ಮತ್ತು ಇಲ್ಲಿ ಮುಖ್ಯವಾದ ಸಂಗತಿಯೆಂದರೆ ಇದು ಮನುಷ್ಯ ಸಹಜವಾದ ಅರಿವಿನ ಮಿತಿಯಾಗಿದೆ ಎಂಬುದು. ಇದನ್ನು ಸರ್ವಾಧಿಕಾರ ಆಡಳಿತ ವಿಧಾನಗಳ ಮೂಲಕ ಮತ್ತು ಅದರ ವಿವಿಧ ಪರಿಣಾಮಗಳಿಗೆ(ಉದಾ: ಎಲ್ಲ ಸಾಂಸ್ಕೃತಿಕ ಮತ್ತು ಧಾರ್ಮಿಕ ವೈವಿಧ್ಯತೆಗಳನ್ನು ಇಸ್ತ್ರಿ ಮಾಡಿ ಭಾರತೀಯತೆಯೆಂಬ ಏಕಸಂಸ್ಕೃತಿಯ 'ಮಡಿ' ಸೃಷ್ಟಿ) ಒಳಗಾಗುವ ಮೂಲಕ ಮಾತ್ರ ಪರಿಹರಿಸಿಕೊಳ್ಳಬಹುದೇನೋ;ಅದೂ ತಾತ್ಕಾಲಿಕವಾಗಿ ಮಾತ್ರ. ಮೋದಿಯ ಆಗಮನದ ಬಗೆಗಿನ ಆತಂಕದ ಮೂಲ ಇರುವುದು ಇಲ್ಲೇ.

ಅದೇನೇ ಇರಲಿ, ಇಲ್ಲಿ ಮುಖ್ಯ ಸಂಗತಿ ಎಂದರೆ; ಭಾರತದಂತಹ ಭೌಗೋಳಿಕವಾಗಿ ಬೃಹತ್ತಾದ ದೇಶದಲ್ಲಿನ ಅಷ್ಟೇ ಬೃಹತ್ತಾದ ವೈವಿಧ್ಯತೆಗಳುಳ್ಳ ಬೃಹತ್ ಜನಸಮೂಹವನ್ನು ಒಂದೇ ಆರ್ಥಿಕ ಮತ್ತು ಸಾಮಾಜಿಕ ಎಳೆಯ ದಾರದಿಂದ ಒಂದು ಆಧುನಿಕ ರಾಷ್ಟ್ರದ ವಿನ್ಯಾಸದಲ್ಲಿ ಹೊಲೆದು ಒಗ್ಗೂಡಿಸಲು ಹೋದರೆ ಅಲ್ಲಿ ಪ್ರಜಾತಂತ್ರ ಕುಸಿದು ಬೀಳತೊಡಗುತ್ತದೆ. ಈ ಸಮಸ್ಯೆಯನ್ನೇ ನಾವಿಂದು ಎದುರಿಸುತ್ತಿರುವುದು. ಏಕೆಂದರೆ, ಈ ರಾಷ್ಟ್ರ ವಿನ್ಯಾಸವು ಬೃಹತ್ ಆಡಳಿತ ವಿನ್ಯಾಸಗಳ, ಬೃಹತ್ ಯೋಜನೆಗಳ, ಬೃಹತ್ ತಂತ್ರಜ್ಞಾನಗಳ, ಬೃಹತ್ ಹಣಕಾಸಿನ ರಚನೆಗಳನ್ನು ಒತ್ತಾಯಿಸಿ ಅವು ಮೇಲೆ ಸೂಚಿಸಿದಂತಹ ಭೌತಿಕ ಮತ್ತು ಮಾನಸಿಕ ದೂರಗಳ ಸೃಷ್ಟಿಗೆ ಕಾರಣವಾಗುತ್ತವೆ. ಇದರಿಂದ ಎಲ್ಲವೂ ಯಾಂತ್ರಿಕವೂ, ಸಂವೇದನಾಹೀನವೂ ಆಗಿ ಅದಕ್ಷತೆ ಅಪ್ರಾಮಾಣಿಕತೆ ಮತ್ತು ಭ್ರಷ್ಟಾಚಾರಗಳು (ಮತ್ತು ಅದರ ಪರೋಕ್ಷ ಪರಿಣಾಮಗಳಾದ ಸಾಮಾಜಿಕ ಅನೈತಿಕತೆಯ ಅನೇಕ ಅನಾಚಾರಗಳು) ಬೆಳೆದು, ಈ ರಾಷ್ಟ್ರ ವಿನ್ಯಾಸವೆಂಬುದು ಅಲ್ಲಲ್ಲಿ ಮತ್ತು ಕ್ರಮೇಣ ಎಲ್ಲೆಲ್ಲಿಯೂ ಕುಸಿಯತೊಡಗುತ್ತದೆ. ಇದನ್ನೇ ಬೇರೆ ಮಾತುಗಳಲ್ಲಿ ಹೇಳುವುದಾದರೆ ಇಂದಿನ ರಾಷ್ಟ್ರ ರಚನೆಯ ವಿನ್ಯಾಸದಲ್ಲೇ ಅಪ್ರಾಮಾಣಿಕತೆ, ಅದಕ್ಷತೆ ಮತ್ತು ಭ್ರಷ್ಟಾಚಾರ ಹಾಗೂ ಇವುಗಳ ಮೂಲದಲ್ಲಿರುವ ಇದು ನನ್ನದು, ನನ್ನ ಜನಗಳದ್ದು ಎಂಬ ಭಾವನೆಯ ಗೈರು ಹಾಜರಿ ಅಂತರ್ನಿಹಿತವಾಗಿದೆ. ಹಾಗಾಗಿ ಇದೊಂದು ಈಗ ಕಾನೂನು ಕಟ್ಟಲೆ,





ನೀತಿ ಸಂಹಿತೆ ಇತ್ಯಾದಿಗಳು ಬರೆಯಲ್ಪಟ್ಟಿರುವ ಸಂವಿಧಾನವೆಂಬ ಕಾಗದ ಪತ್ರದ ಮೇಲೆ ಮಾತ್ರ ಬದುಕುತ್ತಿರುವ– ಭಾವ ಸಂಬಂಧಗಳ ಕೊಂಡಿಗಳನ್ನೇ ಕಳೆದುಕೊಂಡಿರುವ– ರಾಷ್ಟ್ರ. ಸರಳವಾಗಿ ಹೇಳುವುದಾದರೆ ಇದೊಂದು ಕಾಗದದ ರಾಷ್ಟ್ರ. **Paper Tiger** ಇದ್ದಂತೆ **A Paper Nation.** ಅದೀಗ ಹರಿದು ಹೋಗುತ್ತಿದೆ.

ಈ ಸಮಸ್ಯೆಗೆ ಒಂದೇ ಮದ್ದು: ಅದು ಇದಕ್ಕೆಲ್ಲ ಕಾರಣವಾದ ಭೌತಿಕ ಮತ್ತು ಮಾನಸಿಕ ದೂರಗಳನ್ನು ಪರಿಹರಿಸಬಲ್ಲ ಅಧಿಕಾರ ವಿಕೇಂದ್ರೀಕರಣದ ರಾಜಕಾರಣ. ಇಂದಿನ ಪರಿಸ್ಥಿತಿಗೆ ತಕ್ಕ ಹಾಗೂ ಸಾಧ್ಯ ರೂಪಗಳಲ್ಲಿ ಸ್ವಾಯತ್ತತೆಯುಳ್ಳ ಸಣ್ಣ ಸಣ್ಣ ಆಡಳಿತ ಘಟಕಗಳನ್ನು ಆಧರಿಸಿ ರಾಷ್ಟ್ರ ವ್ಯವಸ್ಥೆಯ ಪುನರ್‌ಸಂಘಟನೆ. ಇಲ್ಲಿ ದೂರಗಳ ಸಮಸ್ಯೆ ಇಲ್ಲದೆ ಎಲ್ಲ ಎದುರಾಬದುರಾ(ಗ್ರಾಮ ಸಭೆ ಅಥವಾ ಬಡಾವಣಾ ಸಭೆಗಳಲ್ಲಿ) ನಡೆಯಲು ಸಾಧ್ಯವಾಗಿ ಆಡಳಿತವೆಂಬುದು ಸ್ವಯಮಾಡಳಿತವಾಗಿ ಎಲ್ಲವೂ ಪಾರದರ್ಶಕವಾಗಲು ಸಾಧ್ಯವಾಗುತ್ತದೆ. ಆಗ ಅಭಿವೃದ್ಧಿ ಎಂಬುದು ಸ್ಥಳೀಯ ಎಲ್ಲೆಗಳಲ್ಲಿ ಮಾತ್ರ ಕಲ್ಪಿತವಾಗಿ, ತಂತ್ರಜ್ಞಾನದ ಹಾವಳಿ ತಹಬಂದಿಗೆ ಬಂದು ಹಣದ ವ್ಯವಹಾರ ಸೀಮಿತ ಚೌಕಟ್ಟಿಗೆ ಒಳಗಾಗುತ್ತದೆ. ಜನರ ನಿರೀಕ್ಷೆಗಳೂ ಸಾಮಾನ್ಯ ಸರಾಸರಿಗೊಳಪಟ್ಟು ವರ್ಗ ವಿಘಟನೆ ಮತ್ತು ಪ್ರತ್ಯೇಕಗೊಂಡ ಹಿತಾಸಕ್ತಿಗಳು, ಅಸಮಾನತೆ ಹಾಗೂ ಇದರ ಪರಿಣಾಮಗಳಾದ ವರ್ಗ ವೈಷಮ್ಯ, ಬಿಗುವು, ಅಶಾಂತಿಗಳು ತಡೆಯಲ್ಪಡುತ್ತವೆ. ಇದೇ ಗಾಂಧೀಜಿಯ 'ಗ್ರಾಮ ಸ್ವರಾಜ್ಯ'ದ ಹಿಂದಿರುವ ಮೂಲ ಚಿಂತನೆ, ಗುಟ್ಟು, ಮಹತ್ವ. ಆದರೆ ನಮ್ಮ ಸಂವಿಧಾನ ರಚನಾ ಸಭೆ ಆಧುನಿಕ ರಾಷ್ಟ್ರ ಕಟ್ಟುವ ಹುಮ್ಮಸ್ಸಿನಲ್ಲಿ ಇದನ್ನು ಪರಿಗಣನೆಗೇ ತೆಗೆದುಕೊಳ್ಳದೇ ಮುಕ್ತಾಯಗೊಳ್ಳುತ್ತಿದ್ದಾಗ, ಅದರ ಸದಸ್ಯರಾಗಿದ್ದ ಓರ್ವ ಅನಾಮಿಕ ಗಾಂಧಿವಾದಿ ಇದರ ಪ್ರಸ್ತಾಪವೆತ್ತಿ ಹಠ ಮಾಡಿದಾಗ, ಗಾಂಧಿಯವರ ಈ 'ಸ್ವರಾಜ್ಯ'ದ ಪರಿಕಲ್ಪನೆಯನ್ನು ಪಂಚಾಯತ್ ರಾಜ್ ವ್ಯವಸ್ಥೆಯ ಹೆಸರಿನಲ್ಲಿ ನೆಪ ಮಾತ್ರಕ್ಕೆ ಸಂವಿಧಾನದಲ್ಲಿ ಅಳವಡಿಸಲಾಯಿತು. ಮುಂದೆ ಸಮಾಜವಾದಿಗಳು ಗ್ರಾಮ ಸ್ವರಾಜ್ಯದ ಅಣಕ ಮಾತ್ರದಂತಿದ್ದ ಈ ಪರಿಕಲ್ಪನೆಯನ್ನು 'ಚತುಸ್ತಂಭ ರಾಷ್ಟ್ರ' ಮುಂತಾದ ಪ್ರಯೋಗಗಳ ಮೂಲಕ ಬಲಗೊಳಿಸಲು ಯತ್ನಿಸಿದರಾದರೂ, ಆಧುನಿಕ ರಾಷ್ಟ್ರ ನಿರ್ಮಾಣದ ಜನಪ್ರಿಯ ಘೋಷಣೆಗಳ ರಾಜಕಾರಣದೆದುರು ಅವರು ಸೋತರು.

ಆದರೆ ರಾಜೀವ್ ಗಾಂಧಿ ಪ್ರಧಾನಿಯಾದಾಗ, ಆರಂಭದ ಹೊಸ ಉತ್ಸಾಹ ಮತ್ತು ಹೊಸ ಆಡಳಿತ ವಿಧಾನಗಳ ಅನ್ವೇಷಣೆಯ ಹಾದಿಯಲ್ಲಿ ಪಂಚಾಯ್ತ್ ರಾಜ್ ಎಂಬ ಈ ಪರಿಕಲ್ಪನೆಯ ಮಹತ್ವವನ್ನು ಗುರುತಿಸಿ, ಇದಕ್ಕೊಂದು ಸಾಂವಿಧಾನಿಕ ಸ್ಥಾನಮಾನ ನೀಡಿದರು. ಕರ್ನಾಟಕದಲ್ಲಿ ಈ ಮೊದಲೇ ರಾಮಕೃಷ್ಣ ಹೆಗಡೆ ಮತ್ತು ನಜೀರ್ ಸಾಬ್‌ರ ಆಸಕ್ತಿಯಿಂದಾಗಿ ಈ ವ್ಯವಸ್ಥೆ ಜಾರಿಗೆ ಬಂದಿದ್ದರೂ, ಅದು ಬಲಗೊಂಡು ತಮ್ಮ ಪರಮಾಧಿಕಾರಗಳನ್ನೇ ಮೊಟಕುಗೊಳಿಸುವ ಸಾಧ್ಯತೆಗಳು ಕಂಡುಬಂದಾಗ ಅವರೇ ಅದರ ಬೆಳವಣಿಗೆಯನ್ನು ಸ್ಥಗಿತಗೊಳಿಸಿದ್ದರು. ಈಗ ಸಾಂವಿಧಾನಿಕ ಮಾನ್ಯತೆಯೊಡನೆ ಜಾರಿಯಲ್ಲಿರುವ ಪಂಚಾಯ್ತ್ ರಾಜ್ ವ್ಯವಸ್ಥೆ ಯಾವ ಅರ್ಥದಲ್ಲೂ ಗಾಂಧೀಜಿಯ ಗ್ರಾಮ ಸ್ವರಾಜ್ಯದ ಚಿಂತನೆಯ ಹತ್ತಿರಕ್ಕೆ ಬರುವುದಿಲ್ಲವಾದರೂ, ಅದನ್ನೂ ಈ ವ್ಯವಸ್ಥೆ ತನ್ನ ರಾಜಕೀಯ ಹಸ್ತಕ್ಷೇಪಗಳ ಮೂಲಕ ದುರ್ಬಲಗೊಳಿಸುತ್ತಿದೆ. ಹಾಗಾಗಿ ಪಂಚಾಯ್ತ್ ರಾಜ್ ಸಂಸ್ಥೆಗಳು ರಾಷ್ಟ್ರ ರಾಜಕಾರಣದ ತಾಯಿಬೇರುಗಳಾಗಿ ಬೆಳೆಯದೆ, ರಾಷ್ಟ್ರ ಮತ್ತು ರಾಜ್ಯ ಸರ್ಕಾರಗಳ ಆಶ್ರಯದಲ್ಲಿ ಉಪಜೀವನ ಮಾಡುವಂತಾಗಿದೆ. ಇದರ ಸುಧಾರಣೆಗಾಗಿ ಸದ್ಯದ ರಾಜ್ಯ ಸರ್ಕಾರ ಈ ವ್ಯವಸ್ಥೆಯ ಜೀವನಾಡಿಯಾದ ಗ್ರಾಮಸಭೆಗಳು ಕಡ್ಡಾಯವಾಗಿ ನಡೆಯುವಂತಹ ಕಾನೂನು ಕ್ರಮ ಕೈಗೊಂಡಿದೆಯಾದರೂ, ಅದನ್ನು ರಾಜಕೀಯ ಕಾರಣಗಳಿಗಾಗಿ ವಿವಾದಾಸ್ಪದಗೊಳಿಸಲಾಗಿದೆ.

ಹೀಗೆ, ಇಂದು ಸಮಸ್ಯಾತ್ಮಕವಾಗತೊಡಗಿರುವ ನಮ್ಮ ರಾಷ್ಟ್ರ ವ್ಯವಸ್ಥೆಯನ್ನು ಅದು ಯಾರಿಗಾಗಿ ಮತ್ತು ಯಾರಿಂದ ಆಗಿದೆಯೋ ಆ ಜನತೆಯ ಹಿತದೃಷ್ಟಿಯಿಂದ ಪುನರ್‌ಸಂಘಟಿಸಲು ಸಾಂಕೇತಿಕವಾಗಿಯಾದರೂ ಒಂದು ಆಧಾರವಾಗಬಲ್ಲ ಈ ಪಂಚಾಯ್ತ್‌ರಾಜ್ ವ್ಯವಸ್ಥೆ ಹಲವು ಅಡೆತಡೆಗಳನ್ನೆದುರಿಸುತ್ತಾ ಜೀವ ಹಿಡಿದುಕೊಂಡು ಮುನ್ನಡೆದಿದೆ. ಈ ಮುನ್ನಡೆ ಎತ್ತ ಸಾಗಿದೆ. ಇದರ ಸಾಧನೆ–ವೈಫಲ್ಯಗಳೇನು, ಏಕೆ ಎಂಬುದರ ಅವಲೋಕನದ ಒಂದು ಸಣ್ಣ ಪ್ರಯತ್ನವನ್ನಿಲ್ಲಿ ನಾವು ಮಾಡಿದ್ದೇವೆ. ನಿಮ್ಮ ಪ್ರತಿಕ್ರಿಯೆಗಳಿಗೆ ಸ್ವಾಗತ..–ಸಂಪಾದಕ.

# ಪಂಚಾಯ್ತ್ ರಾಜ್‌ಗೆ ಸ್ವಸಹಾಯ ಸಂಘಗಳ ಮಾದರಿಯೇ ಸೂಕ್ತ

**–ಆರ್.ಪಿ. ವೆಂಕಟೇಶಮೂರ್ತಿ**

**ಪ**ಂಚಾಯತ್ ರಾಜ್ಯ ವ್ಯವಸ್ಥೆಯಲ್ಲಿ ಗ್ರಾಮ ಪಂಚಾಯ್ತಿಗಳ ಪಾತ್ರ ಬಹಳ ಮುಖ್ಯವಾದುದು. ಚುನಾವಣಾ ಭ್ರಷ್ಟಾಚಾರದಿಂದಾಗಿ ಗ್ರಾಮ ಪಂಚಾಯ್ತಿಗಳು ಜನರ ವಿಶ್ವಾಸ ಕಳೆದುಕೊಳ್ಳುತ್ತಿವೆ. ಈಗಿನ ವ್ಯವಸ್ಥೆಯಲ್ಲಿ ಪಂಚಾಯ್ತಿಗಳ ಆಡಳಿತದಲ್ಲಿ ಜನರ ಪಾಲ್ಗೊಳ್ಳುವಿಕೆಗೆ ಅವಕಾಶವೇ ಇಲ್ಲ. ಗ್ರಾಮ ಸಭೆಗಳನ್ನು ೬ ತಿಂಗಳಿಗೊಮ್ಮೆ ಕರೆಯಬೇಕೆಂದು ನಿಯಮ ಇದ್ದರೂ ಈ ಸಭೆಗಳು ಪರಿಣಾಮಕಾರಿಯಾಗಿ ನಡೆಯುತ್ತಿಲ್ಲ. ಇದನ್ನು ಕಾನೂನಿನ ಮೂಲಕ ಸರಿಪಡಿಸುವ ಬದಲು, ಪಂಚಾಯ್ತಿಗಳು ಜನರಿಗೆ ಎಷ್ಟು ಹೊಣೆಗಾರ ಆಗುತ್ತಿವೆ ಮತ್ತು ಜನರು ಏಕೆ ಸಕ್ರಿಯವಾಗಿ ಪಾಲ್ಗೊಳ್ಳುತ್ತಿಲ್ಲ ಎಂದು ಚಿಂತಿಸಬೇಕಿದೆ.

ಗ್ರಾಮ ಪಂಚಾಯ್ತಿ ಚುನಾವಣೆಗೆ ಒಬ್ಬ ವ್ಯಕ್ತಿ ನಿಲ್ಲುವಾಗ ಮತ್ತು ಗೆದ್ದಾಗ ಇರುವ ಹುಮ್ಮಸ್ಸು ನಂತರ ಇಳಿದು ಹೋಗಲು ಹೆಚ್ಚು ಕಾಲ ಬೇಕಾಗುವುದಿಲ್ಲ. ಆತ ಚುನಾವಣೆಗಾಗಿ ಲಕ್ಷಗಟ್ಟಲೆ ಹಣ ಖರ್ಚು ಮಾಡುತ್ತಾನೆ. ಪಂಚಾಯ್ತಿ ಸದಸ್ಯ ಸ್ಥಾನವನ್ನು ಹರಾಜಿಗಿಟ್ಟ ಉದಾಹರಣೆಗಳೂ ಇವೆ. ಸರ್ಕಾರ ನೀಡುವ ಹಳ್ಳಿಯ ನಿಧಿಗಾಗಿ ಯಾರು ಹೆಚ್ಚು ಬಿಡ್ ಮಾಡುತ್ತಾನೋ ಅವನನ್ನು ಅವಿರೋಧವಾಗಿ ಆಯ್ಕೆಯಾಗುವಂತೆ ನೋಡಿಕೊಳ್ಳಲಾಗುತ್ತದೆ. ಹೀಗೆ ಆಯ್ಕೆಯಾಗುವ ಸದಸ್ಯರಿಂದ ಏನನ್ನು ನಿರೀಕ್ಷಿಸಲು ಸಾಧ್ಯ? ಗ್ರಾಮ ಪಂಚಾಯ್ತಿಗಳಿಗಿರುವ ಆರ್ಥಿಕ ಮಿತಿಯಲ್ಲಿ ಇಂತಹ ಸದಸ್ಯರ ಆಸೆಗಳನ್ನು ಪೂರೈಸಲು ಸಾಧ್ಯವೇ ಇಲ್ಲ. ಹಾಗಾಗಿ ಪಂಚಾಯ್ತಿ ಸದಸ್ಯರು ತಮ್ಮ ಚುನಾವಣಾ ಖರ್ಚನ್ನು ಮತ್ತು ಅದರ ಮೇಲಿನ 'ಲಾಭ'ವನ್ನು ಪಡೆದುಕೊಳ್ಳಲು ಬೇರೆ ಮಾರ್ಗಗಳನ್ನು ಹುಡುಕ ಹೊರಡುತ್ತಾರೆ. ಇಂತಹವರಿಗೆ ಬಹು ದೊಡ್ಡ ನಿಧಿಯಾಗಿ ಸಿಕ್ಕಿರುವುದು, ಕೇಂದ್ರ ಸರ್ಕಾರದ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ. ಈ ಯೋಜನೆಯಿಂದ ಒಂದು ಗ್ರಾಮ ಪಂಚಾಯ್ತಿ ಒಂದು



ವರ್ಷದಲ್ಲಿ ೨೫ ಲಕ್ಷದಿಂದ ೧ ಕೋಟಿ ರೂ ತನಕ ಹಣ ಬಂದ ಉದಾಹರಣೆ ಇದೆ ಎಂದರೆ ಸಾಕಲ್ಲವೇ? ಹೊರಗಿನ ವ್ಯವಸ್ಥೆಯು ಪ್ರತಿಯೊಬ್ಬ ಪ್ರಜೆಯ ಮೇಲೂ ಪ್ರಭಾವ ಬೀರುವುದರಿಂದ ಒಂದು ಗ್ರಾಮಪಂಚಾಯ್ತಿಯ ವ್ಯವಸ್ಥೆಯನ್ನು ಪ್ರತ್ಯೇಕವಾಗಿ ಸುಧಾರಣೆ ಮಾಡುವುದು ಸುಲಭದ ಕೆಲಸ ಅಲ್ಲ.

ನಮ್ಮ ಈಗಿನ ಪಂಚಾಯತ್ ರಾಜ್ ವ್ಯವಸ್ಥೆ ಹಳ್ಳಿಯನ್ನು ಕೇಂದ್ರವಾಗಿ ಇಟ್ಟುಕೊಂಡಿಲ್ಲದಿರುವುದು ಬಹುದೊಡ್ಡ ದೋಷ. ಜನರಿಗೆ ಭಾವನಾತ್ಮಕ ಸಂಬಂಧ ಇರುವುದು ತಮ್ಮ ಹಳ್ಳಿಯೊಂದಿಗೇ ಹೆಚ್ಚು. ಹಳ್ಳಿಗಳನ್ನು ಒಳಗೊಂಡ ಈಗಿನ ಗ್ರಾಮ ಪಂಚಾಯ್ತಿ ಕೂಡ ಜನರಿಂದ

ಸ್ವಲ್ಪ ದೂರವೇ ಇರುವ ವ್ಯವಸ್ಥೆಯೇ ಆಗಿದೆ. ಏಕೆಂದರೆ, ಈಗಿನ ವ್ಯವಸ್ಥೆಯಲ್ಲಿ ಪ್ರಜೆಗಳಿಗೂ ಆಡಳಿತಕ್ಕೂ ಸಂಬಂಧವೇ ಇಲ್ಲ. ಐದು ವರ್ಷಗಳಿಗೊಮ್ಮೆ ಮತಹಾಕುವ ಕೆಲಸದ ಹೊರತಾಗಿ, ಕೇಂದ್ರ ಸರ್ಕಾರ ಆಗಲಿ, ರಾಜ್ಯ ಸರ್ಕಾರ ಆಗಲಿ, ಅಥವಾ ಸ್ಥಳೀಯ ಸಂಸ್ಥೆಗಳೇ ಆಗಲಿ, ಯಾವ ಹಂತದಲ್ಲೂ ದೇಶಕಟ್ಟುವ ಕೆಲಸದಲ್ಲಿ ಪ್ರಜೆಗಳು ಪಾಲ್ಗೊಳ್ಳುವ ಅವಕಾಶವೇ ಇಲ್ಲ. ಜನಸಾಮಾನ್ಯರು, ಈ ದೇಶದ ಪ್ರಜೆಗಳಾದರೂ ಪರಕೀಯರಾಗಿದ್ದಾರೆ, ತಮ್ಮ ಹಳ್ಳಿಯಲ್ಲೇ ಇದ್ದೂ ಇಲ್ಲದಂತಾಗಿದ್ದಾರೆ. ಹಾಗಾಗಿಯೇ ದೇಶದ ಬಹುಪಾಲು ಪ್ರಜೆಗಳಿಗೆ ಸಾರ್ವಜನಿಕ ವ್ಯವಸ್ಥೆ ತಮಗೆ ಸಂಬಂಧಿಸಿದ್ದೆಂಬ ಭಾವನೆಯೇ ಬರುವುದಿಲ್ಲ. ತಮ್ಮೂರಿನ ಶಾಲೆ ಇರಬಹುದು, ಆಸ್ಪತ್ರೆ ಇರಬಹುದು, ಊರು ಸಮೀಪದ ಕಾಡಿರಬಹುದು ಅದು ತನ್ನದು ಕೂಡ ಎಂಬ ಭಾವನೆಯನ್ನು ಮೂಡಿಸುವುದೇ ದೇಶದ ಮುಂದಿರುವ ಬಹುದೊಡ್ಡ ಸವಾಲಿನ ಕೆಲಸ. ನಮ್ಮ ಹಿಂದಿನ ರೈತ ಚಳುವಳಿಯ ತಪ್ಪುಗಳನ್ನು ವಿಮರ್ಶಿಸಿಕೊಂಡು ನಾವು 'ಗ್ರಾಮ ವಿಮೋಚನೆ' ಎಂಬ ಆಂದೋಲನವೊಂದನ್ನು ಆರಂಭಿಸಬೇಕಿದೆ. ಮಹಾರಾಷ್ಟ್ರದ ರಾಳೆಗಣಸಿದ್ಧಿಯಲ್ಲಿ ಅಣ್ಣಾ ಹಜಾರೆಯವರು ಮಾಡಿರುವ ಸಾಧನೆಯೇ ನಮಗೆ ಸ್ಫೂರ್ತಿಯಾಗಬೇಕು.

ಪ್ರಜಾಪ್ರಭುತ್ವ ವ್ಯವಸ್ಥೆಗೆ ಚುನಾವಣಾ ಪದ್ಧತಿ ಅಗತ್ಯ. ಆದರೂ ನಮ್ಮ ಚುನಾವಣಾ ಪದ್ಧತಿ ಎಷ್ಟು ಭ್ರಷ್ಟಗೊಂಡಿದೆ ಎಂದು ವಿವರಿಸಿ ಹೇಳಬೇಕಾಗಿಲ್ಲ ಅದರಿಂದಾಗಿ ಹಳ್ಳಿಗಳಲ್ಲಿ ಜಾತೀಯತೆ ಹೆಚ್ಚಾಗಿದೆ, ಗುಂಪುಗಾರಿಕೆಯಿಂದ ಹಳ್ಳಿಗಳು ನಾಶ ಆಗುತ್ತವೆ. ಅದಕ್ಕಿಂತ ಹೆಚ್ಚಾಗಿ ಜನರ ನೈತಿಕ ಪ್ರಜ್ಞೆ, ಕರ್ತವ್ಯ ಪ್ರಜ್ಞೆ ನಾಶವಾಗಿದೆ. ಸ್ವಾವಲಂಬಿಗಳಾಗುವ ಬದಲು ಪರಾವಲಂಬಿಗಳಾಗುತ್ತಿದ್ದಾರೆ. ಈ ಚುನಾವಣಾ ವ್ಯವಸ್ಥೆ ಸುಧಾರಣೆ ಆಗದ ಹೊರತು ಆರೋಗ್ಯಕರ ಗ್ರಾಮಪಂಚಾಯ್ತಿಗಳ ರಚನೆಯಾಗಲು ಸಾಧ್ಯವಿಲ್ಲ, ಪ್ರಜಾಪ್ರಭುತ್ವಕ್ಕೂ ಅರ್ಥವಿಲ್ಲ. ಹಾಗಾಗಿ ಓಟುರಹಿತವಾಗಿ ಗ್ರಾಮ ಸರ್ಕಾರಗಳ ರಚನೆ ಹಾಗೂ ಗ್ರಾಮಪಂಚಾಯ್ತಿಗಳ ರಚನೆ ಕುರಿತು ಚಿಂತಿಸಬೇಕಾದ ತುರ್ತು ಬಂದಿದೆ. ಈ ವಿಚಾರದಲ್ಲಿ ಸ್ವಸಹಾಯ ಸಂಘಗಳ ರಚನೆಯಲ್ಲಿರುವ ಉತ್ತಮ ಅಂಶಗಳು ನಮ್ಮ ನೆರವಿಗೆ ಬರುತ್ತವೆ. ಸ್ವಸಹಾಯ ಸಂಘ ರಚನೆ ಮತ್ತು ಕಾರ್ಯವಿಧಾನ ಪ್ರಜಾಪ್ರಭುತ್ವಕ್ಕೆ ಅತ್ಯುತ್ತಮ ಮಾದರಿ ಎಂಬುದು ನನ್ನ ಖಚಿತ ನಿಲುವು. ಇಲ್ಲಿ ಚುನಾವಣೆಗಳು ನಡೆಯುವುದಿಲ್ಲ. ಒಂದು ಸ್ವಸಹಾಯ ಸಂಘದ ಸದಸ್ಯರ ಸಂಖ್ಯೆ ಕನಿಷ್ಟ ೧೦ ರಿಂದ ಆರಂಭ ಆಗಿ ಗರಿಷ್ಠ ೨೦ ಆಗಿರುತ್ತದೆ. ಇಲ್ಲಿ ಅಧ್ಯಕ್ಷ ಕಾರ್ಯದರ್ಶಿ ರೀತಿಯ ಪದಾಧಿಕಾರ ಇಲ್ಲ. ಆರು ತಿಂಗಳ ಅವಧಿಗೆ ಇಬ್ಬರು ಪ್ರತಿನಿಧಿಗಳನ್ನು



ಅಯ್ಕೆ ಮಾಡಿಕೊಳ್ಳಲಾಗುತ್ತದೆ. ಪ್ರತಿ ವಾರ ಸಂಘದ ಸದಸ್ಯರು ಕಡ್ಡಾಯವಾಗಿ ಸಭೆ ಸೇರಬೇಕು. ಒಂದು ವಾರದ ಹಣ ವ್ಯವಹಾರಗಳನ್ನು ಪ್ರತಿನಿಧಿಗಳು ವಾರದ ಸಭೆಯಲ್ಲಿ ಮುಂದಿಡಬೇಕು. ಆ ವಾರದಲ್ಲಿ ಪ್ರತಿನಿಧಿಗಳು ಸರಿಯಾಗಿ ವ್ಯವಹಾರ ನಡೆಸಿದ್ದಾರೆಯೇ ಇಲ್ಲ ಅವ್ಯವಹಾರ ಮಾಡಿದ್ದಾರೆಯೇ ಎಂಬ ವಿಚಾರ ಸದಸ್ಯರಿಗೆ ತಿಳಿದು ಹೋಗುತ್ತದೆ. ಅವ್ಯವಹಾರ ನಡೆಸಿದ್ದರೆ ತಕ್ಷಣ ಪ್ರತಿನಿಧಿಗಳನ್ನು ಬದಲಾಯಿಸಿಕೊಳ್ಳಲು ಅವಕಾಶ ಇದೆ. ಪ್ರತಿ ಗ್ರಾಮದಲ್ಲಿ ಪ್ರತಿಯೊಬ್ಬ ವಯಸ್ಕ ಪ್ರಜೆ ಇಂತಹ ಸ್ವಸಹಾಯ ಸಂಘದೊಳಗೆ ಸದಸ್ಯನಾಗಿ, ಪ್ರತಿಯೊಂದು ಸಂಘದ ಗ್ರಾಮದ ಅಡಳಿತ ವ್ಯವಸ್ಥೆಗೆ ಅದನ್ನು ಬೇಕಿದ್ದರೆ ಗ್ರಾಮ ಸರ್ಕಾರವೆಂದು ಕರೆದುಕೊಳ್ಳಲಿ. ಒಂದು ವರ್ಷದ ಅವಧಿಗೆ ಒಬ್ಬ ಪ್ರತಿನಿಧಿಯನ್ನು ಕಳಿಸಿಕೊಡುವ ವ್ಯವಸ್ಥೆ ಆಗಬೇಕು. ಮುಂದಿನ ವರ್ಷ ಹೊಸ ಸದಸ್ಯ ನಂತರ ಮತ್ತೊಬ್ಬ ಅಥವಾ ಮತ್ತೊಬ್ಬಳು ಹೀಗೆ ಪ್ರತಿಯೊಬ್ಬ ಪ್ರಜೆಯೂ ಗ್ರಾಮದ ಆಡಳಿತದ ವ್ಯವಸ್ಥೆಯಲ್ಲಿ ಪ್ರತಿನಿಧಿಯಾಗಿ ಬರುವಂತೆ ನೋಡಿಕೊಳ್ಳಬೇಕು. ಪ್ರತಿ ಗ್ರಾಮದಿಂದ ಒಬ್ಬ ಪ್ರತಿನಿಧಿಯನ್ನು ಗ್ರಾಮ ಪಂಚಾಯ್ತಿಗೂ ಕಳಿಸಬೇಕು. ಓಟುರಹಿತವಾದ ಆಡಳಿತ ವ್ಯವಸ್ಥೆಗೆ ನಾನು ಚಿಂತಿಸಿರುವ ವಿಧಾನ ಇದು. ಇದಕ್ಕಿಂತ ಪರಿಣಾಮಕಾರಿಯಾದ ಉತ್ತಮವಾದ ವಿಚಾರವನ್ನು ಪ್ರಜ್ಞಾವಂತರು ಮುಂದಿಟ್ಟರೆ, ಪ್ರಜಾಪ್ರಭುತ್ವದ ಅರೋಗ್ಯಕ್ಕೆ ಒಳ್ಳೆಯ ಕೊಡುಗೆ ನೀಡಿದಂತಾಗುತ್ತದೆ. ಈಗಿನ ವ್ಯವಸ್ಥೆಯೇ ಮುಂದುವರಿಯುವುದಾದರೆ, ಗ್ರಾಮಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ, ಜಿಲ್ಲಾ ಪಂಚಾಯ್ತಿ , ಪುರಸಭೆ ಹಾಗೂ ನಗರಸಭೆಗಳ ಅಧ್ಯಕ್ಷ ಸ್ಥಾನಗಳನ್ನು ಜನರೇ ನೇರವಾಗಿ ಆಯ್ಕೆ ಮಾಡುವಂತಾಗಬೇಕು. ಪ್ರಧಾನಿಯನ್ನೇ ನೇರವಾಗಿ ಆಯ್ಕೆ ಮಾಡಬೇಕೆಂದು ಅಣ್ಣಾ ಹಜಾರೆ ಪ್ರತಿಪಾದಿಸುತ್ತಿದ್ದಾರೆ. ಈ ಬಗ್ಗೆ ದೊಡ್ಡ ಚರ್ಚೆ ನಡೆಯಬೇಕಾಗಿದೆ.

---

## ಜನರ ಸಹಭಾಗಿತ್ವ, ಹೋರಾಟಗಳೇ ದಾರಿ

**–ಅಪೂರ್ವ ಡಿ'ಸಿಲ್ವ**

**ಸ್ವಾ**ವಲಂಬನೆ ಮತ್ತು ವಿಕೇಂದ್ರೀಕರಣದ ತತ್ವಗಳು ಸಮಾಜವಾದಿ ತತ್ವ ಮಿಮಾಂಸೆಯ ಪ್ರಮುಖ ಆಧಾರ ಸ್ತಂಭಗಳು. ಇದು ಕೇವಲ ಭೌತಿಕ ನೆಲೆಯ ವಿಕೇಂದ್ರೀಕರಣವನ್ನು ಮಾತ್ರ ಪ್ರತಿಪಾದಿಸದೆ, ಸಾಂಘಿಕ ನೆಲೆಯ ಬದುಕಿನ ನೈತಿಕತೆಯನ್ನು ಪ್ರತಿಪಾದಿಸುತ್ತದೆ. ಹಳ್ಳಿ ಒಂದು ಮೂಲಘಟಕವಾಗಿ ಸಾಂಘಿಕ ನೆಲೆಯಲ್ಲಿ ಸಾಮರಸ್ಯ, ಸಾಮಾಜಿಕ ನ್ಯಾಯ, ಸಾಂಸ್ಕೃತಿಕತೆ, ಶಿಕ್ಷಣ, ಉದ್ಯೋಗ ಈ ಕ್ಷೇತ್ರಗಳಲ್ಲಿ ಅದು ಸಂಪನ್ನವಾಗಬೇಕಾದರೆ ಅನುಸರಿಸಬೇಕಾದ ರಾಜಕೀಯ ವಿಧಾನವಿದು. ಪಂಚಾಯ್ತ್ ರಾಜ್‌ನ ಘಟಕಗಳಾದ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್, ಗ್ರಾಮ ಪಂಚಾಯತ್ ಮಟ್ಟದ ಭೌಗೋಳಿಕ ವ್ಯಾಪ್ತಿ, ಜನಸಂಖ್ಯೆ, ಶಿಕ್ಷಣ, ಜಾತಿಗಳು, ಸಾಕ್ಷರತೆ, ಕೃಷಿ ಚಟುವಟಿಕೆ, ಕುಟುಂಬವೊಂದು ಹೊಂದಿರುವಂತಹ ಜಮೀನು, ನೀರಿನ ಬಳಕೆ, ಅಂತರ್ಜಲ ಮಟ್ಟ, ವಿದ್ಯುತ್ ಸಂಪರ್ಕ ಇವನ್ನೆಲ್ಲ ಪರಿಗಣನೆಗೆ ತೆಗೆದುಕೊಂಡು ರೂಪಿಸಬೇಕಾದ ಜನಪರ ಕಾರ್ಯಕ್ರಮವಿದು. ಆದರೆ, ೧೨೧ ಕೋಟಿ ನಮ್ಮ ಭಾರತದ ಜನಸಂಖ್ಯೆಯಲ್ಲಿ ಹಳ್ಳಿಗಳೇ ಜೀವದ್ರವ್ಯವಾಗಿ ಕೃಷಿ ಪ್ರಧಾನವಾದ ಚಟುವಟಿಕೆಗಳ ಮೂಲಕ ಆಹಾರ ಒದಗಿಸುತ್ತಿದ್ದರೂ ಇದುವರೆಗೂ ಗ್ರಾಮೀಣ ಅರ್ಥಶಾಸ್ತ್ರವೆಂಬುದೊಂದು ರೂಪುಗೊಳ್ಳಲು ಸಾಧ್ಯವಾಗಿಲ್ಲ.



ಗ್ರಾಮೀಣಾಭಿವೃದ್ಧಿ ಎಂದರೆ ಕಾಯ್ದೆ ಕಾನೂನುಗಳ ರಚನೆ ಮಾತ್ರ ಆಗದೆ ಗ್ರಾಮೀಣ ಸಮಾಜದ ನೈತಿಕ ನೆಲೆಗಟ್ಟನ್ನು ಕಾಪಾಡುವ ರೀತಿಯಲ್ಲಿ ಕಾರ್ಯಕ್ರಮಗಳನ್ನು ರೂಪಿಸಬೇಕಾಗುತ್ತದೆ. ಮಹಿಳಾ ಸಂಘಗಳ ಮೂಲಕ ಸಣ್ಣ ಘಟಕಗಳ ಗುಡಿ ಕೈಗಾರಿಕೆಗಳಿಗೆ ಉತ್ತೇಜನ ನೀಡಿ ಬಡ ಕುಟುಂಬಗಳನ್ನು ರಕ್ಷಿಸಬೇಕಾಗಿದೆ. ಬಹಳಷ್ಟು ಮಂದಿ ಗುತ್ತಿಗೆಗೆ ತಮ್ಮ ಜಮೀನನ್ನು ಕೊಟ್ಟು ಬೇರೆ ಜಮೀನುಗಳಲ್ಲಿ ಕೂಲಿಯಾಳಾಗಿ ಹೋಗುವುದು ಸರ್ವೇಸಾಮಾನ್ಯವಾಗಿದೆ. ಸರ್ಕಾರಿ ಕಾರ್ಯಕ್ರಮವಾದ ಚೆಕ್‌ಡ್ಯಾಂ, ಇಂಗು ಗುಂಡಿಗಳ ಮೂಲಕ ಅಂತರ್ಜಲವನ್ನು ಹೆಚ್ಚಿಸುವ ಕಾರ್ಯಕ್ರಮಗಳಿದ್ದರೂ, ಕೆರೆಗಳನ್ನು ಉಳಿಸದಿದ್ದರೆ ಇದ್ಯಾವುದೂ

ಪ್ರಯೋಜನಕ್ಕೆ ಬರುವುದಿಲ್ಲ. ಚಾಮರಾಜನಗರದಂತಹ ಕಡೆ ಕೈಗಾರಿಕಾಭಿವೃದ್ಧಿಗೆ ಹಳ್ಳಿಗಳ ಸಾವಿರಾರು ಎಕರೆ ಕಬಳಿಸಿ ಗ್ರಾನೈಟ್ ಪಾರ್ಕ್‌ನಂತಹ ಯೋಜನೆಗೆ ಬಜೆಟ್‌ನಲ್ಲಿ ಅನುಮೋದನೆ ಕೊಟ್ಟಿರುವುದು ದುರಂತದ ಸಂಗತಿ. ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅಧಿಕಾರವನ್ನು ಮೀರಿ ಕಲ್ಲು ಗಣಿಗಾರಿಕೆ, ದಲಿತ ಭೂಕಬಳಿಕೆ, ಸೋಲಿಗರನ್ನು ಕಾಡಿನಿಂದ ಹೊರಹಾಕುವ ಯೋಜನೆಗಳು, ಗೃಹ ನಿರ್ಮಾಣಕ್ಕೆ ಕೈಗಾರಿಕೆಗಳಿಗೆ ಒತ್ತುವರಿ ಮಾಡಿಕೊಳ್ಳುವುದು ಇವೆಲ್ಲ ನಡೆಯುತ್ತಿವೆ. ಇದಕ್ಕೆಲ್ಲ ಕೇವಲ ಶಾಸಕಾಂಗ, ಕಾರ್ಯಾಂಗಗಳನ್ನು ದೂಷಿಸುವುದನ್ನಷ್ಟೇ ಮಾಡದೆ ಜನತೆಯ ಸಹಭಾಗಿತ್ವ, ನಾಗರಿಕ ಅಸಹಕಾರದಂತಹ ಹೋರಾಟಗಳ ಮೂಲಕವೇ ಪೂರ್ಣ ಸ್ವರಾಜ್ಯವನ್ನು ಪಡೆಯಬೇಕಾಗಿದೆ

ನಮ್ಮ ಸಂಘಟನೆಯ ಅನುಭವ ಹೇಳುವುದಾದರೆ ಕಳಪೆ ಹತ್ತಿ ಬೀಜದ ವಿರುದ್ಧ ರೈತರಿಗೆ ಪರಿಹಾರ ಒದಗಿಸಲು ಸಮಾಜವಾದಿ ಅಧ್ಯಯನ ಕೇಂದ್ರದ ಮೂಲಕ ಜನರನ್ನು ಸಂಘಟಿಸಲಾಗಿತ್ತು. ಹತ್ತಿ ಬೆಳೆಯನ್ನೇ ನಂಬಿದ ರೈತ ತಲೆ ಮೇಲೆ ಕೈಹೊತ್ತು ಕೂತಿದ್ದ. ರಾಜಕಾರಣಿಗಳು, ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಜನರಿಂದ ಆಯ್ಕೆ ಯಾದವರು ಯಾರು ಈ ಸಂಬಂಧ ಗ್ರಾಮ ಸಭೆಯನ್ನು ಕರೆದು ಇದಕ್ಕೆ ಪರಿಹಾರ ಕೊಡಿಸುವ ನಿಟ್ಟಿನಲ್ಲಿ ಇರಲಿಲ್ಲ. ಸರ್ಕಾರದ ವತಿಯಿಂದ ಬಂದ ಪ್ರಧಾನ ಕಾರ್ಯದರ್ಶಿಯು ಇದಕ್ಕೆ ರೈತರೇ ಹೊಣೆ ಎಂದು ಹೇಳಿಯಾಗಿತ್ತು. ಕಡೆಗೆ ಅನಿವಾರ್ಯವಾಗಿ ಗ್ರಾಹಕರ ವೇದಿಕೆಗೆ ಬೀಜ ಕೇಂದ್ರ ಹಾಗೂ ರೈತ ಸಂಪರ್ಕ ಕೇಂದ್ರದ ವಿರುದ್ಧ ಮೊಕದ್ದಮೆ ಹೂಡಲಾಗಿತ್ತು. ನಾಲ್ಕೈದು ಹಳ್ಳಿಗಳ ಸುಮಾರು ೧೨೦ ಜನ ರೈತರು ಮೊಕದ್ದಮೆಯಲ್ಲಿ ಭಾಗವಹಿಸಿದ್ದರು. *ಧಾರವಾಡ ಕಾಟನ್ ಹೈಬ್ರಿಡ್ ಸೀಡ್* ಎಂಬ ಈ ಹತ್ತಿ ಬೀಜ ಕಾಯಿಕೊರಕ ಹುಳದಿಂದ ಮುಕ್ತವಾಗಿದೆ ಎಂದು ಬೀಜದ ಪ್ಯಾಕೆಟ್ ಮೇಲೆ ಬರೆಯಲಾಗಿತ್ತು. ಆದರೆ ಕಾಯಿಕಟ್ಟದೆ ಬೆಳೆಯೆಲ್ಲಾ ಮುರುಟಿ ಹೋಗಿತ್ತು. ನ್ಯಾಯಾಲಯ ಎರಡು ಕಡೆಯ ವಾದ ಪರಿಶೀಲಿಸಿ ಕಡೆಗೆ ಕಳಪೆ ಹತ್ತಿ ಬೀಜದಿಂದಲೇ ರೈತರಿಗೆ ಅನ್ಯಾಯವಾಗಿದೆ ಎಂದು ದೃಢಪಡಿಸಿ ೮ ಲಕ್ಷ ರೂ.ಗಳವರೆಗೆ ಪರಿಹಾರ ಘೋಷಿಸಿತು. ಪಂಚಾಯತ್ ರಾಜ್ ಕಾಯ್ದೆ ಕಾನೂನುಗಳನ್ನು ಇಟ್ಟುಕೊಂಡು ನಾವು ಎಷ್ಟೇ ಮಾತನಾಡಿದರೂ ಜನರ ಸಹಭಾಗಿತ್ವ, ಹೋರಾಟ ಇಲ್ಲದಿದ್ದರೆ ನ್ಯಾಯ ದೊರಕಲಾರದು ಎಂಬುದು ಈ ಮೊಕದ್ದಮೆಯಿಂದ ನಾವು ಕಲಿತ ಪಾಠ.

# ಜನಪ್ರತಿನಿಧಿಗಳು ಏನನ್ನುತ್ತಾರೆ?

## ಜನ ಹತಾಶರಾಗಿದ್ದಾರೆ...

**ಹಾಸನ ಜಿಲ್ಲಾ ಪಂಚಾಯ್ತಿ ಹಾಲಿ ಸದಸ್ಯ ಹಾಗೂ ಮಾಜಿ ಅಧ್ಯಕ್ಷ ಯಲಹಳ್ಳಿ ಸತ್ಯನಾರಾಯಣ ಹೇಳುವುದು ಹೀಗೆ:**



**ಗ್ರಾ.**ಪಂ.–ತಾ.ಪಂ.–ಜಿ.ಪಂ.ಗಳ ಅಧ್ಯಕ್ಷ ಸ್ಥಾನಕ್ಕೆ ನೇರವಾಗಿ ಜನರೇ ಆಯ್ಕೆ ಮಾಡುವ ವ್ಯವಸ್ಥೆ ಆಗಬೇಕು ಆಗ ಮಾತ್ರ ಸ್ಥಿರವಾಗಿ ಮತ್ತು ನಿಷ್ಪಕ್ಷಪಾತವಾಗಿ ಕೆಲಸ ಮಾಡಬಹುದು. ಹಾಗೆಯೇ ಗ್ರಾ.ಪಂ. ಸದಸ್ಯರು ಚುನಾವಣೆಗೆ ನಿಲ್ಲಲು ಸಾಮಾನ್ಯ ಜ್ಞಾನ, ವಿದ್ಯೆಯ ಕನಿಷ್ಠ ಮಟ್ಟಗಳನ್ನು ನಿಗದಿ ಮಾಡಬೇಕು. ಗ್ರಾ.ಪಂ. ಅಧ್ಯಕ್ಷರನ್ನು ಜನರೇ ನೇರವಾಗಿ ಆಯ್ಕೆ ಮಾಡಿ ತಪ್ಪು ಮಾಡಿದ ಸಂದರ್ಭದಲ್ಲಿ ನೇರವಾಗಿ ಜನರೇ ಅವರನ್ನು ಅಧಿಕಾರದಿಂದ ಕೆಳಗಿಳಿಸುವ ವ್ಯವಸ್ಥೆ ಆಗಬೇಕು. ಗ್ರಾಮ ಸಭೆಗಳಿಗೆ ಜನರ ಪಾಲ್ಗೊಳ್ಳುವಿಕೆ ಕಡಿಮೆಯಾಗಲು ಬಹು ಮುಖ್ಯ ಕಾರಣ ಇದರಿಂದ ಏನೂ ಆಗದೆಂಬ ಹತಾಶೆ. ಗ್ರಾಮಸಭೆಯಲ್ಲಿ ಹೇಳಿದ್ದು–ಬರೆದುಕೊಂಡಿದ್ದೆಲ್ಲಾ ಚಾಲ್ತಿಗೆ ಬರುವುದಿಲ್ಲ. ಅಲ್ಲೂ ರಾಜಕಾರಣ ನಡೆಯುತ್ತದೆ ಎಂಬುದು ಜನರಿಗೆ ಗೊತ್ತಾಗಿ ಸಭೆಗೆ ಬಂದರೂ ಒಂದೇ ಬರದಿದ್ದರೂ ಒಂದೇ ಎಂಬ ಭಾವನೆ ಮೂಡಿದೆ.

ಇದರ ಜೊತೆಗೆ ಪ್ರತಿ ಗ್ರಾಮದ ಒಳ್ಳೆಯ ಐದು ಮಂದಿಯನ್ನು ಆಯ್ಕೆ ಮಾಡಿ ನ್ಯಾಯ ಪಂಚಾಯ್ತಿ ವ್ಯವಸ್ಥೆ ಮಾಡಬೇಕು. ಇಲ್ಲೇ ಬಹುತೇಕ ಸಮಸ್ಯೆಗಳಿಗೆ ನ್ಯಾಯ ಸಿಗುವಂತಾಗಬೇಕು. ಆರು ತಿಂಗಳಿಗೆ ಗ್ರಾಮಸಭೆ ಮಾಡದೆ ಹೋದರೆ ಅಧ್ಯಕ್ಷರ ಸದಸ್ಯತ್ವ ರದ್ದಾಗುವುದು ಎನ್ನುವುದು ಸರಿಯಲ್ಲ. ಇದರಲ್ಲಿ ಎಲ್ಲ ಸದಸ್ಯರ, ಉಪಾಧ್ಯಕ್ಷರ, ನೌಕರರ ಜವಾಬ್ದಾರಿ ಕೂಡ ಸೇರಿರಬೇಕು. ಉದ್ಯೋಗ ಖಾತ್ರಿ ಯೋಜನೆಗೆ ಸಾವಿರಾರು ಕೋಟಿ ಹಣ ಬರ್‍ತಾ ಇದೆ. ಆದರೆ ಕೂಲಿ ಮಾತ್ರ ಕೇವಲ ೧೫೦ ರೂ. ಇದು ಸರಿಯಲ್ಲ. ಬೇರೆ ಕಡೆ ೨೫೦ ರೂ. ಕೂಲಿ ಇರುವಾಗ ಉದ್ಯೋಗ ಖಾತ್ರಿ ಕೆಲಸಕ್ಕೇಕೆ ಬರುತ್ತಾರೆ? ಕೊಳವೆ ಬಾವಿಗಳಿಗೆ ಮಳೆ ನೀರು ಮರು ಪೂರಣ ಮಾಡುವ ಕೆಲಸವನ್ನು ಉದ್ಯೋಗ ಖಾತ್ರಿ ಹಣದಲ್ಲಿ ಅವಕಾಶ ಆಗಬೇಕು. ಹಾಗೂ ಉದ್ಯೋಗ ಖಾತ್ರಿ ಕೆಲಸಗಳಲ್ಲಿ ಶೇ. ೮೦ರಷ್ಟು ಶಾಶ್ವತ ಕಾಮಗಾರಿಗಳಾಗಬೇಕು. ಆ ದಿಕ್ಕಿನಲ್ಲಿ ಸರ್ಕಾರ ಮಾರ್ಗದರ್ಶಿ ಸೂತ್ರಗಳನ್ನು ರಚಿಸಬೇಕು.

(ಮಾತನಾಡಿಸಿದವರು: **ಎ. ವಿಜಯಕುಮಾರ್**)

# ಭ್ರಷ್ಟಾಚಾರ ಮತ್ತು ಬೆದರಿಕೆ

**ಚಾಮರಾಜನಗರ ತಾಲ್ಲೂಕು. ಮಸಣಾಪುರ ಗ್ರಾಮ ಪಂಚಾಯಿತಿ ಸದಸ್ಯ ಎಲ್.ಸೋಮನಾಯಕರು ಹೇಳುವುದು ಹೀಗೆ:**



**ಪಂ**ಚಾಯ್ತ್ ರಾಜ್ ಕಾಯ್ದೆ ಸರಿಯಾಗಿ ಜಾರಿಯಾಗದ್ದರಲ್ಲಿ ಅಧಿಕಾರಿಗಳ ವೈಫಲ್ಯವಿದೆ. ವೈಫಲ್ಯ ಯಾಕೆ ಅಂದ್ರೆ ಮೊದಲು ಭ್ರಷ್ಟಾಚಾರ. ಇದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಿಂದ ಶುರುವಾಗಿ ಕರವಸೂಲಿಗಾರನವರೆಗೆ ಪರಸ್ಪರ ಸಂಬಂಧವಿರುವ ಶ್ರೇಣೀಕೃತ ಭ್ರಷ್ಟಾಚಾರ.

ಇನ್ನು ಆಶ್ರಯ ಯೋಜನೆ ಫಲಾನುಭವಿಗಳ ಆಯ್ಕೆಯಲ್ಲಿ ಸದಸ್ಯರು ಇಂತಿಷ್ಟು ಹಣ ಪಡೆಯುತ್ತಾರೆ. ಸಂಬಂಧಿಕರಿಗೆ ಅದರ ಪ್ರಯೋಜನ ಜಾಸ್ತಿ. ನಾನು ಹಣ ಪಡೆಯದಿದ್ದಕ್ಕೆ ನನ್ನನ್ನು ವ್ಯವಹಾರ ಜ್ಞಾನ ಇಲ್ಲದವನಂತೆ ಕಾಣುತ್ತಾರೆ.

ಇದನ್ನು ಗ್ರಾಮಸಭೆಯಲ್ಲಿ ಪ್ರಶ್ನಿಸಲು ಯತ್ನಿಸಿದರೆ ಗ್ರಾಮಸಭೆಯಲ್ಲಿ ನಡೆಯುವ ಚರ್ಚೆ ಸಾಮಾನ್ಯ ಸಭೆಯಲ್ಲಿ ಅನುಮೋದನೆ ಆಗಬೇಕಾದ್ದರಿಂದ ಆ ಸಭೆಗೆ ಸದಸ್ಯರು ಹಾಜರಾಗದೇ ಕೋರಂ ಇಲ್ಲವೆಂದು ಜನರ ಅಧಿಕಾರವನ್ನು ಕಸಿಯಲಾಗುತ್ತದೆ.

ಇನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಾದ ಹಣ ಶೇ. ೨೨.೫. ಇದರಲ್ಲಿ ಪಿ.ಯು.ಸಿ ನಂತರ ಬಡವಿದ್ಯಾರ್ಥಿಗಳಿಗೆ ಸಹಾಯ ಮಾಡಲು ಅವಕಾಶವಿದೆ. ಆದರೆ ಓಟಿನ ಸಲುವಾಗಿ ಊರ ಯಜಮಾನರ ಮಾತೇ ನಡೆಯುತ್ತದೆ.

ಮಹಾತ್ಮ ಗಾಂಧೀ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಈಗ ವರ್ಷಕ್ಕೆ ೧೫೦ ದಿನ ಕೆಲಸ. ದಿನಕ್ಕೆ ೧೫೫ ರೂ. ಕೂಲಿ ಕೊಡಬೇಕು. ಆದರೆ ಕಾನೂನು ಉಲ್ಲಂಘಿಸಿ ಯಂತ್ರಗಳ ಮೂಲಕ ಕಾಮಗಾರಿ ಮಾಡಿಸಿ ಮತ್ತೆ ಸದಸ್ಯರು ಕಮಿಷನ್ ತೆಗೆದುಕೊಂಡು ಹಣ ಕಬಳಿಸುತ್ತಿದ್ದಾರೆ. ಈ ಎಲ್ಲ ಅವ್ಯವಸ್ಥೆಯ ಬಗ್ಗೆ ಪ್ರತಿಭಟಿಸಿದರೆ ಗೂಂಡಾಗಿರಿ ನಡೆಸುತ್ತಾರೆ. ಇದರ ಬಗ್ಗೆ ಪತ್ರಿಕೆಗೆ ಹೋದರೆ ನನ್ನ ವಿರುದ್ಧ ಎಲ್ಲಾ ಒಗ್ಗಟ್ಟಾಗುತ್ತಾರೆ.

ಜನ ಪ್ರತಿಭಟನೆಗೆ ಇಳಿದರೆ ಅವರನ್ನು ಬೆದರಿಸುತ್ತಾರೆ. ಮನೆಯ ಕರೆಂಟ್ ತೆಗೆಯುತ್ತಾರೆ. ನೀರು ಬಿಡುವುದಿಲ್ಲ. ಅವರದೇ ಕಷ್ಟ ಕಾರ್ಪಣ್ಯಗಳಲ್ಲಿ ಇದನ್ನೆಲ್ಲ ಎದುರಿಸಲು ಅವರಿಂದ ಸಾಧ್ಯವಾಗುವುದಿಲ್ಲ.

(ಮಾತನಾಡಿಸಿದವರು: **ಅಪೂರ್ವ ಡಿ'ಸಿಲ್ವ**)

# ಸ್ವರಾಜ್ಯದ ಸ್ವದೇಶೀ ದ್ವೀಪಗಳು

**–ಅರವಿಂದ ಕೇಜ್ರೀವಾಲ್**

**ಕೆಲವರಿಗೆ ಗ್ರಾಮ ಸ್ವರಾಜ್ಯದ ಪರಿಕಲ್ಪನೆಯೇ ಇಂದು ವ್ಯಾವಹಾರಿಕವಾಗಿ ಅಸಾಧ್ಯವಾದ ಪರಿಕಲ್ಪನೆ. ಜೊತೆಗೆ ನಮ್ಮ ಸದ್ಯದ ಪಂಚಾಯ್ತ್ ರಾಜ್ ವ್ಯವಸ್ಥೆ ನಡೆಯುತ್ತಿರುವ ರೀತಿ ಇವರ ವಾದವನ್ನು ಪುಷ್ಟೀಕರಿಸುತ್ತದೆ. ಆದರೆ ಪಂಚಾಯ್ತ್ ರಾಜ್ ಈಗ ಮೇಲಿಂದ ಹೇರಿದ ವ್ಯವಸ್ಥೆಯಾಗಿರುವುದರಿಂದ ಆ ಹೇರಿಕೆಯ ಎಲ್ಲ ಪರಿಮಿತಿಗಳು ಅದರ ಅಸಮರ್ಪಕತೆಗೆ ಒಂದು ಕಾರಣವಾಗಿದ್ದರೆ, ಕಳೆದ ೬೫ ವರ್ಷಗಳಲ್ಲಿ ಎಲ್ಲಕ್ಕೂ ಸರ್ಕಾರವನ್ನು ಬೇಡುವ, ಆಗ್ರಹಿಸುವ ಸಂಸ್ಕೃತಿಗೆ ಸಿಕ್ಕಿರುವ ನಾವು ಸ್ವಯಮಾಡಳಿತದ ಸಂಸ್ಕೃತಿಯನ್ನು ಇನ್ನೂ ರೂಢಿಸಕೊಳ್ಳಬೇಕಾಗಿರುವುದು ಇನ್ನೊಂದು ಕಾರಣವಾಗಿದೆ. ಆದರೆ ಇದರ ಶಕ್ತಿ ಬಲ್ಲವರು, ಅದರಲ್ಲಿ ನಂಬಿಕೆ ಇಟ್ಟವರು ತಮ್ಮ ಸಂಕಲ್ಪ ಶಕ್ತಿಯ ಮೂಲಕ ಇದನ್ನು ಒಂದು ಆದರ್ಶ ವ್ಯವಸ್ಥೆಯನ್ನಾಗಿ ರೂಪಿಸಿದ ಉದಾಹರಣೆಗಳು ಇವೆ. ಅಂತಹ ಹಲವು ಉದಾಹರಣೆಗಳನ್ನು ಕೆಲವು ವರ್ಷಗಳಿಂದ 'ಗ್ರಾಮ ಸ್ವರಾಜ್ಯ' ಆಂದೋಲನದ ಪುನರುಜ್ಜೀವನಕ್ಕೆ ದುಡಿಯುತ್ತಿರುವ ಅರವಿಂದ ಕೇಜ್ರಿವಾಲರು ತಮ್ಮ 'ಸ್ವರಾಜ್ಯ' ಪುಸ್ತಕದಲ್ಲಿ(೧೮ನೇ ಪುಟದಲ್ಲಿ ಇದರ ಪರಿಚಯವಿದೆ, ಗಮನಿಸಿ) ನೀಡಿದ್ದಾರೆ. ಅಂತಹ ಎರಡು ತದ್ವಿರುದ್ಧ ಉದಾಹರಣೆಗಳನ್ನು ಇಲ್ಲಿ ಆರಿಸಿ ನೀಡುತ್ತಿದ್ದೇವೆ. ಇವುಗಳ ಅನುವಾದಕರು ಪ್ರಿಯದರ್ಶಿನಿ ಭಟ್..–ಸಂ**



## ಮಹಾರಾಷ್ಟ್ರದ ಹಿವ್ರೆ ಬಜಾರ್‌ನ ಪವಾಡ

ಪುಣೆಯಿಂದ ಸುಮಾರು ೧೦೦ ಕಿ.ಮೀ. ದೂರದ ಅಹಮದ್ ನಗರ್ ಜಿಲ್ಲೆಯ ಹಿವ್ರೆ ಬಜಾರ್ ಒಂದು ಪುಟ್ಟ ಹಳ್ಳಿ. ೧೯೭೨ರಿಂದ ೧೯೮೯ರ ವರೆಗೆ ಈ ಹಳ್ಳಿ ಅನೇಕ ಬಾರಿ ಬರ ಪರಿಸ್ಥಿತಿಯನ್ನು ಎದುರಿಸಬೇಕಾಗಿ ಬಂತು. ಜನಗಳು ಹಳ್ಳಿಯನ್ನು ಬಿಟ್ಟು ಪುಣೆ, ಮುಂಬಯಿ ನಗರಗಳಿಗೆ ವಲಸೆ ಹೋದರು. ಶೇ.೯೦ರಷ್ಟು ಜನರು ಬಡತನ ರೇಖೆಗಿಂತ ಕೆಳಗಿನವರಾದರು. ಪರಿಸ್ಥಿತಿ ಎಷ್ಟು ಬಿಗಡಾಯಿಸಿತೆಂದರೆ ಪ್ರತಿಯೊಂದು ಮನೆಯವರು ಕಳ್ಳಭಟ್ಟಿ ತಯಾರಿಸಿ ಕುಡಿಯಲಾರಂಭಿಸಿದರು. ಅಲ್ಲಿ ದ್ವೇಷ ಮತ್ತು ವೈರತ್ವ ಎಷ್ಟಿತ್ತೆಂದರೆ ಅನೇಕ ಕೊಲೆಗಳಾದವು ಮತ್ತು ಪೋಲೀಸಿನವರು ಪ್ರತಿವಾರವೂ ಆ ಹಳ್ಳಿಗೆ ಬರುವಂತಾಯಿತು. ಹಳ್ಳಿ ಅಪರಾಧದ ತವರುಮನೆ ಎಂದನಿಸಿಕೊಂಡಿತು.

೧೯೮೯ರಲ್ಲಿ ಹಳ್ಳಿಯ ೩೦–೪೦ ಹುಡುಗರು ಒಂದುಗೂಡಿ ತಮ್ಮ ಹಳ್ಳಿಯನ್ನು ಬದಲಾವಣೆ ಮಾಡಬೇಕೆಂದು ಬಯಸಿದರು. ಪರಿಸ್ಥಿತಿ ಹಾಗೆಯೇ ಮುಂದುವರಿಯುವಂತಿರಲಿಲ್ಲ. ಅವರು ತಮ್ಮಲ್ಲಿಯೇ ಒಬ್ಬನನ್ನು ಸರಪಂಚನನ್ನಾಗಿ ಆಯ್ಕೆ ಮಾಡಿಕೊಂಡರು. ಅವನ ಹೆಸರು ಪೊಪಟ್‌ರಾವ್ ಪವಾರ್. ಆ ಯುವಕ ಮುಂಬೈನಲ್ಲಿ ಎಂ. ಕಾಂ. ಓದುತ್ತಿದ್ದ. ಅವನನ್ನು ಹಳ್ಳಿಗೆ ಕರೆಯಿಸಿಕೊಳ್ಳಲಾಯಿತು. ಆ ಹುಡುಗರು ಹಳ್ಳಿಯಲ್ಲಿ ಪ್ರತಿಯೊಂದು ಗುಂಪಿನ ಮುಖಂಡರೊಂದಿಗೆ ಮಾತನಾಡಿ, ಪವಾರ್‌ನನ್ನೇ ಒಂದು ವರ್ಷದ ಮಟ್ಟಿಗೆ ಸರಪಂಚನನ್ನಾಗಿ ಮಾಡಬೇಕೆಂದು ವಿನಂತಿಸಿ ಹಾಗೆ ಮಾಡಿದ್ದೇ ಆದರೆ ಪರಿಸ್ಥಿತಿ ಸುಧಾರಿಸುತ್ತದೆಂದು ಜನರಿಗೆ ಭರವಸೆ ನೀಡಿದರು. ಎಲ್ಲಾ ಹಿರಿಯರು ಹುಡುಗರ ಗುಂಪನ್ನು ಕಂಡು ನಕ್ಕರು. ಆದರೂ ಪವಾರ್‌ನನ್ನು ಒಂದು ವರ್ಷದ ಮಟ್ಟಿಗೆ ಸರಪಂಚನನ್ನಾಗಿ ಮಾಡಲು ಒಪ್ಪಿಕೊಂಡರು.

ಆ ಹುಡುಗ "ನಾನು ಒಬ್ಬನೇ ಏಕಪಕ್ಷೀಯವಾಗಿ ಯಾವ ನಿರ್ಣಯವನ್ನೂ ತೆಗೆದುಕೊಳ್ಳುವುದಿಲ್ಲ. ಯಾವುದೇ ನಿರ್ಣಯವನ್ನು ತೆಗೆದುಕೊಳ್ಳಬೇಕಾದರೂ ಇಡೀ ಹಳ್ಳಿಯ ಜನರೊಡನೆ ಸಮಾಲೋಚಿಸುತ್ತೇನೆ" ಎಂದು ನಿಶ್ಚಿತ ಧ್ವನಿಯಲ್ಲಿ ಹೇಳಿದ. ಕಾನೂನಿನ ಪ್ರಕಾರ ವರ್ಷದಲ್ಲಿ ಎರಡು ಬಾರಿ ಅಂದರೆ ಆಗಸ್ಟ್ ೧೫ ಮತ್ತು ೨೬ ಜನವರಿಯಂದು ಮಾತ್ರ ಗ್ರಾಮಸಭೆಯ ಮೀಟಿಂಗ್ ನಡೆಯಬೇಕು. ಆದರೆ ಈ ಹುಡುಗ ತಿಂಗಳಲ್ಲಿ ನಾಲ್ಕು ಬಾರಿ ಸಭೆಯನ್ನು ಕರೆಯಲಾರಂಭಿಸಿದ. ಹಳ್ಳಿಯಲ್ಲಿ ಯಾವ ಸಮಸ್ಯೆ ಎದುರಾದರೂ ಹಳ್ಳಿಯವರನ್ನೆಲ್ಲಾ ಒಟ್ಟುಗೂಡಿಸಿ ಅವರ ಸಲಹೆಗಳನ್ನು ಕೇಳುತ್ತಿದ್ದ. ಸಮಸ್ಯೆ ಬಗೆಹರಿಸುತ್ತಿದ್ದ.

ಇದರ ಪರಿಣಾಮ ಅಮೋಘವಾಗಿತ್ತು. ೧೯೮೯ರಲ್ಲಿ ಹಳ್ಳಿಯ ತಲಾ ಆದಾಯ ೮೪೦ ರೂ. ಇತ್ತು. ಇಂದು ೨೮೦೦೦ ರೂಪಾಯಿಗಳು! ಅಂದರೆ ಯಾವುದಾದರೂ ಒಂದು ಕುಟುಂಬದಲ್ಲಿ ಐದು ಜನರಿದ್ದರೆ, ವರ್ಷದ ವರಮಾನ ಸರಿಸುಮಾರು ೧.೫ ಲಕ್ಷ! ಈ ಹಣ ಹಳ್ಳಿಯ ಜೀವನಕ್ಕೆ ಬೇಕಾಗುವಷ್ಟಾಯಿತು.

ಈಗ ಹಳ್ಳಿಯಲ್ಲಿ ಉತ್ತಮ ರಸ್ತೆಗಳಿವೆ. ಮೊದಲು ಜನರು ಗುಡಿಸಲುಗಳಲ್ಲಿ ವಾಸಮಾಡಬೇಕಿತ್ತು. ಈಗ ಉತ್ತಮ ಗುಣಮಟ್ಟದ ವಸತಿಯೋಗ್ಯ ಮನೆ ಇದೆ. ಉತ್ತಮವಾದ ಶಾಲೆ ಮತ್ತು ಆಸ್ಪತ್ರೆ ಇದೆ. ಹಾಗೂ ಸಹಾಯಧನದಲ್ಲಿ ಸಿಗುವ ಪಡಿತರವನ್ನು ಹೆಚ್ಚು ಬೆಲೆಗೆ ಮಾರುವಂತಹ ಕಳ್ಳದಂಧೆ ಇಲ್ಲ. ಪಡಿತರ ಆಹಾರದ ಸಾಮಾನು ಬಂದಾಗ ಎಲ್ಲ ಜನಗಳ ಸಮಕ್ಷಮದಲ್ಲೇ ಇಳಿಸಿಕೊಳ್ಳುತ್ತಾರೆ. ಎಲ್ಲರೂ ಕುಡಿಯುತ್ತಿದ್ದರು. ಈಗ ಯಾರೂ ಕುಡಿಯುವುದಿಲ್ಲ. ಕಳೆದ ಐದು ವರ್ಷಗಳಿಂದೀಚೆಗೆ ಯಾವುದೇ ಪೋಲಿಸ್ ಕೇಸ್ ದಾಖಲಾಗಿಲ್ಲ.

ಎಲ್ಲದಕ್ಕಿಂತ ಮುಖ್ಯವಾದ ವಿಷಯವೆಂದರೆ ಒಂದು ವರ್ಷದ ಮಟ್ಟಿಗೆ ಸರಪಂಚನಾದ ಪೊಪಟ್‌ರಾವ್ ಪವಾರ್, ಎಷ್ಟು ಜನಪ್ರಿಯ ವ್ಯಕ್ತಿಯಾದನೆಂದರೆ ಈಗ ಇಪ್ಪತ್ತು ವರ್ಷಗಳ ಬಳಿಕವೂ ಅವರೇ ಅಲ್ಲಿಯ ಸರಪಂಚ. ಅವರ ಜನಪರ ಕಾರ್ಯಗಳಿಗೆ ಸಂದ ಜನಪ್ರಿಯತೆಯಿಂದ ಇದು ಸಾಧ್ಯವಾಯಿತು. ನಿಜ ಹೇಳಬೇಕೆಂದರೆ ಅವರು ಸ್ಪರ್ಧಿಸುವುದೇ ಇಲ್ಲ. ಅವರ ಎದುರು ಯಾರೂ ಪ್ರತಿಸ್ಪರ್ಧಿಯಾಗಿ ನಿಲ್ಲುವುದೂ ಇಲ್ಲ. ಹಾಗಾಗಿ ಯಾವಾಗಲೂ ಅವರೇ ಸರಪಂಚರು!

ಇದು ಹೇಗೆ ಸಾಧ್ಯವಾಯಿತೆಂದರೆ, ಸರಪಂಚನು ತೆಗೆದುಕೊಂಡ ಯಾವುದೇ ನಿರ್ಣಯಗಳನ್ನು ಹಳ್ಳಿಯ ಎಲ್ಲ ಜನರ ಒಪ್ಪಿಗೆ ಪಡೆದೇ ಕೈಗೊಂಡಿದ್ದನು. ಹಾಗಾಗಿ ಅವನ ಜನಪ್ರಿಯತೆ ಮುಗಿಲುಮುಟ್ಟಿತು.

ಪೊಪಟ್‌ರಾವ್ ಪವಾರ್ ಮತ್ತೊಂದು ಸುಧಾರಣೆ ತಂದರು. ನಾವು ಮೊದಲೇ ತಿಳಿಸಿದಂತೆ ಸರಕಾರದ ಅನೇಕ ಯೋಜನೆಗಳು ಜನರನ್ನು ದೀನರನ್ನಾಗಿ, ಭಿಕ್ಷುಕರನ್ನಾಗಿ ಮಾಡುತ್ತಿತ್ತು. ಪವಾರ್ ಆ ಯೋಜನೆಗಳನ್ನೆಲ್ಲಾ ದೂರ ತಳ್ಳಿಹಾಕಿದರು. ಅವರು ಮೊದಲ ಗ್ರಾಮ ಸಭೆಯ ಮೀಟಿಂಗ್‌ನಲ್ಲಿ ಜನರನ್ನು ಕೇಳಿದ್ದು–ಹಳ್ಳಿಯ ಜನರ ಸಮಸ್ಯೆ ಮತ್ತು ಅದರ ಪರಿಹಾರದ ಬಗ್ಗೆ. ಕೆಲವರು ಕುಡಿಯುವ ನೀರಿಲ್ಲ ಎಂದರು. ಕೆಲವರು ಹಳ್ಳಿಯಲ್ಲಿ ವಿದ್ಯುಚ್ಛಕ್ತಿ ಇಲ್ಲ ಎಂದರು. ಕೆಲವರು ಶಾಲೆ ಇಲ್ಲ ಎಂದರು. ಮಕ್ಕಳಿಗಾಗಿ ಶಾಲೆ ತೆರೆಯಬೇಕೆಂದು ಮೊದಲೇ ತೀರ್ಮಾನಿಸಲಾಗಿತ್ತು. ಪವಾರ್ ಹಳ್ಳಿಗೆ ಶಾಲೆ ಬೇಕೆಂದು ಸರಕಾರಕ್ಕಾಗಲೀ ವಿದ್ಯಾ ಇಲಾಖೆಗಾಗಲೀ ಪತ್ರ ಬರೆಯಲಿಲ್ಲ. ಬದಲಿಗೆ ಹಳ್ಳಿಯಲ್ಲಿ ಯಾವುದಾದರೂ ಖಾಲಿ ಮನೆ ಇದೆಯೇ? ಎಂದು ಗ್ರಾಮಸಭೆಯಲ್ಲಿ ವಿಚಾರಿಸಿದರು. ಇಬ್ಬರು ಎದ್ದು ನಿಂತು, ತಮ್ಮ ಎರಡು ಕೊಠಡಿಗಳನ್ನು ಬಿಟ್ಟುಕೊಟ್ಟರು. ಹೀಗೆ ನಾಲ್ಕು ಕೊಠಡಿಯಲ್ಲಿ ಶಾಲೆ

ಪ್ರಾರಂಭವಾಯಿತು. ಅವರು ಸರಕಾರಕ್ಕೆ ಉಪಾಧ್ಯಾಯರು ಬೇಕೆಂದು ವಿನಂತಿಸಿ ಬರೆಯಲಿಲ್ಲ. ಗ್ರಾಮಸಭೆಯಲ್ಲಿ ಹಳ್ಳಿಯ ಯಾರಾದರೂ ವಿದ್ಯಾವಂತ ವಯಸ್ಕರು, ಕೆಲಸವಿಲ್ಲದೆ ಇದ್ದಲ್ಲಿ ಪಾಠ ಮಾಡಬಲ್ಲಿರಾ? ಎಂದು ವಿಚಾರಿಸಿದರು. ನಾಲ್ವರು ಸ್ವಯಂ ಇಚ್ಛೆಯಿಂದ ಮುಂದೆ ಬಂದರು. ಅವರು ಪಾಠ ಮಾಡಲು ಆರಂಭಿಸಿಯೇಬಿಟ್ಟರು. ಶಾಲೆಯ ವಾರ್ಷಿಕ ಫಲಿತಾಂಶ ಬಹಳ ಉತ್ತಮ ಹಾಗೂ ಗಣನೀಯವಾಗಿತ್ತು.

ಪೋಪಟ್‌ರಾವ್ ನಮಗೆ ಹೇಳಿದ್ದು:"ಹಿಂದೆ ನಾವು ಗ್ರಾಮಸಭೆಗಳನ್ನು ಕರೆದಾಗ ಎಷ್ಟೊಂದು ಗುಂಪುಗಾರಿಕೆ ಇತ್ತೆಂದರೆ ಜನರು ಸಭೆಗಳಿಗೆ ಬರುತ್ತಲೇ ಇರಲಿಲ್ಲ. ಅನೇಕ ಸಭೆಗಳಲ್ಲಿ ಗುಂಪುಗಳ ನಡುವೆ ಆಗಾಗ್ಗೆ ಜಗಳ-ಹೊಡೆದಾಟವಾಗುತ್ತಿತ್ತು. ವರ್ಷದೊಳಗೆ ಸರಪಂಚರು ತಮ್ಮ ಒಳಿತಿಗಾಗಿ ದುಡಿಯುತ್ತಿದ್ದಾರೆಂದು ತಿಳಿದು ಮನಸ್ಸು ಬದಲಾಯಿಸಿ ನಿಧಾನವಾಗಿ ಸಭೆಗಳಲ್ಲಿ ಭಾಗವಹಿಸತೊಡಗಿದರು. ಮಕ್ಕಳಿಗಾಗಿ ಶಾಲೆ ತೆರೆದಿದ್ದು ಜನರಲ್ಲಿ ಒಳ್ಳೆಯ ಅಭಿಪ್ರಾಯ ಮೂಡಿತು"

ಬರಗಾಲ ಎಡೆಬಿಡದೆ ಎಡತಾಕಿದ್ದರಿಂದ ಅಂತರ್ಜಲದ ಮಟ್ಟ ೮೦ ಅಡಿಗೆ ತಲುಪಿತು. ಸಮಾಲೋಚನೆಗಳ ನಂತರ ನೀರನ್ನು ಶೇಖರಿಸಲು ಮಳೆನೀರಿನ ಕೊಯ್ಲು ಹಾಗೂ ಮರಗಳನ್ನು ಬೆಳೆಯಲು ನಿರ್ಧರಿಸಿದರು. ಇಂತಹ ಬರಗಾಲವಿದ್ದಾಗ್ಯೂ ಆ ಗ್ರಾಮಸಭಾದವರು ಸರಕಾರದ ಸಹಾಯವನ್ನು ಯಾಚಿಸಲಿಲ್ಲ. ಗ್ರಾಮಸ್ಥರೇ ಮರವನ್ನು ನೆಟ್ಟರು. ೮೦ ಅಡಿಗಿಂತ ಕೆಳಗಿದ್ದ ನೀರು ೧೫ ಅಡಿಗೆ ಬಂದಿತು. ಮೊದಲು ಒಂದು ಬೆಳೆ ತೆಗೆಯಲಾಗುತ್ತಿರಲಿಲ್ಲ. ಈಗ ಮೂರು ಬೆಳೆ ತೆಗೆಯಲಾರಂಭಿಸಿದರು.

ಇಲ್ಲಿ ಒಂದು ಕುತೂಹಲಕಾರಿಯಾದ ವಾಸ್ತವಾಂಶವಿದೆ. ೧೯೮೦ರಲ್ಲಿ ಅರಣ್ಯ ಇಲಾಖೆಯು ಮರಗಳನ್ನು ನೆಟ್ಟಿತ್ತು. ಹಳ್ಳಿಯ ಜನರು ಇದನ್ನು ಕಡಿದು ಹಾಕಿದ್ದರು. ಏಕೆಂದರೆ ಈ ಮರಗಳು ಅವರದಾಗಿರಲಿಲ್ಲ. ಹಾಗೂ ಅವುಗಳ ಬಗ್ಗೆ ಅವರಿಗೆ ಪ್ರೀತಿಯೂ ಇರಲಿಲ್ಲ. ಆದರೆ ಹಳ್ಳಿಗರೇ ನೆಟ್ಟು ಬೆಳೆದ ಮರಗಳನ್ನು ಇತರರು ಕಡಿಯಲು ಬಂದಾಗ, ಅವರು ಅದನ್ನು ಕಡಿಯಲು ಅವಕಾಶ ಕೊಡಲಿಲ್ಲ. ಏಕೆಂದರೆ ಅವು ಅವರದೇ ಗಿಡಗಳು, ಅವರೇ ನೆಟ್ಟು ಬೆಳೆಸಿದ ಮರಗಳು. ಈ ರೀತಿಯಾಗಿ ಹಳ್ಳಿಯು ಅಭಿವೃದ್ಧಿ ಕಂಡಿತು.

ಹಿವ್ರೆ ಬಜಾರ್‌ನ ಯಶೋಗಾಥೆ ಕೇಳಿದ ನಂತರ ಎಲ್ಲರೂ ಹೇಳುವುದು, ಸರಪಂಚ ಒಳ್ಳೆಯವನಾದುದರಿಂದ ಹಳ್ಳಿ ಅಭಿವೃದ್ಧಿ ಕಂಡಿತು. ಪೋಪಟ್‌ರಾವ್‌ನಂತಹ ಉತ್ತಮ ಸರಪಂಚರು ಇಲ್ಲದಿದ್ದರೆ ಹಳ್ಳಿ ಇಷ್ಟು ಮುಂದುವರೆಯುತ್ತಿರಲಿಲ್ಲ ಎಂದು.

ಹಾಗಾದರೆ ಯಾರು ಒಳ್ಳೆಯ ಸರಪಂಚ? ನಾವು ಅನೇಕ ಉತ್ತಮ ಗುಣವುಳ್ಳ ಹಾಗೂ ಪ್ರಾಮಾಣಿಕ ಸರಪಂಚರುಗಳನ್ನು ನೋಡಿದ್ದೇವೆ. ಅವರು ಕುಯುಕ್ತಿಯಿಂದ ಕೆಟ್ಟ ರೀತಿಯಲ್ಲಿ ಹಣವನ್ನು ಮಾಡಿಕೊಂಡಿಲ್ಲ. ನಾವು ರಾಜಾಸ್ಥಾನದಲ್ಲಿ ಒಬ್ಬ ಸರಪಂಚನನ್ನು ನೋಡಿದೆವು. ಅವನ ಬಳಿ ಹಣವಿತ್ತು. ತನ್ನ ಸ್ವಂತ ಹಣವನ್ನೂ ಹಳ್ಳಿಗಾಗಿ ವಿನಿಯೋಗಿಸುತ್ತಿದ್ದ. ಆದರೆ ಈ ವ್ಯಕ್ತಿ ಯಾವ ವಿಷಯದಲ್ಲೂ ಯಾರೊಡನೆಯೂ ಸಮಾಲೋಚಿಸುತ್ತಿರಲಿಲ್ಲ. ಹಾಗೂ ಅವರ ಬೇಡಿಕೆಗಳನ್ನು ಈಡೇರಿಸುತ್ತಿರಲಿಲ್ಲ. ತನ್ನ ದಾರಿಯಲ್ಲಿಯೇ, ತನಗೆ ತೋಚಿದಂತೆ ನಡೆಯುತ್ತಿದ್ದ. ಹಳ್ಳಿಯ ಹೊರಗೆ, ತನ್ನ ಹಣದಲ್ಲೆ ಪಾಯಿಖಾನೆಗಳನ್ನು ಕಟ್ಟಿಸಿದನು. ಜನಗಳಿಗೆ ಇದು ಬೇಕಿರಲಿಲ್ಲ. ನಿರ್ಮಾಣಗೊಂಡ ದಿನದಿಂದ ಈವರೆಗೆ ಯಾರೂ ಅದನ್ನು ಉಪಯೋಗಿಸಿಲ್ಲ. ಎಲ್ಲದಕ್ಕೂ ಬೀಗ ಹಾಕಲ್ಪಟ್ಟಿದೆ.

ಆದ್ದರಿಂದ ಒಳ್ಳೆಯ ಸರಪಂಚನೆಂದರೆ ಆತನು ಸಮಸ್ಯೆಯ ಬಗ್ಗೆ ಗ್ರಾಮದ ಜನರೊಡನೆ ಸಮಾಲೋಚಿಸಬೇಕು, ನಂತರ ನಿರ್ಣಯಗಳನ್ನು ತೆಗೆದುಕೊಳ್ಳಬೇಕು. ಜನರು ಕೊಟ್ಟ ತೀರ್ಮಾನದಂತೆ ಕೆಲಸ ಮಾಡುವವನಾಗಿರಬೇಕು. ಆತನೇ ಒಳ್ಳೆಯ ಸರಪಂಚನಾಗಬಲ್ಲ.

ಆದರೆ ಈಗಿರುವ ನಮ್ಮ ಪಂಚಾಯತ್ ರಾಜ್ ವ್ಯವಸ್ಥೆಯು ಗ್ರಾಮಸಭೆಗಳಿಗೆ ಅಂತಹ ಯಾವ ಅಧಿಕಾರವನ್ನೂ ಕೊಟ್ಟಿಲ್ಲ. ಎಲ್ಲೆಲ್ಲಿ ಒಳ್ಳೆಯ ಹಾಗೂ ಪ್ರಾಮಾಣಿಕ ಸರಪಂಚರಿದ್ದಾರೋ ಅಲ್ಲೆಲ್ಲ ಅವರು ಜನರಿಗೆ ಶರಣಾಗಿ ತಾವು ಏಕಪಕ್ಷೀಯವಾಗಿ ಯಾವುದೇ ತೀರ್ಮಾನವನ್ನು ತೆಗೆದುಕೊಳ್ಳುವುದಿಲ್ಲ. ಬದಲಿಗೆ ಜನಗಳು ನಿರ್ಣಯಿಸಿದ್ದನ್ನು ಜಾರಿಗೊಳಿಸುವುದಾಗಿ ಹೇಳುತ್ತಾರೆ. ಅಂತಹ ಪ್ರದೇಶಗಳಲ್ಲಿ ಬೆಳವಣಿಗೆಯಾಗಿದೆ. ಯಾವ ಯಾವ ಗ್ರಾಮಸಭೆಗಳಲ್ಲಿ ಈ ರೀತಿಯ ನಿರ್ಣಯಗಳನ್ನು ಕೈಗೊಳ್ಳುವುದಿಲ್ಲವೋ ಜನಾಭಿಪ್ರಾಯಕ್ಕೆ ಬೆಲೆ ಕೊಡುವುದಿಲ್ಲವೋ, ಎಲ್ಲೆಲ್ಲಿ ಜನರು ಸಭೆಯಲ್ಲಿ ತಮ್ಮ ಅಭಿಪ್ರಾಯಗಳನ್ನು ತಿಳಿಸುವುದಿಲ್ಲವೋ ಅಲ್ಲೆಲ್ಲ ಅಭಿವೃದ್ಧಿಯಾಗಿಲ್ಲ.

## ನಕ್ಸಲ್ ಚಳುವಳಿಗೆ ಪ್ರೇರಣೆ ಎಲ್ಲಿಂದ?



ಛತ್ತೀಸ್‌ಘಡ ರಾಜ್ಯದ ಲೊಹನಿಗುಂಡ ಎಂಬಲ್ಲಿ ಉಕ್ಕಿನ ಕಾರ್ಖಾನೆಯೊಂದನ್ನು ಸ್ಥಾಪಿಸಬೇಕೆಂದು ಒಂದು ಕಂಪನಿ ಮುಂದೆ ಬಂದಿತು. ಈ ಉದ್ದೇಶಕ್ಕೆ ಸುಮಾರು ಹತ್ತು ಹಳ್ಳಿಗಳಲ್ಲಿನ ಜಮೀನು ಬೇಕಾಗಿತ್ತು. ಇವೆಲ್ಲವೂ ಅನುಸೂಚಿತ ಪ್ರದೇಶದ ವ್ಯಾಪ್ತಿಯಲ್ಲಿ ಗುರುತಿಸಲ್ಪಟ್ಟಿದ್ದ ಪ್ರದೇಶಗಳಾಗಿದ್ದು PESA(Panchayat Extension to Scheduled Areas) ಅಡಿಯಲ್ಲಿ ಬರುವಂತಹ ಪ್ರದೇಶವಾಗಿತ್ತು. ಈ ನಿಯಮದ ಪ್ರಕಾರ, ಯಾವುದೇ ಸರಕಾರಕ್ಕೆ PESA ಅಡಿಯಲ್ಲಿ ಬರುವ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆಗೆ ಪೂರ್ವಭಾವಿಯಾಗಿ ಆ ಪ್ರದೇಶದ ಗ್ರಾಮಸಭೆಗಳ ಜೊತೆಗೆ ಸಮಾಲೋಚನೆ ನಡೆಸಬೇಕಾಗುತ್ತದೆ. ಹಾಗಾಗಿ ಸರಕಾರವು ತತ್ಸಂಬಂಧಿ ಗ್ರಾಮಸಭೆಗಳಿಗೆ ಪತ್ರ ಬರೆದು ಭೂಮಿಯನ್ನು ಕೊಡಬೇಕಾಗಿ ಕೇಳಿಕೊಂಡಿತು. ಅದರೆ ಜನರು ಜಮೀನನ್ನು ಬಿಟ್ಟುಕೊಡಲು ಒಪ್ಪಲಿಲ್ಲ. ಮತ್ತೆ ಸರಕಾರ ಅವರಿಗೆ ಮತ್ತೊಂದು ಪತ್ರ ಬರೆದು ಭೂಮಿಯನ್ನು ಬಿಟ್ಟುಕೊಡುವಂತೆ ಮರುವಿನಂತಿ ಮಾಡಿಕೊಂಡಿತು.

ಆಗ ಗ್ರಾಮಸಭೆಗಳು ಹದಿನಾರು ಬೇಡಿಕೆಗಳನ್ನು ಸರಕಾರದ ಮುಂದಿಟ್ಟು, ಅದಕ್ಕೆ ಒಪ್ಪಿದರೆ ಮಾತ್ರ ಭೂಮಿಯನ್ನು ನೀಡುವುದಾಗಿ ಬಲವಾಗಿ ಹೇಳಿತು. ಈ ಬೇಡಿಕೆಗಳು ನ್ಯಾಯಯುತವಾಗಿದ್ದವು. ಅವುಗಳಲ್ಲಿ ಸ್ವಲ್ಪ ಹಣವನ್ನು ಜಮೀನಿಗೆ ಪರಿಹಾರ ರೂಪದಲ್ಲಿ ಕೊಡಬೇಕೆಂದೂ, ಎಲ್ಲೆಲ್ಲಿ ಎಷ್ಟು ಮರಗಳನ್ನು ಕಡಿಯುತ್ತಾರೋ ಅಲ್ಲಲ್ಲಿ ಮತ್ತೆ ಮರಗಳನ್ನು ನೆಡುವುದು ಹಾಗೂ ಜಮೀನು ಕಳಕೊಂಡವರ ಕುಟುಂಬದ ಒಬ್ಬರಿಗೆ ಉದ್ಯೋಗ ಕೊಡಬೇಕೆಂಬುದು ಅವುಗಳಲ್ಲಿ ಪ್ರಮುಖವಾದ ಬೇಡಿಕೆಗಳಾಗಿತ್ತು. ಆದರೆ ಸರಕಾರಕ್ಕೆ ಈ ಬೇಡಿಕೆಗಳನ್ನು ಕಳುಹಿಸಿದಾಗ, ತಕ್ಷಣ ಆ ಬೇಡಿಕೆಗಳನ್ನು ತಿರಸ್ಕರಿಸಿ, ಭೂಮಿಯನ್ನು ಪೋಲೀಸರ ಸಹಾಯದಿಂದ ವಶಕ್ಕೆ ತೆಗೆದುಕೊಂಡಿತು. ಆಗ ಗ್ರಾಮಸ್ಥರು ಹಳ್ಳಿಗಳ ಗೋಡೆಗಳ ಮೇಲೆ "ನಕ್ಸಲರೇ ಬನ್ನಿ, ನಮ್ಮನ್ನು ಕಾಪಾಡಿ" ಎಂಬ ಘೋಷ ವಾಕ್ಯಗಳನ್ನು ಬರೆದರು. ಗ್ರಾಮದ ಜನ ಅವರ ಜೊತೆ ಕೈಜೋಡಿಸುವಂತಾಯಿತು.

ಹಾಗಾಗಿ, ತಮ್ಮ ಹಳ್ಳಿಯ ಬಗ್ಗೆ ಜನಗಳಿಗೆ ಅಂತಿಮ ತೀರ್ಮಾನ ತೆಗೆದುಕೊಳ್ಳುವ ಹಕ್ಕಿದ್ದರೆ, ನಕ್ಸಲರ ಬಳಿಗೂ ಹೋಗುತ್ತಿರಲಿಲ್ಲ, ಹಳ್ಳಿಗರ ಸೂಕ್ತ ಬೆಂಬಲವಿಲ್ಲದಿದ್ದರೆ ನಕ್ಸಲ್ ಚಟುವಟಿಕೆಗಳು ಬಲವಾಗಿ ನೆಲೆಗೊಳ್ಳುತ್ತಿರಲಿಲ್ಲ.
*

**ಸಾಹಿತ್ಯ–ಸಂಸ್ಕೃತಿ–ರಾಜಕಾರಣ ಇತ್ಯಾದಿ**

# ಸಾಂಸ್ಕೃತಿಕ ನೀತಿಯೋ ಅಧೋಗತಿಯೋ?

**ಸ**ರ್ಕಾರಕ್ಕೊಂದು ಸಾಂಸ್ಕೃತಿಕ ನೀತಿಯ ಅಗತ್ಯವಿದೆಯೇ? ಒಂದು ಸುಸಂಸ್ಕೃತ ಸಮಾಜವನ್ನು ರೂಪಿಸಬಯಸುವ ಆಶಯವುಳ್ಳ ಸರ್ಕಾರಕ್ಕೆ ಈ ಪ್ರಶ್ನೆಯೇ ಅಸಂಗತವೆನಿಸೀತು. ಆದರೆ ಒಂದಾದರ ಮೇಲೊಂದರಂತೆ ನಮ್ಮ ಸರ್ಕಾರಗಳು ನಡೆದುಕೊಳ್ಳುತ್ತಿರುವ ರೀತಿಯನ್ನೇ ಗಮನಿಸಿ. ಸದ್ಯಕ್ಕೆ ಸದರಿ ಸರ್ಕಾರ ನಮ್ಮ ಸಾಂಸ್ಕೃತಿಕ ಲೋಕದ ಬಗ್ಗೆ ತಳೆದಿರುವ ಔದಾಸೀನ್ಯವನ್ನೇ ನೋಡಿ. ನಮ್ಮ ಅಕಾಡೆಮಿಗಳು, ಪ್ರಾಧಿಕಾರಗಳು ಮತ್ತು ರಂಗಾಯಣಗಳು ವೃತ್ತಿ ಪರಿಣಿತಿಯ ಮುಖ್ಯಸ್ಥರಿಲ್ಲದೇ, ಸದಸ್ಯರಿಲ್ಲದೇ–ಕೆಲವು ವರ್ಷಗಟ್ಟಲೇ, ಕೆಲವು ತಿಂಗಳುಗಟ್ಟಲೇ–ಕೇವಲ ಸರ್ಕಾರಿ ಅಧಿಕಾರಿಗಳ ಕೈಯಲ್ಲಿ ಉಸಿರು ಹಿಡಿದು ಮಲಗಿವೆ. ಹಿಂದಿನ ಬಿಜೆಪಿ ಸರ್ಕಾರ ಇವನ್ನು ತನ್ನ ರಾಜಕೀಯ ಶಕ್ತಿವೃದ್ಧಿಗಾಗಿ ಬಳಸುವ ಅಸಾಂಸ್ಕೃತಿಕ ಕೆಲಸಕ್ಕೆ ಕೈಹಾಕಿ ಅವುಗಳ ಘನತೆ–ಗೌರವ–ವಿಶ್ವಾಸಾರ್ಹತೆಗಳನ್ನೇ ಹಾಳುಗೆಡಹಿ ಕೂರಿಸಿತ್ತು. ನಂತರ ಆ ಪಕ್ಷದ ಒಳಜಗಳಗಳಿಂದಾಗಿ ಅವುಗಳಲ್ಲಿ ಹಲವು ನಿಷ್ಕ್ರಿಯಗೊಂಡಿದ್ದವು. ಈಗ ಈ ಹೊಸ ಸರ್ಕಾರ ರಚನೆಯಾಗಿ ಮೂರು ತಿಂಗಳು ಕಳೆದರೂ ಈ ಕುರಿತು ಕ್ರಮ ಕೈಗೊಳ್ಳಲು ಸಾಧ್ಯವಾಗಿಲ್ಲ.

ಇದಕ್ಕೆ ಹಲವು ಕಾರಣಗಳಿವೆ. ಮೊದಲಾಗಿ ಇಂದು ನಮ್ಮ ರಾಜಕಾರಣಕ್ಕೆ ಸಾಂಸ್ಕೃತಿಕ ಆಯಾಮವೆಂಬುದೇ ಇಲ್ಲವಾಗಿದೆ. ಅದು ಸಂಪೂರ್ಣವಾಗಿ ಚುನಾವಣಾ ರಾಜಕಾರಣ ಮಾತ್ರವಾಗಿ ಅವನತಿಗೊಂಡಿದೆ. ಇದಕ್ಕೆ ನಮ್ಮ ರಾಜಕಾರಣಿಗಳ ವ್ಯಕ್ತಿತ್ವದ ಸಾಂಸ್ಕೃತಿಕ ಅವನತಿ ಎಷ್ಟು ಕಾರಣವೋ ನಮ್ಮ ಸಾಂಸ್ಕೃತಿಕ ಲೋಕದ ವಕ್ತಾರರ ಅಗ್ಗದ ರಾಜಕೀಯ ಪುಢಾರಿಗಿರಿಯೂ ಅಷ್ಟೇ ಕಾರಣವಾಗಿದೆ. ಶ್ರೀಮಾನ್ ರಾಮಕೃಷ್ಣ ಹೆಗ್ಗಡೆ ಮುಖ್ಯಮಂತ್ರಿಯಾಗಿದ್ದಾಗ ಅವರ ಸಾಂಸ್ಕೃತಿಕ ಬೆಡಗು–ಬಿನ್ನಾಣಗಳಿಗೆ ಮರುಳಾಗಿ ವಿಧಾನಸೌಧದ ಸುತ್ತ ಭಕ್ತಿಪೂರ್ವಕವಾಗಿ ಸುತ್ತತೊಡಗಿದ ನಮ್ಮ ಹಲವಾರು ಲೇಖಕ–ಕಲಾವಿದರು, ಈ ಸುತ್ತಾಣಿಕೆಯಿಂದ ತಮ್ಮ ಕೆಲವು ಗೆಳೆಯರು ಕಂಡ ಲೌಕಿಕ ಯಶಸ್ಸಿನಿಂದ ಸ್ಫೂರ್ತಿಗೊಂಡು ತಮ್ಮ ಸುತ್ತಾಣಿಕೆಗಳನ್ನು ಈಗಲೂ ಮುಂದುವರೆಸಿದ್ದಾರೆ. ಕೆಲವರು ಜಾತಿ ಗುಂಪುಗಳನ್ನು ಕಟ್ಟಿಕೊಂಡು; ಇನ್ನು ಕೆಲವರು ಮುಖ್ಯಮಂತ್ರಿಗಳಿಗೆ ಆಪ್ತರಾದವರಿಂದ ಶಿಫಾರ್ಸು ಮಾಡಿಸುವ ಮೂಲಕ; ಮತ್ತೆ ಕೆಲವರು ಮುಖ್ಯಮಂತ್ರಿಗಳಿಗೆ ಮತ್ತೆ ಮತ್ತೆ ಮುಖ ತೋರಿಸುವ ಪ್ರಯತ್ನಗಳನ್ನು ಮಾಡುತ್ತಾ.

## ಸರ್ಕಾರಿ ಏಜೆಂಟುಗಳಾಗುತ್ತಿರುವ ನಮ್ಮ ಸಾಹಿತಿಗಳು

ಆದರೆ ಈ ಸಂಬಂಧದ ಅತ್ಯಂತ ಗಾಬರಿ ಹುಟ್ಟಿಸುವ ಸಂಗತಿಯೆಂದರೆ, ಕೆಲವು ಹಿರಿಯ ಸಾಹಿತಿಗಳೆನಿಸಿಕೊಂಡವರು ಪಕ್ಷದ ಸದಸ್ಯರಿಗಿಂತಲೂ ಹೆಚ್ಚು ನಿಷ್ಠಾವಂತಿಕೆಯಿಂದ ಈಗ ತಾನೇ ಮುಗಿದ ಗುಜರಿ ಲೋಕಸಭಾ ಉಪಚುನಾವಣೆಗಳಲ್ಲೂ ಕಾಂಗ್ರೆಸ್ ಕಾರ್ಯಕರ್ತರಂತೆ ನಡೆದುಕೊಂಡದ್ದು. ಸಾರ್ವತ್ರಿಕ ವಿಧಾನಸಭಾ ಚುನಾವಣೆಗಳಲ್ಲಿ ಅನಾಹುತಕಾರಿ ಬಿಜೆಪಿ ಮತ್ತೆ ಅಧಿಕಾರಕ್ಕೆ ಬಂದು ಬಿಟ್ಟೀತೆಂಬ ಆತಂಕದಲ್ಲಿ ಇವರು ಕಾಂಗ್ರೆಸ್ ಪರ 'ಕೆಲಸ' ಮಾಡಿದ್ದನ್ನು ಅರ್ಥ ಮಾಡಿಕೊಳ್ಳಬಹುದು. ಆದರೆ ಈಗ? ಅದು ವಿರೋಧ ಪಕ್ಷಗಳ ಮೇಲೆ ಮುಗಿ ಬೀಳುವ ಮಟ್ಟಿಗೆ ಬೆಳೆದಿರುವುದನ್ನು ನೋಡಿದರೆ ಈ ಕೆಲವರಿಗೆ ತಮ್ಮ ಸಾಹಿತ್ಯ–ಕಲೆಗಳು ಲಾಭಕರ ಉಪಜೀವನ ಮಾರ್ಗಗಳಾಗಿ ಹೋದಂತೆ ಕಾಣುತ್ತದೆ. ಒಂದು ಕನಿಷ್ಠ ರಾಜಕೀಯ ಅಂತರ, ಸಂಯಮ ಕಾಯ್ದುಕೊಳ್ಳಲಾಗದ ಈ ನನ್ನ ಹಿರಿ–ಕಿರಿಯ ಗೆಳೆಯರಿಗೆ ಅಧಿಕಾರ ದೊರೆತರೆ ಇವರು ಸರ್ಕಾರದ ಏಜೆಂಟರಾಗಬಹುದೇ ಹೊರತು, ತಂತಮ್ಮ ಕ್ಷೇತ್ರಗಳ ಘನತೆ–ಸ್ವಾಯತ್ತತೆಗಳನ್ನು ಕಾಪಾಡಲಾರರೇನೋ ಎಂಬ ಆತಂಕ ನನ್ನದು.

ಇಂತಹ ಗುಂಪುಗಳಿಂದ ಸುತ್ತುವರೆಯಲ್ಪಟ್ಟಿರುವ ಸಿದ್ಧರಾಮಯ್ಯ, ಗಬ್ಬೆದ್ದು ಹೋಗಿರುವ ನಮ್ಮ ಸಾಂಸ್ಕೃತಿಕ ಲೋಕಕ್ಕೆ ಅಕಾಡೆಮಿ, ಪ್ರಾಧಿಕಾರ ಇತ್ಯಾದಿ ತಮ್ಮ ಸರ್ಕಾರಿ ಮತ್ತು ಅರೆ ಸರ್ಕಾರಿ ಸಂಸ್ಥೆಗಳ ಮೂಲಕ ಒಂದು ಗೌರವವನ್ನು ಮರಳಿ ತರುವವರೆಂಬ ಭರವಸೆ ಹುಟ್ಟಿಸಿಲ್ಲ. ಅವರು ಹಳೆಯ ನೇಮಕಾತಿಗಳನ್ನು ರದ್ದುಗೊಳಿಸಿದ ರಭಸದ ಮಧ್ಯೆಯೂ ಮುಖ್ಯಮಂತ್ರಿ ಚಂದ್ರು ಎಂಬ ಬುರುಡೆ ದಾಸನನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರನ್ನಾಗಿ ಉಳಿಸಿಕೊಂಡಿರುವ ಅವರ ದೌರ್ಬಲ್ಯದಲ್ಲಿಯೇ ಇದು ಗೊತ್ತಾಗುವಂತಿದೆ. ಇವರು ಕಳೆದೈದು ವರ್ಷಗಳಲ್ಲಿ ಕನ್ನಡಕ್ಕಾಗಿ ಏನು ಕಡಿದು ಕಟ್ಟೆ ಹಾಕಿದ್ದಾರೆಂದು ಈ ಬಿಜೆಪಿ ಅಭ್ಯರ್ಥಿಯನ್ನು ಉಳಿಸಿಕೊಳ್ಳಲಾಗಿದೆ? ಬರೀ ಕನ್ನಡದ ಬೆಡಗು–ಬಿನ್ನಾಣ ಎಂಬ ಭಾರಿ ಟಿ.ಎ–ಡಿ.ಎ.ಗಳ ಹುಸಿ ವಿಚಾರ ಸಂಕಿರಣಗಳು, ಸರ್ಕಾರಿ ಕಛೇರಿಗಳ ಮೇಲಿನ ಸಾಂಕೇತಿಕ 'ದಾಳಿ'ಗಳು, ಗಡಿನಾಡಲ್ಲಿ ಉಚಿತ ಕನ್ನಡ ಪುಸ್ತಕ ವಿತರಣೆ, ಬೆಂಗಳೂರಲ್ಲಿ ಕನ್ನಡ ತೇರುತ್ಸವ ಇತ್ಯಾದಿ ಬರೀ ದುಬಾರಿ ಖರ್ಚು–ವೆಚ್ಚಗಳ ಹುಸಿ ಕೆಲಸಗಳಲ್ಲೇ ತೊಡಗಿರುವ ಖಾಲಿ ತಲೆಯ ಈ ವಿದೂಷಕ ಮಹನೀಯನನ್ನು ಆದಷ್ಟು ಬೇಗ ಅಧಿಕಾರ ತ್ಯಜಿಸಲು ಹೇಳಬೇಕು. ಅವರ ಸ್ಥಾನದಲ್ಲಿ ಕನ್ನಡ ಇಂದು ಹಲವು ನೆಲೆಗಳಲ್ಲಿ ಎದುರಿಸುತ್ತಿರುವ ಸಮಸ್ಯೆಗಳ ಮೂಲವನ್ನು ಗುರುತಿಸಿ ಅವುಗಳನ್ನು ಪರಿಹರಿಸಬಲ್ಲ ಮೂರ್ತ ರೂಪದ ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೆ ತರಬಲ್ಲ ಕಲ್ಪನಾಶಕ್ತಿಯುಳ್ಳ ಕ್ರಿಯಾಶೀಲ ಚಿಂತಕರೊಬ್ಬರನ್ನು ನೇಮಿಸಬೇಕು. ಅದು ಸಾಧ್ಯವಾಗದಿದ್ದಲ್ಲಿ. ಕೇವಲ ರಾಜಕೀಯ ಚೌಕಾಶಿಗಳಿಗಾಗಿ ಬಳಕೆಯಾಗುತ್ತಾ ಕೇವಲ ಅಲಂಕಾರಿಕವಾಗುತ್ತಿರುವ ಈ ಪ್ರಾಧಿಕಾರವನ್ನು ಮುಚ್ಚುವುದೊಳಿತು.



## ಅಣಬೆಗಳಂತೆ ಹುಟ್ಟಿಕೊಂಡಿರುವ ಅಕಾಡೆಮಿಗಳು

ಇನ್ನು ಅಕಾಡೆಮಿಗಳ ಬಗ್ಗೆ ಹೇಳುವುದಾದರೆ, ಸಾಂದರ್ಭಿಕ ರಾಜಕೀಯ ಉದ್ದೇಶಗಳಿಗಾಗಿ ಕಾಂಗ್ರೆಸ್ ಮತ್ತು ಬಿಜೆಪಿ ಸರ್ಕಾರಗಳೆರಡೂ ಅಕಾಡೆಮಿಗಳನ್ನು ಅಣಬೆಗಳಂತೆ ಬೆಳೆಸಿ ಅಕಾಡೆಮಿ ಎಂಬ ಶಬ್ದದ ಅರ್ಥೋದ್ದೇಶಗಳನ್ನೇ ನಾಶ ಮಾಡಿವೆ. ಈ ಹಿಂದೆ ವೀರಪ್ಪ ಮೊಯ್ಲಿಯವರ ಲೋಕಸಭಾ ಕ್ಷೇತ್ರದ ಗೆಲುವಿಗಾಗಿ ತುಳು. ಕೊಂಕಣಿ ಮತ್ತು ಕೊಡವ ಅಕಾಡೆಮಿಗಳನ್ನು ಸ್ಥಾಪಿಸುವ ಪ್ರಸ್ತಾವವನ್ನಿಟ್ಟಾಗ ಆಗ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಜಿ.ಎಸ್. ಶಿವರುದ್ರಪ್ಪನವರು ಅದನ್ನು ಅನುಚಿತ ಎಂದು ವಿರೋಧಿಸಿದ್ದರು. ಈಗಿರುವುದು ಕನ್ನಡ ಸಾಹಿತ್ಯ ಅಕಾಡೆಮಿಯಾಗಿರದೆ, ಕರ್ನಾಟಕ ಸಾಹಿತ್ಯ ಅಕಾಡೆಮಿಯಾಗಿದ್ದು, ಅದು ಕನ್ನಡ ಸಂಸ್ಕೃತಿಯ ಭಾಗವಾಗಿ ಬೆಳೆದು ಬಂದಿರುವ ಎಲ್ಲ ಭಾಷೆಗಳ ಸಾಹಿತ್ಯವನ್ನು ಬೆಳೆಸಿ ಪ್ರೋತ್ಸಾಹಿಸುವ ಉದ್ದೇಶ ಹೊಂದಿರುವಂತಹುದು ಎಂದು ಸೂಚಿಸಿದ್ದರು. ಅದಕ್ಕೆ ತಕ್ಕಂತೆ ಉತ್ತಮ ತುಳು ಸಾಹಿತ್ಯ ಕೃತಿಗಳನ್ನು ಗುರುತಿಸಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ–ಬಹುಮಾನಗಳನ್ನೂ ನೀಡುವ ಪರಿಪಾಠ ಇತ್ತು. ಆದರೆ ಇಂದು ಹೆಚ್ಚು ಸದ್ದಿಲ್ಲದೆ ತುಳು, ಕೊಂಕಣಿ, ಕೊಡವ ಅಕಾಡೆಮಿಗಳೊಂದಿಗೆ ಬಿಜೆಪಿ ಸರ್ಕಾರದ ಅಗ್ಗದ ಸಾಂಸ್ಕೃತಿಕ ರಾಜಕಾರಣದ ಫಲವಾಗಿ ಬ್ಯಾರಿ ಮತ್ತು ಅರೆ ಭಾಷೆಗಳಿಗೂ ಅಕಾಡೆಮಿಗಳು ಸ್ಥಾಪಿತವಾಗಿವೆ! ಇದೇ ಪ್ರವೃತ್ತಿ ಮುಂದುವರೆದರೆ ಲಂಬಾಣಿ, ಸೋಲಿಗ, ಸಿದ್ಧಿ, ಹಾಲಕ್ಕಿ ಒಕ್ಕಲಿಗ, ಹವ್ಯಕ, ಕೋಟ ಕನ್ನಡ ಇತ್ಯಾದಿ 'ಭಾಷೆ'ಗಳಿಗೂ ನಮ್ಮ ಸಾಂಸ್ಕೃತಿಕ ಬಹುತ್ವವಾದಿಗಳ ಶಿಫಾರ್ಸು–ಗಲಾಟೆಗಳ ಮಧ್ಯೆ ಅಕಾಡೆಮಿಗಳು ಸ್ಥಾಪಿತವಾದರೆ ಆಶ್ಚರ್ಯವಿಲ್ಲ.

ನಾನು ಈ ಯಾವ ಭಾಷೆಯನ್ನೂ ಅವಗಣಿಸಿ ಈ ಮಾತುಗಳನ್ನಾಡುತ್ತಿಲ್ಲ. ಪ್ರತಿ ಭಾಷೆಯೂ ಆಯಾ ಭಾಷಿಕರಿಗೆ ಅಭಿಮಾನದ ಆಸ್ತಿಯೇ ಹೌದು. ಈ ಎಲ್ಲ ಭಾಷೆಗಳನ್ನೂ, ಭಾಷಿಕರನ್ನೂ ಹತ್ತಿರದಿಂದ ಕಂಡಿರುವವನು ನಾನು. ಹಾಗೂ ಸುಮಾರಾಗಿ ಈ ಭಾಷೆಗಳ ಸಾಹಿತ್ಯಿಕ ಸಾಮರ್ಥ್ಯ–ಸಾಧ್ಯತೆಗಳನ್ನು ನಾನು ಆಕಾಶವಾಣಿಯ ಕಾರ್ಯಕ್ರಮ ಅಧಿಕಾರಿಯಾಗಿ ವಿವಿಧ ಪ್ರದೇಶಗಳಲ್ಲಿ ಆಯಾ ಭಾಷಿಕರ ಒಡನಾಟದಲ್ಲಿ ಅಂದಾಜು ಮಾಡಿರುವವನು. ಈ ಹಿಂದೊಮ್ಮೆ ಮಂಗಳೂರು ಆಕಾಶವಾಣಿಯ ದಶಮಾನೋತ್ಸವ ಸಮಾರಂಭದಲ್ಲಿ, ಕೆಲವು ತುಳು ಅಭಿಮಾನಿಗಳು ಮಂಗಳೂರು ಆಕಾಶವಾಣಿಯನ್ನು ತುಳು ಆಕಾಶವಾಣಿಯನ್ನಾಗಿ ಪರಿವರ್ತಿಸಬೇಕೆಂದು ಘೋಷಣೆಗಳನ್ನು ಕೂಗಿದಾಗ ಆ ಸಮಾರಂಭದ ಮುಖ್ಯ ಅತಿಥಿಯಾಗಿದ್ದ ಮತ್ತು ತುಳುವರ ನಡುವೆಯೇ ಬದುಕು ನಡೆಸಿದ್ದ ಶಿವರಾಮ ಕಾರಂತರು, ಆ ಘೋಷಣಾಕಾರರನ್ನು ಉದ್ದೇಶಿಸಿ, "ನಿಮ್ಮಲ್ಲಿ ಇಷ್ಟೆಲ್ಲ ಹಣ ಸಂಪತ್ತಿದ್ದರೂ ಒಂದು ಒಳ್ಳೆಯ ತುಳು ಪತ್ರಿಕೆಯನ್ನು ಸ್ಥಿರವಾಗಿ ನಡೆಸಲಾಗುತ್ತಿಲ್ಲ. ಅಂದರೆ ಏನರ್ಥ? ಅದು ಆಡು ಭಾಷೆಯ ಸಾಧ್ಯತೆಯ ಹೊರತಾಗಿ ಇನ್ನಾವ ಸಾಧ್ಯತೆಯನ್ನೂ ತನ್ನ ಪರಿಸರದಲ್ಲಿ ಈವರೆಗೆ ಪ್ರದರ್ಶಿಸಲಾಗದಿರುವ ಭಾಷೆಯಾಗಿಯೇ ಉಳಿದಿದೆ. ನಿಮ್ಮ ಅಭಿಮಾನದ ಹೊರತಾಗಿಯೂ ತುಳುವಿನಲ್ಲಿ ಎಷ್ಟು ಪುಸ್ತಕಗಳು ಬಂದು ಎಷ್ಟು ಓದುಗರನ್ನು ಪಡೆದಿವೆ? ತುಳು ಭಾಷಿಕರ ಅತ್ಯುತ್ತಮ ಭಾಷಾಭಿವ್ಯಕ್ತಿ ಕನ್ನಡದಲ್ಲೇ ಏಕೆ ಕಾಣಿಸಿಕೊಂಡಿದೆ? ಭಾಷೆಯನ್ನು ಕಾಲಾನುಕಾಲದ ಸವಾಲುಗಳಿಗೆ ಸಜ್ಜುಗೊಳಿಸಬೇಕಾದವರು ಆ ಭಾಷೆಯನ್ನಾಡುವ ಜನ. ಆನಂತರ ಬೇಕಾದರೆ ಸರ್ಕಾರದ ಆಶ್ರಯ ಬೇಕಾಗಬಹುದು. ಅದಕ್ಕೆ ಮೊದಲು ಸರ್ಕಾರದ ಸಹಾಯ ಬೇಡುವುದು ರಾಜಕಾರಣ ಮಾತ್ರವಾಗುತ್ತದೆ. ಸಂಸ್ಕೃತಿ ಆಗುವುದಿಲ್ಲ" ಎಂದು ಆ ಘೋಷಣಾಕಾರರ ಬಾಯಿ ಮುಚ್ಚಿಸಿದ್ದರು. ಇಂದು ಕೂಡ ತುಳುವಿನ ಸಾಹಿತ್ಯ ಅಭಿವ್ಯಕ್ತಿ ಸಾಮರ್ಥ್ಯದ ಸ್ಥಿತಿ ಅಷ್ಟೇನೂ ಬದಲಾದಂತಿಲ್ಲ. ಅದಕ್ಕೆ ಅಕಾಡೆಮಿಯೊಂದು ಸ್ಥಾಪಿತವಾದ ಮೇಲೆ ಕೂಡ. ಕನ್ನಡದಲ್ಲಿ ಬರೆದು ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಎಂದೂ ಪುರಸ್ಕೃತರಾಗಲಾರದ ಕೆಲವು ಸಾಹಿತಿಗಳಿಗೆ ಈ ಅಕಾಡೆಮಿಯಿಂದ ಪುರಸ್ಕಾರಗಳು ದೊರೆತಿರಬಹುದು. ಹಾಗೇ ರಾಜಕೀಯ ಸಂಪರ್ಕವಿರುವ ಕೆಲವರು ಈ ಅಕಾಡೆಮಿಗಳ ಅಧ್ಯಕ್ಷ ಅಥವಾ ಸದಸ್ಯರಾಗಿ ಒಣ ಜಂಭದಲ್ಲಿ ಬೀಗಬಹುದು. ಆದರೆ ಅದರಿಂದ ಭಾಷೆಗೇನು ಪ್ರಯೋಜನ?

## ಕರ್ನಾಟಕ ಸಾಹಿತ್ಯ ಅಕಾಡೆಮಿಯೇ ವಿಶಾಲ ವೇದಿಕೆಯಾಗಲಿ

ಇದೇ ಮಾತುಗಳನ್ನು ಈಗಾಗಲೇ ಶುದ್ಧ ರಾಜಕೀಯ ಕಾರಣಗಳಿಗಾಗಿ ಅಕಾಡೆಮೀಕೃತವಾಗಿರುವ ಭಾಷೆಗಳಿಗೂ ಅನ್ವಯಿಸಿ ಹೇಳಬಹುದು. ಈ ಭಾಷೆಗಳು ಕನ್ನಡದ ಸಾಹಚರ್ಯದಲ್ಲಿ, ಅದರ ಹೋಲಿಕೆಯಲ್ಲಿ, ಅದರ ಚರ್ಚೆಗಳ ಬೆಳಕಲ್ಲಿ ತನ್ನ ಜಾಯಮಾನಕ್ಕೆ ಅಗತ್ಯವಾದುದನ್ನು ಹೀರಿಕೊಂಡು ತನ್ನ ಸಾಹಿತ್ಯ ಸಂವೇದನೆಯನ್ನು ಮತ್ತು ಆ ಮೂಲಕ ಅಭಿವ್ಯಕ್ತಿ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕು ಹಾಗೂ ಅದರ ಪರಿಣಾಮವಾಗಿ ತನ್ನದೇ ಓದುಗರನ್ನು ಸಂಪಾದಿಸಿಕೊಳ್ಳಬೇಕು. ಅಲ್ಲಿಯವರೆಗೆ ಈ ಭಾಷೆಗಳು ಕರ್ನಾಟಕ ಸಾಹಿತ್ಯ ಅಕಾಡೆಮಿಯೆಂಬ ವಿಶಾಲ ವೇದಿಕೆಯಡಿಯೇ ತಮ್ಮನ್ನು ಗುರುತಿಸಿಕೊಳ್ಳುವುದು ಒಳ್ಳೆಯದು. ಅವುಗಳದೇ ಅಕಾಡೆಮಿ ಸ್ಥಾಪಿತವಾಗುವ ಕಾಲ ಬರುವವರೆಗೆ ಈ ಭಾಷೆಗಳ ತಲಾ ಒಬ್ಬರೋ ಇಬ್ಬರೋ ಪ್ರತಿನಿಧಿಗಳನ್ನು(ಆಯಾ ಭಾಷಿಕರ ಜನಸಂಖ್ಯೆ ಮತ್ತು ಸಾಹಿತ್ಯದ ಸ್ಥಿತಿಗತಿಗಳನ್ನನುಸರಿಸಿ) ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ನೇಮಿಸಬಹುದು. ತುಳು ತನ್ನದೇ ಎನ್ನುವ ಸಮೃದ್ಧ ಜಾನಪದವನ್ನು ಹೊಂದಿರುವುದರಿಂದ ಯಕ್ಷಗಾನ ಅಕಾಡೆಮಿಯನ್ನು ತುಳು ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯನ್ನಾಗಿ ಮಾರ್ಪಡಿಸಬಹುದು. ಇದೆಲ್ಲವನ್ನೂ ಸರ್ಕಾರ ಪರಿಣಿತರ ಒಂದು ಅಧ್ಯಯನ ಸಮಿತಿ ನೇಮಿಸಿ, ಅದರ ವರದಿಯ ಆಧಾರದ ಮೇಲೆ ಶೀಘ್ರ ನಿರ್ಣಯ ಕೈಗೊಂಡರೆ ಒಳ್ಳೆಯದು. ಇದರಿಂದ ಒಂದು ಸಾಹಿತ್ಯ ಭಾಷೆಯಾಗಿ ವಿಶಾಲ ನೆಲೆಯಲ್ಲಿ ಸಮೃದ್ಧವಾಗಿ ಬೆಳೆದಿರುವ ಉರ್ದು ಭಾಷೆಗಾಗಿರುವ ಅಕಾಡೆಮಿಯನ್ನು ಹೊರತುಪಡಿಸಬಹುದು.



ಭಾಷೆ–ಸಾಹಿತ್ಯ–ಸಂಸ್ಕೃತಿಗಳ ವಿಷಯದಲ್ಲಿ ಈ ಎಲ್ಲ ಹುಚ್ಚಾಟ, ಗೊಂದಲ, ಅನಿಶ್ಚಿತತೆಗಳಿಗೆ ಕಾರಣ, ಸರ್ಕಾರಕ್ಕೆ ಒಂದು ಪುಷ್ಟಿದಾಯಕವಾದ ಸಾಂಸ್ಕೃತಿಕ ನೀತಿ ಎಂಬುದಿಲ್ಲದಿರುವುದು. ಸರ್ಕಾರಕ್ಕೆ ಒಂದು ಸಾಂಸ್ಕೃತಿಕ ನೀತಿ ಎಷ್ಟು ಅಗತ್ಯ ಎಂಬುದನ್ನು ಈ ಮುಖ್ಯಮಂತ್ರಿಗಳಾದರೂ ಆದಷ್ಟು ಬೇಗ ಅರಿತರೆ ಒಳ್ಳೆಯದು. ತಮ್ಮನ್ನು ಲೋಹಿಯಾವಾದಿ ಎಂದು ತಮ್ಮ ಆಪ್ತರ ಬಳಿಯಾದರೂ ಗುರುತಿಸಿಕೊಳ್ಳುವ ಸಿದ್ಧರಾಮಯ್ಯನವರು ಲೋಹಿಯಾ ಸಮಾಜವಾದವನ್ನು ಸಾಂಸ್ಕೃತಿಕ ಸಮಾಜವಾದ ಎಂದೂ ಗುರುತಿಸಲಾಗುತ್ತದೆ ಎಂಬುದನ್ನು ಗಮನಿಸಬೇಕು. ಒಂದು ಆಡಳಿತದ ನಿಜವಾದ ಸಾರ್ಥಕತೆ ಗುರುತಿಸಲ್ಪಡುವುದು ಅದು ಒಟ್ಟಾರೆಯಾಗಿ ಸೃಷ್ಟಿಸುವ ಸಮಾಜದ ಸಾಂಸ್ಕೃತಿಕ ಸಂಪನ್ನತೆಯಿಂದ ಎಂದು ಲೋಹಿಯಾ ನಂಬಿದ್ದರೆಂಬುದನ್ನು ಅವರು ಅರಿಯಬೇಕು.

## ಸಾಂಸ್ಕೃತಿಕ ನೀತಿ ನಿರೂಪಣೆಯ ಅಪಮೌಲ್ಯೀಕರಣ

ದುರಂತವೆಂದರೆ ಈ ಸರ್ಕಾರ ಸಾಂಸ್ಕೃತಿಕ ನೀತಿಯನ್ನು ರೂಪಿಸಲು ನೇಮಕ ಮಾಡಿರುವುದು ಕಳೆದ ಇಪ್ಪತ್ತೈದು ವರ್ಷಗಳಲ್ಲಿ, ನಮ್ಮ ಸಾಹಿತ್ಯ–ಸಂಸ್ಕೃತಿಗಳ ಶಕ್ತಿ–ಸೌಂದರ್ಯಗಳ ತಳಹದಿಯಂತಿರುವ ಅವುಗಳ ವಿಶಿಷ್ಟ ಸ್ವಾಯತ್ತತೆಗಳನ್ನು ತನ್ನ ವಿಕ್ಷಿಪ್ತ ಸಾಮಾಜಿಕ ನ್ಯಾಯ ಪರಿಕಲ್ಪನೆಯ ಪುಢಾರಿ ರಾಜಕಾರಣದ ಮೂಲಕ ನಾಶ ಮಾಡಲೆತ್ನಿಸುತ್ತಿರುವ ಮತ್ತು ನೆನಪಿಡಬಲ್ಲ ಒಂದು ಸಾಲನ್ನೂ ಈವರೆಗೆ ಬರೆಯದಿರುವ 'ಲೇಖಕ' ಮಹಾಶಯರೊಬ್ಬರನ್ನು. ಅಲ್ಲಿಗೆ ಸಾಂಸ್ಕೃತಿಕ ನೀತಿ ಎಂಬುದರ ಕತೆ ಮುಗಿಯಿತಲ್ಲ!

ಇದಕ್ಕೆ ಮುಖ್ಯ ಕಾರಣ ಈ ಮಂತ್ರಿ ಮಂಡಲದಲ್ಲಿ ಕನ್ನಡ–ಸಂಸ್ಕೃತಿಗೆಂದೇ ಓರ್ವ ಮಂತ್ರಿಯಿಲ್ಲದಿರುವುದು. ಅದಕ್ಕಿಂದ ಮುಖ್ಯವಾಗಿ ಅದೊಂದು ಸ್ವತಂತ್ರ ನಿರ್ವಹಣೆ ಬೇಡುವ ವಿಷಯ ಎಂಬ ತಿಳುವಳಿಕೆಯೇ ಕ್ರಮೇಣ ನಮ್ಮ ರಾಜಕಾರಣ ಮತ್ತು ಆಡಳಿತ ವ್ಯವಸ್ಥೆಯಲ್ಲಿ ಕಾಣೆಯಾಗುತ್ತಿರುವುದು. ಈಗ ಮಹಿಳಾ ಮತ್ತು ಶಿಶು ಕಲ್ಯಾಣ ಖಾತೆಯ ಮಂತ್ರಿ ಉಮಾಶ್ರೀ ಅವರಿಗೆ ಇದನ್ನು ಹೆಚ್ಚುವರಿ ಖಾತೆಯನ್ನಾಗಿ ನೀಡಲಾಗಿದೆ. ಆದರೆ ಇವರ ರಂಗಭೂಮಿ ಮತ್ತು ಚಲನಚಿತ್ರ ರಂಗಗಳಲ್ಲಿನ ಅನುಭವದ ಬಗ್ಗೆ ಎಷ್ಟೇ ಒಳ್ಳೆಯ ಮಾತುಗಳನ್ನಾಡಲು ಸಾಧ್ಯವಿದ್ದರೂ(ಇವರ ಚಲನಚಿತ್ರ ರಂಗಕ್ಕೆ ಸಂಬಂಧಿಸಿದಂತೆ ಇಂತಹುದೇ ಮಾತುಗಳನ್ನಾಡಲು ಅಸಾಧ್ಯ ಎಂಬುದು ಬೇರೆ ಮಾತು) ಸಂಸ್ಕೃತಿ ಖಾತೆಯನ್ನು ಯಶಸ್ವಿಯಾಗಿ ನಿರ್ವಹಿಸುವ ಸಾಮರ್ಥ್ಯ ಅವರಿಗಿದೆ ಎಂದು ನಂಬುವುದು ಕಷ್ಟ.


ಈ ಸಾಮರ್ಥ್ಯ ಅವರಿಗಿದ್ದಿದ್ದಲ್ಲಿ ನಮ್ಮ ಅಕಾಡೆಮಿಗಳು, ಪ್ರಾಧಿಕಾರಗಳು, ರಂಗಾಯಣಗಳು ಸರ್ಕಾರದ ಸಾಂಸ್ಕೃತಿಕ ಬೆನ್ನೆಲುಬುಗಳಾಗಿ ಈಗಾಗಲೇ ಕಾರ್ಯ ನಿರ್ವಹಿಸಲಾರಂಭಿಸಬೇಕಿತ್ತು. ಇದು ಸಾಧ್ಯವಾಗಿಲ್ಲವೇಕೆಂದರೆ, ಈ ಸರ್ಕಾರವನ್ನು ಸುತ್ತುವರೆದಿರುವ ಸಾಂಸ್ಕೃತಿಕ ಪುಢಾರಿಗಳ ನೂಕುನುಗ್ಗಲಿನಲ್ಲಿ ಸಮರ್ಥರನ್ನು ಗುರುತಿಸುವುದು ಕಷ್ಟವಾಗುತ್ತಿದೆ. ಹಾಗಾಗಿ, ಎಲ್ಲಕ್ಕಿಂತ ಮೊದಲು ಸಿದ್ಧರಾಮಯ್ಯನವರು ಓರ್ವ ಸಮರ್ಥ ಸಂಸ್ಕೃತಿ ಮಂತ್ರಿಯೊಬ್ಬರನ್ನು ತಮ್ಮ ಮಂತ್ರಿ ಮಂಡಲಕ್ಕೆ ನೇಮಕ ಮಾಡಿಕೊಳ್ಳಬೇಕಿದೆ. ಆತ ತನ್ನ ಸಾಂಸ್ಕೃತಿಕ ತಿಳುವಳಿಕೆ ಮತ್ತು ಪ್ರಬುದ್ಧತೆಗಳ ಮೂಲಕ ಸರ್ಕಾರದ ಬಿಂಬವನ್ನು ನಿರ್ಣಾಯಕವಾಗಿ ಬದಲಿಸಬಲ್ಲವನಾಗಿರುತ್ತಾನೆ.

**–ಡಿ.ಎಸ್. ನಾಗಭೂಷಣ**

## ಪುಸ್ತಕಾವಲೋಕನ

ಪು: **ಸ್ವರಾಜ್ಯ** ಲೇ: **ಅರವಿಂದ ಕೇಜ್ರಿವಾಲ್** ಕನ್ನಡಕ್ಕೆ: **ಪ್ರಿಯದರ್ಶಿನಿ ಭಟ್** ಪ್ರ: **ವಾಸನ್ ಪಬ್ಲಿಕೇಷನ್ಸ್, ಬೆಂಗಳೂರು** ಪು: ೧೮೦ ಬೆಲೆ: **ರೂ. ೯೫/-**

# ಸ್ವರಾಜ್ಯ ನಿಜವಾಗಬಹುದಾದ ಬಗೆ




**ಈ** ಪುಸ್ತಕದ ಒಂದು ಅಧ್ಯಾಯವೊಂದರಲ್ಲಿ ಲೇಖಕ ಅರವಿಂದ್ ಕೇಜ್ರಿವಾಲ್ ಒಂದು ಪ್ರಶ್ನೆಯನ್ನು ಕೇಳುತ್ತಾರೆ, 'ಮಕ್ಕಳ ಬಗ್ಗೆ ಶಿಕ್ಷಣ ಕಾರ್ಯದರ್ಶಿಗೆ ಹೆಚ್ಚು ಪ್ರೀತಿಯೋ ಅಥವಾ ತಂದೆ ತಾಯಿಗಳಿಗೋ?' ಎಂದು. ಈ ಪ್ರಶ್ನೆಯ ಮೂಲಕ ಅವರು ಸ್ವರಾಜ್ಯ ಎಂದರೆ ಏನು ಮತ್ತು ಇದಕ್ಕೂ ಸದ್ಯದ ಪ್ರಾತಿನಿಧಿಕ ಪ್ರಜಾಪ್ರಭುತ್ವಕ್ಕೂ ಇರುವ ವ್ಯತ್ಯಾಸಗಳನ್ನು ಭಾವಪೂರ್ಣವಾಗಿ ನಿರೂಪಿಸಿ ಬಿಡುತ್ತಾರೆ. ಕೇಜ್ರಿವಾಲ್ ಕಳೆದ ಐದಾರು ವರ್ಷಗಳಿಂದ ತಮ್ಮ ಗೆಳೆಯರೊಂದಿಗೆ 'ಸ್ವರಾಜ್ಯ' ಆಂದೋಲನವನ್ನು ನಡೆಸುತ್ತಿರುವವರು. ಅದರ ರಾಜಕೀಯ ಪ್ರಾಯೋಗಿಕತೆಗಾಗಿ ಇತ್ತೀಚೆಗೆ 'ಆಮ್ ಆದ್ಮಿ' ಪಕ್ಷವನ್ನು ಸ್ಥಾಪಿಸಿ ಸುದ್ದಿ ಮಾಡಿರುವವರು. ಆ ಕಾರಣದಿಂದಾಗಿ ತಮ್ಮ ನಾಯಕ, ಮಾರ್ಗದರ್ಶಿ ಅಣ್ಣಾ ಹಜಾರೆಯವರ ನೇತೃತ್ವದ ಭ್ರಷಾಚಾರ ವಿರೋಧಿ ಆಂದೋಲನದಿಂದ ದೂರವಿರಿಸಲ್ಪಟ್ಟಿರುವವರು. ಆದರೆ ಧೃತಿಗೆಡದೆ, ಬರಲಿರುವ ದೆಹಲಿ ವಿಧಾನಸಭಾ ಚುನಾವಣೆಗಳಲ್ಲಿ ತಮ್ಮ ಪಕ್ಷದ ಯಶಸ್ಸಿಗಾಗಿ ಸತತವಾಗಿ ಶ್ರಮಿಸುತ್ತಿರುವವರು.

ವರಮಾನ ತೆರಿಗೆ ಇಲಾಖೆಯಲ್ಲಿ ಉನ್ನತ ದರ್ಜೆಯ ಅಧಿಕಾರಿಯಾಗಿದ್ದ ಅರವಿಂದ್ ಪ್ರಜಾಪ್ರಭುತ್ವವೆನ್ನುವುದೆ ನಮ್ಮ ದೇಶದಲ್ಲಿ ಕ್ರಮೇಣ ಪಕ್ಷ ಪ್ರಭುತ್ವವಾಗಿ ಅವನತಿಗೊಳ್ಳುತ್ತಿರುವ ಅಪಾಯವನ್ನು ಮನಗಂಡು, ನಾಗರಿಕ ಹಕ್ಕುಗಳ ಆಂದೋಲನವನ್ನು ಸಂಘಟಿಸಲು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಮಾಹಿತಿ ಹಕ್ಕು ಕಾಯಿದೆ ಈ ಆಂದೋಲನದ ಫಲವೆಂದೇ ಹೇಳಬಹುದು. ಇದರ ಮುಂದುವರಿಕೆಯಾಗಿ, ಗಾಂಧೀಜಿಯ 'ಹಿಂದ್ ಸ್ವರಾಜ್'ನಿಂದ ಪ್ರಭಾವಿತರಾಗಿ ತಮ್ಮ ಹೋರಾಟವನ್ನು ಸ್ವರಾಜ್ಯ ಆಂದೋಲನವೆಂದು ಕರೆದುಕೊಂಡು ಪ್ರಜಾಪ್ರಭುತ್ವವೆನ್ನುವುದು ನಿಜವಾಗಿ ಪ್ರಭುಗಳ ಪ್ರಭುತ್ವವೆನ್ನಿಸುವುದು ಸ್ವರಾಜ್ಯ ಸ್ಥಾಪನೆಯ ಮೂಲಕ ಮಾತ್ರವೆಂಬ ನಂಬಿಕೆಯಿಂದ ಅದರ ಸಾಕಾರಕ್ಕಾಗಿ ದುಡಿಯುತ್ತಿದ್ದಾರೆ. ಅದನ್ನು ಸಾಮಾನ್ಯ ಜನತೆಗೆ ವಿವರಿಸಲು ಮಾಡಿರುವ ಪ್ರಯತ್ನವೇ ಈ ಪುಸ್ತಕ.

ಈ ಪುಸ್ತಕ ನಮ್ಮ ಸದರಿ ಪ್ರಾತಿನಿಧಿಕ ಪ್ರಜಾಪ್ರಭುತ್ವ ಬೇಜವಾಬ್ದಾರಿತನ, ಅದಕ್ಷತೆ ಮತ್ತು ಭ್ರಷ್ಟಾಚಾರಗಳ ಮೂಲಕ ಹೇಗೆ ಅಧಿಕಾರಶಾಹಿ, ಬಂಡವಾಳಶಾಹಿ ಮತ್ತು ವಿದೇಶೀ ವ್ಯಾಪಾರಶಾಹಿಗಳ ಕೈಗೊಂಬೆಯಾಗಿ ಜನದೂರ ಮತ್ತು ಜನವಿರೋಧಿಯಾಗುತ್ತಿದೆ ಎಂಬುದನ್ನು ಉದಾಹರಣೆಗಳೊಂದಿಗೆ ವಿವರಿಸುತ್ತಾರೆ. ಹಾಗೇ, 'ಸ್ವರಾಜ್ಯ'ದ ಆಶಯದಿಂದ ಸ್ಫೂರ್ತಿಗೊಂಡು ರೂಪಿತವಾದದ್ದೆಂದು ಹೇಳಲಾದ 'ಪಂಚಾಯತ್ ರಾಜ್' ವ್ಯವಸ್ಥೆ ಕೂಡಾ ಸರ್ಕಾರದ ಬಿಗಿ ಹಿಡಿತದಲ್ಲಿ ಸಿಕ್ಕಿ ಹಾಕಿಕೊಂಡು ಹೇಗೆ ಜನರ ಕಣ್ಣಿಗೆ ಮಣ್ಣೆರಚುತ್ತಿದೆ ಎಂಬುದನ್ನು ಮತ್ತೆ ಉದಾಹರಣೆಗಳ ಮೂಲಕ ವಿಷದೀಕರಿಸುತ್ತಾರೆ. ಅದೇ ವೇಳೆಗೆ ಹಲವು ಕಡೆ ಜನರ ಸಂಕಲ್ಪ ಶಕ್ತಿಯಿಂದಾಗಿ ಈ ವ್ಯವಸ್ಥೆ ಯಶಸ್ವಿಯಾಗಿ ಪ್ರಯೋಗಗೊಂಡು ಆಸೆ ಹುಟ್ಟಿಸಿದೆ ಎಂಬುದನ್ನು ತಮ್ಮ ಕ್ಷೇತ್ರಕಾರ್ಯದ ಅನುಭವದ ಭಾಗವಾಗಿ ಹೇಳುತ್ತಾರೆ. ಜೊತೆಗೆ, 'ಸ್ವರಾಜ್ಯ'ದ ಕಲ್ಪನೆಯ ಬಗ್ಗೆ ಇರುವ ಕೆಲವು ಅನುಮಾನಗಳನ್ನು– ಉದಾ: ಇದು ದಲಿತರ ದಮನಕ್ಕೆ ಕಾರಣವಾಗುತ್ತದೆ, ಅದಕ್ಷತೆ, ಭ್ರಷ್ಟಾಚಾರ, ಅರಾಜಕತೆಗೆ ಎಡೆ ಮಾಡಿಕೊಡುತ್ತದೆ ಇತ್ಯಾದಿ–ತಪ್ಪು ತಿಳುವಳಿಕೆಗಳೆಂದು ಪರಿಹರಿಸುವ ಪ್ರಯತ್ನ ಮಾಡುತ್ತಾರೆ. ಕೊನೆಯಲ್ಲಿ ಈ 'ಸ್ವರಾಜ್ಯ' ಒಂದು ಭ್ರಮಾ ಕಲ್ಪನೆಯಾಗಿರದೆ ಈ ದೇಶದಲ್ಲಿ ಹೇಗೆ ವ್ಯಾವಹಾರಿಕವಾಗಿ ಜಾರಿಗೆ ತರಬಹುದೆಂಬುದನ್ನು–ನಿಜ ಅಧಿಕಾರ ವಿಕೇಂದ್ರೀಕರಣದ ರೀತಿ ನೀತಿಗಳನ್ನು–ವೈಧಾನಿಕವಾಗಿ ವಿವರಿಸುತ್ತಾರೆ. ಇದರ ಭಾಗವಾಗಿ 'ನಗರ ರಾಜ್' ಪರಿಕಲ್ಪನೆಯನ್ನೂ ಪ್ರಸ್ತುತಪಡಿಸುತ್ತಾರೆ.

ಈ ಪುಸ್ತಕದ ದೊಡ್ಡ ಯಶಸ್ಸು ಎಂದರೆ, ಗಾಂಧೀಜಿಯ 'ಹಿಂದ್ ಸ್ವರಾಜ್' ಮೀಮಾಂಸೆಯನ್ನು ನಮ್ಮ ಬೌದ್ಧಿಕ ಲೋಕದಲ್ಲೀಗ ಚಾಲ್ತಿಯಲ್ಲಿರುವ ಒಂದು ಅಮೂರ್ತ ಕಲ್ಪನೆಯಂತೆ ಮಾತ್ರ ನೋಡಿ, ಅದನ್ನು ಮನೋಭೂಮಿಕೆಗೆ ಮಾತ್ರ ಸೀಮಿತಗೊಳಿಸಿ, ರೂಪಕ ಮಾತ್ರವಾಗಿ ಕಾಣುವ ಪ್ರವೃತ್ತಿಗೆ ಸಂವಾದಿಯಾಗಿ ಅದು ವ್ಯಾವಹಾರಿಕ ರೂಪದಲ್ಲಿಯೂ ಇಂದು ಪ್ರಸ್ತುತವಾಗಬಲ್ಲುದು ಎಂಬುದನ್ನು ನಮಗೆ ಅಷ್ಟೇ ಮುಖ್ಯವಾಗಿ, ಇಂದು ರಾಷ್ಟ್ರವನ್ನು ಒಳಗಡೆಯಿಂದ ಮತ್ತು ಹೊರಗಡೆಯಿಂದ ನಡೆಯುತ್ತಿರುವ ಲೂಟಿಯಿಂದ ರಕ್ಷಿಸುವ ದಾರಿ ಇದೊಂದೇ ಎಂಬುದನ್ನು ಮನದಟ್ಟು ಮಾಡುತ್ತದೆ. ಪುಸ್ತಕ ಅತಿ ಸರಳ ಶೈಲಿಯಲ್ಲಿದ್ದು, ಕನ್ನಡಕ್ಕೆ ಅಷ್ಟೇ ಸರಳ ಶೈಲಿಯಲ್ಲಿ ಅನುವಾದಿತವಾಗಿದೆ. ಎಲ್ಲರೂ ಓದಬೇಕಾದ ಪುಸ್ತಕವಿದು.

ಆದರೆ ಈ ಪುಸ್ತಕಾದಾಚೆಗೆ ಕೇಜ್ರಿವಾಲ್ ಮತ್ತು ಅವರ ಸ್ನೇಹಿತರ 'ಸ್ವರಾಜ್ಯ' ಆಂದೋಲನ'ದ ಬಗೆಗೆ ಇರುವ ನನ್ನದೊಂದು ತಕರಾರನ್ನೂ ಇಲ್ಲಿ ದಾಖಲಿಸಬೇಕು. ಅದೆಂದರೆ, ಇವರು ತಮ್ಮ 'ಸ್ವರಾಜ್ ಆಂದೋಲನ'ದ ರಾಜಕೀಯ ವೇದಿಕೆಯಾಗಿ ಆರಂಭಿಸಿರುವ ಪಕ್ಷಕ್ಕೆ ಈ ರಾಷ್ಟ್ರದ ಬಹಳ ಜನಕ್ಕೆ ಅಪರಿಚಿತವಾದ ಮತ್ತು ಆತ್ಮೀಯವೆನ್ನಿಸದ ಅಪ್ಪಟ ಹಿಂದಿ ಶಬ್ದವಾದ ಆಂ ಆದ್ಮಿ ಎಂದೇಕೆ ಹೆಸರಿಟ್ಟರು ಎಂಬುದು. 'ಸ್ವರಾಜ್ಯ' ಎಂಬುದು ರಾಷ್ಟ್ರೀಯ ವ್ಯಾಪ್ತಿಯ ಪರಿಕಲ್ಪನೆಯಾಗಿರುವುದಾದರೆ, ಅದರ ಮೂಲ ಭಾವನೆಗೇ ಇದು ಘಾಸಿ ಉಂಟುಮಾಡುವುದಿಲ್ಲವೇ? ಜೊತೆಗೆ, ಇವರು ತಮ್ಮ ಪಕ್ಷವನ್ನು ನಮ್ಮ ರಾಜ್ಯದಲ್ಲಿ ಬೆಳೆಸಲು ಕಳಿಸಿರುವುದಾದರೂ ಎಂತಹ ಜನರನ್ನು? ಕರ್ನಾಟಕದ ಸಂಸ್ಕೃತಿ ಇರಲಿ, ಪ್ರಾಥಮಿಕ ಭೌಗೋಳಿಕತೆಗೇ ಅಪರಿಚಿತರೆನ್ನಿಸುವ, ಹರಕು ಮುರುಕು ಕನ್ನಡ ಮಾತಾಡುವ ಹೈಫೈ ಪಡ್ಡೆಗಳಂತೆ ಕಾಣುವ ಯುವಜನರನ್ನು. 'ಸ್ವರಾಜ್ಯ' ಎಂದರೆ ದೂರವನ್ನು ನಿವಾರಿಸುವ ಸ್ಥಳೀಯತೆಯ ಪರಿಮಳವಲ್ಲವೇ? ಕೇಜ್ರಿವಾಲ್, ಯೋಗೇಂದ್ರ ಯಾದವ್ ಮುಂತಾದವರು ಯೋಚಿಸಬೇಕು.

**–ಡಿ.ಎಸ್. ನಾಗಭೂಷಣ**

ಪ್ರಿಯ ಓದುಗರೇ,

'ಹೊಸ ಮನುಷ್ಯ'ದ ವಾರ್ಷಿಕ ಚಂದಾ, ವ್ಯಕ್ತಿಗಳಿಗೆ ರೂ. ೧೫೦/– ಮತ್ತು ಸಂಸ್ಥೆಗಳಿಗೆ ರೂ. ೨೫೦/– ಆಗಿರುವುದನ್ನು ದಯವಿಟ್ಟು ಗಮನಿಸಿ. ಹಾಗೇ ದಯವಿಟ್ಟು ವಾರ್ಷಿಕ ಚಂದಾ ಮಾತ್ರ ಕಳಿಸಿ. ಹೆಚ್ಚಿನ ಅವಧಿಯ ಚಂದಾ ಸದ್ಯಕ್ಕೆ ಬೇಡ. ಪತ್ರಿಕೆಗೆ ಸಹಾಯ ಮಾಡಬಯಸುವವರು ಬೇಕಾದರೆ, ರೂ. ೫೦೦, ೬೦೦ ಹಾಗೂ ಸಾವಿರ ರೂ. ಗಳ ದರದಲ್ಲಿ ತಮ್ಮ ವೈಯುಕ್ತಿಕ, ಕೌಟುಂಬಿಕ ಅಥವಾ ಸಂಸ್ಥೆಗಳ ಪರವಾಗಿ ಶುಭಾಶಯಗಳ ಜಾಹೀರಾತನ್ನು ನೀಡಬಹುದು. ನಮ್ಮ ಪತ್ರಿಕೆಯು ಶಿವಮೊಗ್ಗದ ಎಸ್,ಬಿ.ಎಂ.ನ ವಿನೋಬನಗರ ಶಾಖೆಯಲ್ಲಿ ಚಾಲ್ತಿ ಖಾತೆಯನ್ನು ಹೊಂದಿದ್ದು ಅದರ ಸಂಖ್ಯೆ : 64110358330 ಆಗಿದ್ದು (IFSC: SBMY0040444), ನಿಮ್ಮ ಪಾವತಿಗಳನ್ನು ಇಲ್ಲಿಗೆ ಜಮಾ ಮಾಡಬಹುದು.

–ಸಂಪಾದಕ

**ಪತ್ರಿಕೆಗೆ ಎರಡು ವರ್ಷಗಳು ತುಂಬಿದ ಸಂದರ್ಭದಲ್ಲಿ**

**ಶುಭವನ್ನು ಕೋರುವ,**

–ಡಾ. ಹಿ.ಶಿ.ರಾಮಚಂದ್ರೇಗೌಡ
ಮತ್ತು ಕುಟುಂಬ
ಮೈಸೂರು

**ಹೊಸ ಮನುಷ್ಯ**'ನಿಗೆ
ಹಾರ್ದಿಕ ಶುಭಾಶಯಗಳು

–ಡಾ. ಎಂ.ಜಿ. ಈಶ್ವರಪ್ಪ
ಮತ್ತು ಕುಟುಂಬ
ದಾವಣಗೆರೆ


ಮೂರನೇ ವರ್ಷಕ್ಕೆ ಯಶಸ್ವಿಯಾಗಿ ಕಾಲಿಡುತ್ತಿರುವ

**ಹೊಸ ಮನುಷ್ಯ** ಸಮಾಜವಾದಿ ಮಾಸಿಕಕ್ಕೆ

ಹಾರ್ದಿಕ ಶುಭಾಶಯಗಳು!

–ಡಾ. ತೀ.ನಂ. ಶಂಕರನಾರಾಯಣ
ಮತ್ತು ಕುಟುಂಬ
ಶಿವಮೊಗ್ಗ

**ತಿಂಗಳ ಸಾಲುಗಳು...**



ನಮಗೆ ದೇವರು ಬೇಕು ದೇವರು ಎನ್ನುತ್ತಾ ಆ ಭಾವನೆಯೊಂದಿಗೆ ನಾವು ಬೆರಸುವ ಅಂಧಶ್ರದ್ಧೆ ಬೇಡ. ಈ ಬೇಡದ ಭಾಗವನ್ನು ಸುಲಿದು ಎಸೆದೆವಾದರೆ ಹತ್ತು ಮತಗಳು ದೇವರು ದೇವರು ಎನ್ನುವ ವಸ್ತು ಒಂದೇ ಎನ್ನುವುದು ವ್ಯಕ್ತವಾಗುತ್ತದೆ.

**ಪತ್ರಿಕೆಗೆ ಶುಭವನ್ನು ಕೋರುವ...**

**– ಬಿ.ಸುರೇಶ**
**ಡಾ. ವಿಜಯಾ**

HOSA MANUSHYA, a kannada monthly solely owned, edited, published and printed by D. S. Nagabhushana, at HIG-5, Kallahally Extn.,Vinoba Nagara, SHIVAMOGGA-577204. Printed at Ila Printers, Bengaluru-560 026 Ph.: 080-26757159

**Regd. News Paper** RNI No. KARKAN/2012/47568
Rgd No. KA/SK/SMG-1209/2013-15

ಇವರಿಗೆ \ To

If undelivered, please return to D.S. Nagabhushana, Editor,
'Hosa Manushya', 'HIG-5, 'Nudi', KallahallExtension,
Vinoba Nagara, Shivamogga -577204 (Karnataka)